ಪುಸ್ತಕ ಪ್ರಪಂಚ

ಸೆಪ್ಟಂಬರ್ ೧[illegible]



ಉಪ್ಪಿನ ಸತ್ಯಾಗ್ರಹಕ್ಕೆ ಹೊರಟ ಗಾಂಧಿಜಿ

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ: ೪೪   ಸಂಚಿಕೆ ೨

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ರಾಜ್ಯ ಸಂಪನ್ಮೂಲ ಕೇಂದ್ರದ ಹತ್ತು ವರ್ಷಗಳು

ರಾಜಾ ಹೊಸನಾಳ

ಆಧುನಿಕ ಜಗತ್ತಿನಲ್ಲಿ ಅಕ್ಷರ ಕಲಿಕೆ ಬದುಕಿನ ಒಂದು ಅಂಗ. ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಂತೂ ಇದರ ಪ್ರಯೋಜನ ಪ್ರತಿಯೊಬ್ಬರಿಗೂ ಇರಲೇಬೇಕಾದ್ದು. ಹಾಗಾಗಿಯೇ ಸರ್ಕಾರ ವಯಸ್ಕರ ಶಿಕ್ಷಣವೂ ಸಹ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದು ಎಂದು ಭಾವಿಸಿ, ಕಾರ್ಯಕ್ರಮ ರೂಪಿಸಿದೆ. ಪ್ರಾಥಮಿಕ ಶಿಕ್ಷಣವನ್ನು ಪಡೆಯದೇ ವಂಚಿತರಾದವರಿಗೆ ವಯಸ್ಕರ ಶಿಕ್ಷಣ ನೀಡಿ ತನ್ಮೂಲಕ ಜನತೆ ಅಭಿವೃದ್ಧಿ ಹೊಂದಲು ಸಹಾಯಕವಾಗುವಂತೆ ರೂಪಿಸಿದೆ. ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಇವೆರಡೂ ಪರಸ್ಪರ ಅವಲಂಬಿಗಳಾಗಿವೆ.

ಅನಕ್ಷರತೆಯು ವ್ಯಕ್ತಿ ವಿಕಾಸ ಮತ್ತು ದೇಶದ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಮಾರಕವಾಗಿದೆ. ಇದನ್ನು ತೊಡೆದು ಹಾಕುವುದು ವಯಸ್ಕರ ಶಿಕ್ಷಣದ ಗುರಿಯಾಗಿದೆ. ಕಲಿಕೆ, ಕೆಲಸ, ಬದುಕು ಇವುಗಳ ಸಂಬಂಧ ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಇವುಗಳು ಒಂದಕ್ಕೊಂದು ಪೂರಕವಾದ-ಗ ಪ್ರತಿಯೊಂದಕ್ಕೂ ಬೆಲೆ ಇದ್ದೇ ಇರುತ್ತದೆ.

ವಯಸ್ಕರ ಶಿಕ್ಷಣದಲ್ಲಿ ಬೋಧನೆಗಿಂತಲೂ ಕಲಿಯುವಿಕೆಗೆ ಪ್ರಾಧಾನ್ಯತೆ ನೀಡಲಾಗಿದೆ. ಅನಕ್ಷರಸ್ಥನ ಕೆಲಸ ಹಾಗೂ ಬದುಕುವ ಸ್ಥಿತಿ ಬೇರೆ ಬೇರೆಯಾದಾಗ ಅವನಿಂದ ಉತ್ಸಾಹ ಪೂರ್ಣ ಪ್ರಮಾಣದಲ್ಲಿ ದೊರೆಯಲಾರದು. ಅವನ ಮನಸ್ಥಿತಿ, ಅಗತ್ಯತೆ, ಕಲಿಯುವ ಅವಧಿ, ಪರಿಸರ—ಮುಂತಾದವುಗಳನ್ನು ಆಧಾರಿಸಿ ಕಲಿಕೆಯ ಸಾಮಗ್ರಿಗಳನ್ನು ರಚಿಸಬೇಕಾಗುತ್ತದೆ. ಇದೊಂದು ಗುರುತರ ಜವಾಬ್ದಾರಿ. ಈ ಗುರುತರ ಜವಾಬ್ದಾರಿಯನ್ನು ೧೯೭೮ ರಿಂದ ಮೈಸೂರಿನಲ್ಲಿರುವ ರಾಜ್ಯ ಸಂಪನ್ಮೂಲ ಕೇಂದ್ರ ನಿರ್ವಹಿಸಿಕೊಂಡು ಬಂದಿದೆ. ಈ ಹತ್ತು ವರ್ಷಗಳ ತನ್ನ ಪ್ರಗತಿ ಹೆಜ್ಜೆಗಳನ್ನು ಗುರುತಿಸಿಕೊಳ್ಳುವ ಹಿನ್ನೆಲೆಯಲ್ಲಿ ದಶಮಾನೋತ್ಸವವನ್ನು ಆಚರಿಸಲಿದೆ.

೧೯೭೮ರಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಅಂದಿನ ಸರ್ಕಾರ ಜಾರಿಗೆ ತಂದಿತ್ತು. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರತಿ ರಾಜ್ಯದಲ್ಲೂ ವಯಸ್ಕರ ಶಿಕ್ಷಣ ನಿರ್ದೇಶನಾಲಯಗಳನ್ನು ತೆರೆಯಿತು. ಜೊತೆಗೆ ಶೈಕ್ಷಣಿಕ ಹಾಗೂ ತಾಂತ್ರಿಕ ಜವಾಬ್ದಾರಿಯನ್ನು ನಿರ್ವಹಿಸುವ ಹಿನ್ನೆಲೆಯಲ್ಲಿ ಪ್ರತಿ ರಾಜ್ಯದಲ್ಲೂ ರಾಜ್ಯ ಸಂಪನ್ಮೂಲ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ಕೇಂದ್ರ ಸರ್ಕಾರವು ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವನ್ನು ೧೯೭೯ರಿಂದ ಸ್ಥಾಪಿಸಿದೆ.

ಈ ಸಂಸ್ಥೆಯೂ ವಯಸ್ಕರ ಶಿಕ್ಷಣಕ್ಕೆ ಬೇಕಾಗುವ ಬೋಧನಾ—ಕಲಿಕೆ ಸಾಮಗ್ರಿಗಳನ್ನು ರಚಿಸುವುದು, ಅಧಿಕಾರಿ ವರ್ಗದವರಿಗೆ ತರಬೇತಿ ನೀಡುವುದು, ಮೌಲ್ಯಮಾಪನೆಯ ಸಾಧನ ಸಿದ್ಧತೆ ಹಾಗೂ ಪರಿಷ್ಕಾರಗಳನ್ನು ನಡೆಸುವುದು ಹಾಗೂ ಸಂಶೋಧನಾ ಕಾರ್ಯ ಕೈಗೊಳ್ಳುವುದು—ಇದರ ಪ್ರಮುಖ ಕೆಲಸವಾಗಿದೆ. ಕೇಂದ್ರ ಸರ್ಕಾರ, ನಿರ್ದೇಶನದ ಸಲಹೆ ಸೂಚನೆಗಳನ್ನು ಆಧಾರಿಸಿ ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅಗತ್ಯಗಳನ್ನು ಪೂರೈಸುತ್ತಾ ಬಂದಿದೆ.

ರಾಜ್ಯ ಸಂಪನ್ಮೂಲ ಕೇಂದ್ರದ ಕಾರ್ಯ ವ್ಯಾಪ್ತಿಯು ಈ ಐದು ಕ್ಷೇತ್ರಗಳಲ್ಲಿದೆ. ೧) ಮೂಲ ಸಾಕ್ಷರತೆ ಸಾಮಗ್ರಿಗಳನ್ನು ರಚಿಸುವುದು ಹಾಗೂ ಮಾಧ್ಯಮ ಬಳಕೆ. ೨) ತರಬೇತಿ ಮತ್ತು ದಾಖಲಾತಿ ಸಂಗ್ರಹ. ೩) ಸಾಮಾನ್ಯ ಚಟುವಟಿಕೆ, ಸಾಕ್ಷರೋತ್ತರ ಮತ್ತು ಮುಂದುವರಿಕೆ ಶಿಕ್ಷಣ. ೪) ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗಾಗಿ ವಿಶೇಷ ಕಾರ್ಯಕ್ರಮ. ೫) ಜನಸಂಖ್ಯಾ ಶಿಕ್ಷಣ (ವಿಶ್ವಸಂಸ್ಥೆಯ ನೆರವಿನ ಯೋಜನೆ.)

ಬೋಧನಾ—ಕಲಿಕೆ ಸಾಮಗ್ರಿಗಳು

ಈ ಕೇಂದ್ರ ವಯಸ್ಕರ ಅಕ್ಷರ ಕಲಿಕೆಯ ಮೂರು ಹಂತಗಳಾದ ಮೂಲ ಸಾಕ್ಷರತೆ, ಸಾಕ್ಷರೋತ್ತರ ಹಾಗೂ ಮುಂದುವರಿಕೆ ಶಿಕ್ಷಣ—ಈ ಕಾರ್ಯಕ್ರಮಗಳಿಗೆ ಪಠ್ಯಪುಸ್ತಕ ರಚಿಸಿದೆ. ಪ್ರಸ್ತುತ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ ಮತ್ತು ರಾಜ್ಯ ಸರ್ಕಾರದ ಅಕ್ಷರಸೇನೆ, ಇವುಗಳ ಜೊತೆಗೆ ಸಾಮೂಹಿಕ ಸಾಕ್ಷರತಾ ಆಂದೋಲನಾ, ಕರ್ನಾಟಕ ಪ್ರಯೋಗ—೧೯೮೯ (ಕರ್ನಾಟಕ ರಾಜ್ಯದ ಆಯ್ದ ೨೦ ತಾಲ್ಲೂಕುಗಳಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸುವುದು) ಎನ್ನುವ ವಿಶೇಷ ಕಾರ್ಯಕ್ರಮ—ಈ ಕಾರ್ಯಕ್ರಮಗಳ ಅವಧಿಯನ್ನು ಆಧಾರಿಸಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಿ, ಪ್ರತಿ ಕಾರ್ಯಕ್ರಮಗಳಿಗೂ ಪಠ್ಯಪುಸ್ತಕಗಳನ್ನು ರಚಿಸಿದೆ. ಇದೂ ಅಲ್ಲದೆ ಕಲಿಯುವವರ ಆಸಕ್ತಿ ಮತ್ತು ಅಭಿರುಚಿಯನ್ನು ಗುರುತಿಸಿ ಪಠ್ಯಪುಸ್ತಕ ರಚಿಸಬೇಕೆನ್ನುವ ಹಿನ್ನೆಲೆಯಲ್ಲಿ ಮಹಿಳೆಯರಿಗಾಗಿಯೇ 'ಬಾ ತಾಯಿ ಕಲಿಯೋಣ' ಎನ್ನುವ ಪಠ್ಯಪುಸ್ತಕ ರಚಿಸಿದೆ. ಹಾಗೆಯೇ ಜನತೆಯನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಆಕರ್ಷಿಸಲು ಆಡು ಮಾತಿನ ಭಾಷೆಯಲ್ಲೆ ಪಠ್ಯಗಳನ್ನು ರಚಿಸಬೇಕೆನ್ನುವ ಅಂಶವನ್ನು ಆಧಾರಿಸಿ ಕನ್ನಡದ ಉಪಭಾಷೆಯಾದ 'ಧಾರವಾಡ

ಕನ್ನಡ'ದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಬೇರೆಬೇರೆ ಪಠ್ಯಪುಸ್ತಕಗಳನ್ನು ರಚಿಸಿದೆ. ಇವು ಅಚ್ಚಿಗೆ ಸಿದ್ಧವಾಗಿವೆ.

ಈ ಎಲ್ಲಾ ಪಠ್ಯಪುಸ್ತಕಗಳಿಗೆ ಪೂರಕವಾಗಿ ಚಿತ್ರಪಟ, ಅಭ್ಯಾಸ ಪುಸ್ತಕ, ವ್ಯವಹಾರ ಗಣಿತ, ಸುಲಭ ಲೆಕ್ಕಾಚಾರ, ಉಪಾಧ್ಯಾಯರ ಕೈಪಿಡಿ—ಮುಂತಾದವು ಗಳನ್ನು ರಚಿಸಿ, ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಸರಬರಾಜು ಮಾಡುತ್ತಿದೆ. ಜೊತೆಗೆ ಸಾಕ್ಷರೋತ್ತರ ಕಾರ್ಯಕ್ರಮಕ್ಕಾಗಿ 'ಬಾಳಿನ ಬೆಳಕು' ಎನ್ನುವ ಓದುವ ಪುಸ್ತಕ ಹಾಗೂ 'ಬದುಕಿನದಾರಿ' ಎನ್ನುವ ಅಭ್ಯಾಸ ಪುಸ್ತಕಗಳನ್ನು ರಚಿಸಿದೆ.

ಲಿಟರಸಿ ಕಿಟ್

ಕೇವಲ ೧೫೦ ಗಂಟೆಗಳಲ್ಲಿ ಮೂಲ ಸಾಕ್ಷರತೆ ಪಡೆಯಲು ಸಾಧ್ಯವಾಗುವಂತೆ ರಚಿತವಾದ ಬೋಧನಾ—ಕಲಿಕೆ ಸಾಮಗ್ರಿಗಳನ್ನು ತುಂಬಿರುವ ಪ್ಲಾಸ್ಟಿಕ್ ಚೀಲವನ್ನು ಸಾಕ್ಷರತಾ ಸಂಚಿ (ಲಿಟರಸಿ ಕಿಟ್) ಎಂದು ಕರೆಯಲಾಗುತ್ತಿದೆ. ಇದುವರೆವಿಗೂ ಸುಮಾರು ೫ ಲಕ್ಷಕ್ಕೂ ಮೀರಿ ಲಿಟರಸಿ ಕಿಟ್‌ಗಳನ್ನು ಸರಬರಾಜು ಮಾಡಿ ವಿತರಿಸ ಲಾಗಿದೆ.

ತರಬೇತಿ :

ವಯಸ್ಕರ ಶಿಕ್ಷಣ ಕಾರ್ಯಕ್ರಮದ ಯಶಸ್ಸು ಪರಿಣಾಮಕಾರಿ ತರಬೇತಿಯನ್ನು ಅವಲಂಬಿಸಿದೆ ಎಂದರೂ ತಪ್ಪಾಗಲಾರದು. ಈ ತರಬೇತಿಯನ್ನು ರಾಜ್ಯ ಸಂಪನ್ಮೂಲ ಕೇಂದ್ರ ನೀಡುತ್ತಾ ಬಂದಿದೆ. ಕ್ಷೇತ್ರ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನದ ಜವಾಬ್ದಾರಿ ಹೊತ್ತ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಯೋಜನಾಧಿಕಾರಿಗಳು, ಸಹಾಯಕ ಯೋಜನಾಧಿಕಾರಿಗಳು, ಮೇಲ್ವಿಚಾರಕರು, ಪ್ರೇರಕರು—ಇವರಿಗೆ ೨೧ ದಿನಗಳ ತರಬೇತಿಯನ್ನು ಎರಡು ಹಂತಗಳಲ್ಲಿ ಕಡ್ಡಾಯವಾಗಿ ನೀಡುತ್ತಾ ಬಂದಿದೆ. ಜೊತೆಗೆ ಆಯಾಯ ಅಧಿಕಾರಿಗಳ ಕಾರ್ಯವ್ಯಾಪ್ತಿ, ಅಗತ್ಯತೆಗಳನ್ನು ಗುರುತಿಸಿ ತರಬೇತಿ ವಿಧಾನಗಳನ್ನು ಅಭಿವೃದ್ಧಿಪಡಿಸಿದೆ. ಈ ಕೇಂದ್ರದ ತರಬೇತಿ ವ್ಯಾಪ್ತಿಗೆ, ಸರ್ಕಾರ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಾದ ಲೋಕ ಶಿಕ್ಷಣ ಇಲಾಖೆ, ವಯಸ್ಕರ ಶಿಕ್ಷಣ ಸಮಿತಿ, ವಿಶ್ವವಿದ್ಯಾನಿಲಯಗಳ ವಯಸ್ಕರ ಶಿಕ್ಷಣ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಎರಡನೆ ಹಂತದ ಎನ್. ಎಸ್. ಎಸ್., ಸ್ವಯಂ ಸೇವಾ ಸಂಸ್ಥೆಗಳು ಹಾಗೂ ನೆಹರು ಯುವಕ ಕೇಂದ್ರಗಳು ಬರುತ್ತವೆ. ಈ ಸಂಸ್ಥೆಗಳ ಅಧಿಕಾರಿಗಳಿಗೆ ಅಗಿಂದ್ದಾಗೆ ತರಬೇತಿ ನೀಡುತ್ತದೆ.

ಜನಶಿಕ್ಷಣ ನಿಲಯಗಳು :

ಸಾಕ್ಷರತಾ ಕೌಶಲ್ಯಗಳು ಮರೆಯದಂತೆ ಉಳಿಸಿಕೊಂಡು ಹೋಗುವುದಕ್ಕಾಗಿ ಮುಂದುವರಿಕೆ ಶಿಕ್ಷಣವನ್ನು ಜನಶಿಕ್ಷಣ ನಿಲಯಗಳ ಮೂಲಕ ನೀಡಲಾಗುತ್ತಿದೆ. ಪ್ರತಿ

೫೦೦೦ ಜನಸಂಖ್ಯೆಯುಳ್ಳ ೪-೫ ಗ್ರಾಮಗಳನ್ನು ಒಳಗೊಂಡಂತೆ ಒಂದು ಜನಶಿಕ್ಷಣ ನಿಲಯವನ್ನು ತೆರೆಯಲಾಗಿದೆ. ಇಲ್ಲಿ ಸಂಜೆ ಶಾಲೆ, ಪುಸ್ತಕ ಭಂಡಾರ, ವಾಚನಾಲಯ, ಚರ್ಚಾಮಂಡಲಿ, ತರಬೇತಿ, ಕ್ರೀಡೆ ಮತ್ತು ಸಾಹಸ ಕಾರ್ಯಕ್ರಮಗಳು, ಸಾಂಸ್ಕೃತಿಕ ಮನರಂಜನೆ ಕಾರ್ಯಕ್ರಮಗಳು, ವಿಚಾರ ವಿನಿಮಯ, ಸುದ್ದಿ ಸಾರುವ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿವೆ. ಇಂತಹ ೮೦೦ ಜನಶಿಕ್ಷಣ ನಿಲಯಗಳು ರಾಜ್ಯದಲ್ಲಿವೆ. ಇವುಗಳಿಗೆ ಸುಮಾರು ೨೫ ಲಕ್ಷ ರೂ.ಗಳ ಬೆಲೆಯ ಪುಸ್ತಕಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ದು ರಾಜ್ಯ ಸಂಪನ್ಮೂಲ ಕೇಂದ್ರ ಸರಬರಾಜು ಮಾಡಿದೆ.

ದೃಕ್—ಶ್ರವಣ ಸಾಮಗ್ರಿಗಳು :

ಈ ಕೇಂದ್ರ ದೃಕ್-ಶ್ರವಣ ಸಾಮಗ್ರಿಗಳನ್ನು ರಚಿಸಿ, ಹೊರತರುವಲ್ಲೂ ಶ್ರಮಿಸಿದೆ. ನಾನಾ ಬಗೆಯ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಂಡಿದೆ. ಪ್ರಸ್ತುತ ಬೆಂಗಳೂರು ದೂರದರ್ಶನ ಕೇಂದ್ರವು ರಾಜ್ಯ ಸಂಪನ್ಮೂಲ ಕೇಂದ್ರದಿಂದ ರಚಿತವಾದ ವಯಸ್ಕರ ಶಿಕ್ಷಣದ ಸಂದೇಶವನ್ನು ಸಾರುವ ಸ್ಲೈಡ್‌ಗಳನ್ನು ಬಿತ್ತರಿಸುತ್ತಿದೆ. ಹಾಗೆಯೇ ಆಕಾಶವಾಣಿಯು ಆಗಾಗ ರೇಡಿಯೋ ತುಣುಕುಗಳನ್ನೂ ಪ್ರಸಾರ ಮಾಡುತ್ತಿದೆ. ಜೊತೆಗೆ ಭಿತ್ತಿ ಪತ್ರ, ಪುಸ್ತಿಕೆಗಳು, ಸ್ಟಿಕರ್—ಮುಂತಾದವುಗಳ ಮೂಲಕ ಪ್ರಚಾರಾಂದೋಲನವನ್ನು ನಿರಂತರವಾಗಿ ನಡೆಸುತ್ತಾ ತನ್ನದೇ ಆದ ಇತಿಮಿತಿಯಲ್ಲಿ ಕಾರ್ಯ ನಿರ್ವಹಿಸಿದೆ.

ಹಾಗೆಯೇ ರಾಜ್ಯದ ಹೆಸರಾಂತ ಕವಿಗಳಿಂದ ಬರೆಸಿರುವ ಹಾಡುಗಳಿಗೆ ಬಿ. ವಿ. ಕಾರಂತರು ಸಂಗೀತ ನೀಡಿರುವ "ಸಾಕ್ಷರ ಬದುಕೇ ಸಂಪನ್ನ" ಎನ್ನುವ ಧ್ವನಿ ಸುರುಳಿಯನ್ನು ಹೊರತಂದಿದೆ. ಹಾಗೂ ಈ ಹಾಡುಗಳ ಸಂಕಲನವನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಿದೆ.

ಮಾರ್ಗದರ್ಶಿ ಎನ್ನುವ ಕಿರುಚಿತ್ರವನ್ನು ಕ್ಷೇತ್ರಕಾರ್ಯಕರ್ತರಿಗೆ ಜನಸಂಖ್ಯಾ ಶಿಕ್ಷಣದ ಮಹತ್ವವನ್ನು ಮನದಟ್ಟು ಮಾಡಿಕೊಡುವ ಉದ್ದೇಶದಿಂದ ತಯಾರಿಸಿದೆ.

ಹೊಸ ಓದುಗರ ಸಾಹಿತ್ಯ :

ಬರೀ ಅಕ್ಷರ ಕಲಿತರಷ್ಟೆ ಸಾಲದು, ಕಲಿತ ಅಕ್ಷರಗಳನ್ನು ಕ್ರಿಯಾತ್ಮಕವಾಗಿ ಬಳಸಿಕೊಂಡು ಹೆಚ್ಚು ಹೆಚ್ಚು ಅರಿವನ್ನು ಪಡೆಯಲು ಸಹಾಯಕವಾಗುವ ಸಾಹಿತ್ಯ ರಚಿಸುವುದು ಕೂಡ ರಾಜ್ಯ ಸಂಪನ್ಮೂಲ ಕೇಂದ್ರದ ಕೆಲಸವಾಗಿದೆ. ಅದಕ್ಕಾಗಿ ವಿವಿಧ ವಿಷಯಗಳನ್ನು ಆಧರಿಸಿ ಕಮ್ಮಟಗಳ ಮೂಲಕ ಸಾಹಿತ್ಯ ರಚಿಸಿ ಹೊರತಂದಿದೆ. ಈ ನಿಟ್ಟಿನಲ್ಲಿ ಗಾದೆಗಳು, ಅಂಬೇಡ್ಕರ್, ಆಕಾಶ ಪ್ರಯಾಣ, ಗ್ರಾಮೀಣ ಬ್ಯಾಂಕು, ನಮ್ಮೂರಿಗೂ ಬಂತು ಸಹಕಾರ ಸಂಘ—ಇತ್ಯಾದಿ ೨೫ ಪುಸ್ತಕಗಳನ್ನು ಆಕರ್ಷಕವಾಗಿ ಮುದ್ರಿಸಿ ಪ್ರಕಟಿಸಿದೆ.

ಜನಸಂಖ್ಯಾ ಶಿಕ್ಷಣ ಕುರಿತು ಚಿತ್ರಪಟ, ಸ್ಲೈಡ್ ಹಾಗೂ ಸುಮಾರು ೨೦ ಕಿರು ಹೊತ್ತಿಗೆಗಳನ್ನು ಪ್ರಕಟಿಸಿದೆ. ಹೆಬ್ಬಾಳು ಕೃಷಿ ವಿಶ್ವವಿದ್ಯಾನಿಲಯದ ಸಹಯೋಗ

ದೊಂದಿಗೆ ಖುಷ್ಕಿ ಭೂಮಿ ಅಭಿವೃದ್ಧಿಯನ್ನು ಕುರಿತು ಐದು ಪುಸ್ತಕಗಳನ್ನು ಪ್ರಕಟಿಸಿದೆ. ಇತ್ತೀಚೆಗೆ ಮೈಸೂರು, ಮಂಗಳೂರು, ಕುವೆಂಪು, ಕರ್ನಾಟಕ ಹಾಗೂ ಗುಲಬರ್ಗಾ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಜ್ಞಾನಸುದವನ್ನು ಕುರಿತು ಐದು ಬೇರೆ ಬೇರೆ ಕಾರ್ಯಾಗಾರಗಳನ್ನು ನಡೆಸಿ, ವಿವಿಧ ವಿಷಯಕ್ಕೆ ಸಂಬಂಧಿಸಿದ ಒಟ್ಟು ೬೦ ಹಸ್ತ ಪ್ರತಿಗಳನ್ನು ಸಿದ್ಧಪಡಿಸಿದೆ. ಅವು ಸಧ್ಯದಲ್ಲೆ ಅಚ್ಚಿನ ಮನೆಯಿಂದ ಹೊರಬರಲಿವೆ.

ಜಪಾನ್‌ನಲ್ಲಿರುವ ಏಷ್ಯಾ ಸಾಂಸ್ಕೃತಿಕ ಕೇಂದ್ರ ಸಹಯೋಗದೊಂದಿಗೆ ಕಾರ್ಯಾಗಾರವನ್ನು ನಡೆಸಿ ಸಾಹಿತ್ಯ ಸಾಮಗ್ರಿಗಳನ್ನು ಹೊರತಂದಿದೆ. ಜೊತೆಗೆ ಎರಡು ಪುಸ್ತಕಗಳನ್ನು ಕನ್ನಡದಲ್ಲಿ ತರಲು ಧನಸಹಾಯವೂ ಬಂದಿದೆ. ರಾಜ್ಯದ ಬೇರೆ ಬೇರೆ ಸಂಸ್ಥೆಗಳ, ಪ್ರಕಾಶಕರ ಸಹಯೋಗದೊಂದಿಗೆ ಹಳ್ಳಿಗಾಡು ಜನತೆಗೆ ಅಗತ್ಯವಾದ ದಿನನಿತ್ಯದ ವಿಜ್ಞಾನ, ಗ್ರಾಮೀಣ ತಾಂತ್ರಿಕತೆಗಳ ಬಗ್ಗೆ ಸರಳವಾದ ಕನ್ನಡದಲ್ಲಿ ಪುಸ್ತಕಗಳನ್ನು ರಚಿಸುವ ಯೋಜನೆಯನ್ನು ಕೇಂದ್ರ ಹೊಂದಿದೆ. ಹೀಗೆ ಅನೇಕ ಆಶಾದಾಯಕ ಯೋಜನೆಗಳನ್ನು ತನ್ನ ಮುಂದಿರಿಸಿಕೊಂಡಿರುವ ಕೇಂದ್ರ, ಗ್ರಾಮಾಂತರ ಪ್ರದೇಶದಲ್ಲಿ ಹೊಸ ಅರಿವು ಮತ್ತು ಕ್ರಿಯಾಶೀಲತೆಯನ್ನು ಉಂಟು ಮಾಡುವ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡು ಮುನ್ನಡೆದಿದೆ.

ನಿಜವಾದ ಸಮಾಜವಾದವು ನಮಗೆ ನಮ್ಮ ಪೂರ್ವಜರಿಂದ ಪರಂಪರಾಗತವಾಗಿ ಬಂದಿದೆ. "ಸಭೀ ಭೂಮಿ ಗೋಪಾಲಕಿ" "ಭೂಮಿ ಎಲ್ಲ ಪರಮಾತ್ಮನದು" ಎಂದು ಅವರು ನಮಗೆ ಕಲಿಸಿದ್ದಾರೆ. ಅಂದ ಮೇಲೆ "ನನ್ನದು, ನಿನ್ನದು, ಎಂಬ ಹಕ್ಕಿನ ರೇಖೆಗೆ ಸ್ಥಾನವೆಲ್ಲಿದೆ? ಇಂಥ ಹಕ್ಕಿನ ಗಡಿಯನ್ನು ಮನುಷ್ಯನೇ ಉಂಟು ಮಾಡಿದನು. ಆದುದರಿಂದ ಅವನು ಅದನ್ನು ತೆಗೆದುಹಾಕಬಲ್ಲನು.

· ಗಾಂಧೀಜಿ

ವಿಜಯ ಮರ್ಚಂಟರ ಎರಡು ಇನಿಂಗ್ಸ್

ಲೇ : ವಿ. ಗಂಗಾಧರ್ ಅನು : ಡಾ|| ಸತ್ಯನಾರಾಯಣಭಟ್ಟ

"ತಮ್ಮ ಜೀವನದ ಮೊದಲರ್ಧ ಅವರು ಅಪ್ರತಿಮ ಕ್ರಿಕೆಟಿಗರೆನಿಸಿದರು. ಉಳಿದರ್ಧ ಅಂಗವಿಕಲರಿಗಾಗಿ ದಣಿಯದೆ ದುಡಿದ ಸಾಯಕರೆನಿಸಿದರು."

ಮನಿಷಾ ನಾಸ್ಕಿ ಕರಾನಿ ತುಂಬ ಚಿಂತೆಗೀಡಾಗಿದ್ದಳು. ಹತ್ತೊಂಬತ್ತು ವರ್ಷದ ಪೋಲಿಯೋಗ್ರಸ್ಥೆ ಮನಿಷಾಳು ಮುಂಬೈಯ ಗ್ರಾಂಟ್ ಮೆಡಿಕಲ್ ಕಾಲೇಜಿನ ಪ್ರಯೋಗಾಲಯ ತಂತ್ರವಿದ್ಯೆ ಡಿಪ್ಲೋಮಕ್ಕೆ ಸೀಟು ಗಿಟ್ಟಿಸಿದ್ದಳು. ಆರು ವಾರ ಕಳೆದರೂ ಕಾಲೇಜಿನಿಂದ ಗುರುತುಚೀಟಿ ಸಿಗಲಿಲ್ಲ. ರೈಲು ವಿನಾಯಿತಿಗೆ ಸಲ್ಲಿಸಿದ್ದ ಅರ್ಜಿ ಉಪೇಕ್ಷಿಸಿದ ಕಾರಕೂನರು ಆಕೆಯ ಸೀಟು ರದ್ದಾಗುವ ಸುಳಿವುಕೊಟ್ಟರು. ಮಾಜಿ ಟೆಸ್ಟ್ ಕ್ರಿಕೆಟಿಗ ವಿಜಯಮರ್ಚಂಟರನ್ನು ಕಾಣಲು ಸೂಚಿಸಿದ ಸೋದರಿ ರಂಜನಳು ಅವರಿಗೆ ಅಂಗವಿಕಲರ ಬಗ್ಗೆ ಇರುವ ಕಾಳಜಿ ಕುರಿತು ಹೇಳಿದಳು. ಮನಿಷಾ ತನ್ನ ಸಮಸ್ಯೆ ಮರ್ಚಂಟರ ಮುಂದಿಟ್ಟಳು. ಕತ್ತರಿಸಿದ ಮೀಸೆಯ ಶಿಸ್ತಿನ ಸಣ್ಣ ಆಳು ಮರ್ಚಂಟರು ಕಾಲೇಜಿನ ಮುಖ್ಯಸ್ಥರಿಗೆ ದೂರವಾಣಿಯ ಕರೆ ಮಾಡಿ ಭೇಟಿ ಗೊತ್ತು ಪಡಿಸಿದರು. ಭೇಟಿ ನಿಷ್ಫಲ. ಎರಡು ವಾರದ ಬಳಿಕ ಎರಡು ಗೆರೆಯ ಪತ್ರದಲ್ಲಿ ಮನಿಷಾಳ ಪ್ರವೇಶ ರದ್ದಾದ ಒಕ್ಕಣೆ ಬಂತು. ನಾವು ಹೋರಾಡುವಾ ಎಂದು ಆಶ್ವಾಸನೆ ನೀಡಿದ ಮರ್ಚಂಟರು ತಮ್ಮ ವಕೀಲ ಮಿತ್ರ ಜಸ್ವಂತಥಾಕರರ ಮೂಲಕ ಕೊನೆಗೊಮ್ಮೆ ಮುಂಬೈ ಹೈಕೋರ್ಟ್‌ನಲ್ಲಿ ಪ್ರವೇಶ ರದ್ಧತಿ ಪ್ರಶ್ನಿಸಿ ರಿಟ್ ಸಲ್ಲಿಸಿದರು. ೧೯೮೫ ರ ಜನವರಿ ೩೧ ಕ್ಕೆ ಹಿಯರಿಂಗ್ ನಡೆಯಿತು. ತಪ್ಪೊಪ್ಪಿಗೆ ಹೇಳಿಕೆ ನೀಡಿದ ಕಾಲೇಜಿಗೆ ಮರುಪ್ರವೇಶ ಪಡೆದೆ

೧೯೮೬ ರ ಏಪ್ರಿಲ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಅನುವಾದ.

ಎಂದು ಮನಿಷಾ ನೆನಪಿಸಿಕೊಂಡಳು. ಹನ್ನೊಂದು ತಿಂಗಳ ಬಳಿಕ ಮುಂಬೈ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನದಲ್ಲಿ ಪಾಸಾದ ಮನಿಷಾಳನ್ನು ಅಭಿನಂದಿಸಲು ಮರ್ಚಂಟರು ಹಾಜರು.

೧೯೮೭ ಅಕ್ಟೋಬರ್ ೨೭ ರಂದು ಗತಿಸಿದ ಮರ್ಚಂಟರ ಅಗಲಿಕೆ ಮನಿಷಾಳಂತಹ ಸಾವಿರಾರು ಅಂಗವಿಕಲರಿಗೆ ಅಪ್ರತಿಮ ಕ್ರಿಕೆಟಿಗನೊಬ್ಬನ ನಷ್ಟಕ್ಕಿಂತ ಹೆಚ್ಚಿನದು. ಕಷ್ಟದಲ್ಲಿದ್ದಾಗ ತಮ್ಮ ದುಗುಡ ನೀಗಿಸುವ ನೆಚ್ಚಿನ ಹಿರಿಯಣ್ಣ ವಿಜಯಭಾಯಿಯ ಅಗಲಿಕೆ. ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಮರ್ಚಂಟರ ಸರಾಸರಿ ೭೧–೬೪. ಇತಿಹಾಸ ಪ್ರಸಿದ್ಧ ಡಾನ್ ಬ್ರಾಡ್‌ಮನ್‌ರ ಅನಂತರದ ಸ್ಥಾನ. ತಮ್ಮ ಜೀವನದ ಮೂರು ದಶಕ ಅಂಗವಿಕಲರ ಸ್ಥಾನಮಾನಕ್ಕೆ ಮುಡಿಪಾಗಿಟ್ಟರು. ಪ್ರಯೋಗಾಲಯವೊಂದರ ಉದ್ಯೋಗಿ ಮನಿಷಾ ತಾನೆಂದೂ ವಿಜಯಭಾಯಿಯನ್ನು ಮರೆಯೆ ಎಂದು ಇಂದು ಅನ್ನುತ್ತಿದ್ದಾಳೆ. ಅವರಿಲ್ಲದಿದ್ದರೆ ತನಗೇನೂ ಸಾಧಿಸಲಾಗುತ್ತಿರಲಿಲ್ಲ ಎಂದು ಅವಳ ಹೇಳಿಕೆ.

೧೯೨೧ ಅಕ್ಟೋಬರ ೧೨ ರಂದು ಮರ್ಚಂಟರು ಮುಂಬೈಯಲ್ಲಿ ಜನಿಸಿದರು. ಕ್ರೀಡೆ ಮತ್ತು ಸಮಾಜ ಸೇವೆ ಪರಂಪರೆಯ ಕಚ್ ಮೂಲದ ಜವಳಿ ಉದ್ದಿಮೆ ಕುಟುಂಬದಲ್ಲಿ ಅವರ ಜನನ. ಎಳೆಯ ಮರ್ಚಂಟ ಕುಟುಂಬದ ಉತ್ತಮ ಆಟಗಾರ. ಒಂಬತ್ತನೆ ವಯಸ್ಸಿನಲ್ಲಿ ಆಟ ಪ್ರಾರಂಭಿಸಿದ್ದು ೧೯೨೯ ರಲ್ಲಿ ಕಾಲೇಜು ತಂಡ ಪ್ರತಿನಿಧಿಸಿ ತರುವಾಯ ಮುಂಬೈಯ 'ಹಿಂದೂ ತಂಡ'ದಲ್ಲಿ ಅತ್ಯಂತ ಕಿರಿಯ ಆಟಗಾರರೆನಿಸಿದರು. ಕೇವಲ ಮೂರು ವರ್ಷ ಕಳೆದ ಬಳಿಕ ಭಾರತ ಟೀಮನ್ನು ಪ್ರವೇಶಿಸಿದರು. ರಾಜಕೀಯ ಕಾರಣಕ್ಕಾಗಿ ೧೯೩೨ ರಲ್ಲಿ ಇಂಗ್ಲೆಂಡ್ ವಿರುದ್ಧ ಆಡುವ ಅವಕಾಶ ತ್ಯಜಿಸಿದರು. ಆಗತಾನೇ ಗಾಂಧಿಯ ಅಸಹಕಾರ ಆಂದೋಲನ ಆರಂಭವಾಗಿತ್ತು. ದೇಶದ ಹಲವು ಧುರೀಣರು ಸೆರೆಯಲ್ಲಿದ್ದರು.

೧೯೩೩ರ ಡಿಸೆಂಬರ್‌ನ ಪಂದ್ಯದಲ್ಲಿ ಮುಂಬೈ ವಲಯದ ಪ್ರತಿನಿಧಿಯಾಗಿ ಕ್ಷೇತ್ರ ಪಾಲನೆ ನಡೆಸಿದ್ದರು. ಗದ್ದಕ್ಕೆ ಚೆಂಡು ಬಿದ್ದು ಹೊಲಿಗೆ ಬಿತ್ತು. ಮರ್ಚಂಟರು ಬ್ಯಾಟಿಂಗ್‌ನಲ್ಲಿ ಕ್ರಮವಾಗಿ ೧೯ ಮತ್ತು ೬೭ ಓಟ ಗಳಿಸಿದರು. ಎರಡು ಬಾರಿಯೂ ಔಟಾಗಲಿಲ್ಲ. ಪ್ರವಾಸದ ಮೂರು ಪಂದ್ಯದಲ್ಲೂ ಪಾಲ್ಗೊಂಡರು. ಇಂಗ್ಲೆಂಡ್ ನಾಯಕ ಡೌಗ್ಲಾಸ್ ಜಾರ್ಡಿನ್ ಮರ್ಚಂಟರ ಆಟದಿಂದ ಪ್ರಭಾವಿತನಾದ. ಭಾರತದ ಉತ್ತಮ ಆಟಗಾರರೆಂದು ಕರೆದ. ೧೯೩೬ಕ್ಕೆ ಮರ್ಚಂಟರು ಪ್ರಥಮಬಾರಿ ಇಂಗ್ಲೆಂಡಿಗೆ ತೆರಳಿದರು. ಒಗ್ಗದ ಹವೆ ಮತ್ತು ಚಳಿಯಿದ್ದರೂ ೧,೭೪೫ ರನ್ ಗಳಿಸಿ ಬ್ಯಾಟಿಂಗ್ ಸರಾಸರಿಯಲ್ಲಿ ಅಗ್ರಸ್ಥಾನ ಪಡೆದರು. ಮ್ಯಾಂಚೆಸ್ಟರ್‌ನಲ್ಲಿ ನಡೆದ ಎರಡನೆ ಟೆಸ್ಟ್‌ನ ಆಟ ಅತ್ಯುತ್ತಮ. ಮೊದಲ ಪಾಳಿಯ ೩೬೮ ರನ್ ಕೊರತೆ ತುಂಬಿಕೊಳ್ಳಲು ಭಾರತ ಹೆಣಗುತ್ತಿತ್ತು. ಆರಂಭದ ಆಟಗಾರರಾಗಿ ಮುಸ್ತಾಕ್ ಅಲಿ ಮತ್ತು ಮರ್ಚಂಟರು ೨೦೩ ರನ್ ಪೇರಿಸುತ್ತಲೆ ಪಂದ್ಯ ಡ್ರಾ ಆಯಿತು. ಮರ್ಚಂಟರನ್ನು 'ವರ್ಷದ ಆಟಗಾರ'ರೆಂದು ವಿಸ್ಡನ್ ಕರೆದರು. ೧೯೪೬ರ ಇಂಗ್ಲೆಂಡ್ ಪ್ರವಾಸದಲ್ಲಿ ಗಳಿಸಿದ ರನ್ ಮೊತ್ತ ೨,೩೮೫. ನಾಯಕ ಪಟೌಡಿ ತುಂಬು ಹೃದಯದಿಂದ ಅಭಿನಂದಿಸಿದರು. ೧೯೪೭–೪೮ರ

ಆಸ್ಟ್ರೇಲಿಯ ಪ್ರವಾಸದಲ್ಲಿ ಕೆಳ ಸೊಂಟದ ನೋವಿನಿಂದಾಗಿ ಪಾಲ್ಗೊಳ್ಳಲಿಲ್ಲ. ಅನಂತರದ ವೆಸ್ಟ್ ಇಂಡೀಸ್ ಪಂದ್ಯಗಳಲ್ಲೂ ಭಾಗವಹಿಸಲಾಗಲಿಲ್ಲ. ಅದೇ ಸಮಯಕ್ಕೆ ಚಂದ್ರಪ್ರಭಾ ಎಂಬ ತರುಣಿಯೊಬ್ಬಳಿಂದ ಆಗಾಗ ಪತ್ರಬರುತ್ತಿತ್ತು. ಅಭಿಮಾನಿ ಹೆಣ್ಣಿನ ಬಗ್ಗೆ ಕುತೂಹಲಿತ ಮರ್ಚಂಟರು ತಮ್ಮ ಕಛೇರಿಗೆ ಆಕೆಯನ್ನು ಆಮಂತ್ರಿಸಿದರು. ೧೯೫೦ ರಲ್ಲಿ ಅವರು ಆಕೆಯನ್ನೇ ಮದುವೆಯಾದರು.

೧೯೫೧ ರಲ್ಲಿ ಇಂಗ್ಲೆಂಡ್ ತಂಡ ಭಾರತಕ್ಕೆ ಬಂದಾಗ ಮರ್ಚಂಟರು ಭಾರತ ತಂಡಕ್ಕೆ ವಾಪಸಾದರು. ಸರಣಿಯ ಮೊದಲ ಪಂದ್ಯಕ್ಕೆ ಮೊದಲ ಆಟಗಾರರಾಗಿ ಅವರು ಹೊಡೆದ ರನ್ ಮೊತ್ತ ೧೫೪ ಟೆಸ್ಟ್ ಜೀವನದ ಅತೀ ಹೆಚ್ಚಿನದಾಗಿತ್ತು. ವಿಷಾದದ ಸಂಗತಿಯೆಂದರೆ ಪೆಟ್ಟು ಬಿದ್ದ ಭುಜದ ದೆಸೆಯಿಂದ ಅವರು ಮುಂದೆಂದೂ ಟೆಸ್ಟ್‌ನಲ್ಲಿ ಆಡಲಿಲ್ಲ. ಕ್ಲಬ್ ಕ್ರಿಕೆಟ್‌ನಲ್ಲಿ ೧೯೫೫ರ ತನಕ ಅವರು ಆಡುತ್ತಿದ್ದರು. ಕ್ರಿಕೆಟ್ ಸ್ವಂತ ಕಲಿತ ಮರ್ಚಂಟರು ಆಟದ ನಾಜೂಕನ್ನು ಗಂಟೆಗಟ್ಟಲೆ ನೆಟ್ ಅಭ್ಯಾಸದಿಂದ ಗಳಿಸಿದ್ದು. ಅವರ ಸಮಕಾಲೀನ ಪ್ರಸಿದ್ಧ ಆಟಗಾರ ವಿಜಯ ಹಜಾರೆ ಪ್ರಕಾರ ವಿಜಯ ಮರ್ಚಂಟ್ ಕ್ರಿಕೆಟ್ ಪುಸ್ತಕದಲ್ಲಿ ಪ್ರಸ್ತಾಪಿಸಬಹುದಾದ ಮಾದರಿ ಆಟಗಾರ. ವೀಕ್ಷಕರಿಗೆ ಮರ್ಚಂಟರ ಆಟ ಅಷ್ಟಾಗಿ ರುಚಿಸುತ್ತಿರಲಿಲ್ಲ. ಸುದೀರ್ಘ ಕ್ರಿಕೆಟ್ ಜೀವನದಲ್ಲಿ ಎರಡೇ ಎರಡು ಸಿಕ್ಸರ್. ಅದರಲ್ಲೊಂದು ನೋಬಾಲ್‌ಗೆ. ಹಜಾರೆ ಮತ್ತು ನಾನು ಆಡಲು ವಿಕೆಟ್ ಮುಂದೆ ಹೋಗಬೇಕಿದ್ದರೆ ಟ್ರಂಕ್ ಹಾಸಿಗೆ ಹೊತ್ತೇ ಸಾಗುತ್ತಿದ್ದೆವೆಂದು ಮರ್ಚಂಟರು ನಗೆಯಾಡುತ್ತಿದ್ದರು. ಯಾವುದೇ ಧಾವಂತವಿರದ ಅವರ ಆಟ ನಿವೃತ್ತಿ ನಂತರವೂ ನಿಲ್ಲಲಿಲ್ಲ.

೧೯೬೦ ರಲ್ಲಿ ಬೊಂಬಾಯಿಯ ಆಸ್ಟ್ರೇಲಿಯ ಪಂದ್ಯವೊಂದರಲ್ಲಿ ೫೦ ರನ್ನು ಬಾರಿಸಿದ ಅಬ್ಬಾಸ್ ಆಲಿ ಬೇಗರನ್ನು ಜವ್ವನೆಯೊಬ್ಬಳು ಧಾವಿಸಿ ಚುಂಬಿಸಿದಳು. ನಾವು ಆಡುತ್ತಿದ್ದಾಗ ಈ ಹುಡುಗಿಯರು ಎಲ್ಲಿದ್ದರು ಎಂದು ಮರ್ಚಂಟರು ಕೊರಗಿದಾಗ ಖ್ಯಾತ ಅಂಕಣಕಾರ ತಲ್ಯಾರಖಾನರು, ಅವರೆಲ್ಲ ನಿದ್ರಿಸುತ್ತಿದ್ದರು ಎಂದುತ್ತರಿಸಿದರಂತೆ. ೧೯೩೫ ರಿಂದ ೧೯೭೯ ರ ತನಕ ತಜ್ಞ ವೀಕ್ಷಕ ವಿವರಣೆಯ ಹೊಣೆಹೊತ್ತಿದ್ದರು. 'ವಿಜಯ ಮರ್ಚಂಟರ ಕ್ರಿಕೆಟ್' ಎಂಬ ಬಾನುಲಿ ಕಾರ್ಯಕ್ರಮ ೧೪ ವರ್ಷ ಪ್ರಸಾರದಲ್ಲಿತ್ತು. ಶನಿವಾರದ ಮಧ್ಯಾಹ್ನ ಕೇಳುಗರ ಪ್ರಶ್ನೆಗೆ ಕ್ರಿಕೆಟ್ ರಸನಿಮಿಷಗಳನ್ನುಲ್ಲೇಖಿಸಿ ಉತ್ತರಿಸುತ್ತಿದ್ದ ಮರ್ಚಂಟರ ಕಾರ್ಯಕ್ರಮ ರಸದೌತಣ.

ಮರ್ಚಂಟರ ಜೀವನದ ಮೊದಲ ಇನಿಂಗ್ಸ್ ಕ್ರಿಕೆಟಿಗರಾಗಿ ಸಾರ್ಥಕವಾದುದು. ಅಂಗವಿಕಲರಿಗಾಗಿ ಅವರ ದುಡಿತದ ಎರಡನೆ ಇನಿಂಗ್ಸ್‌ನ ಗಳಿಕೆ ಅತಿ ಹೆಚ್ಚು. ೧೯೫೭ ರಲ್ಲಿ ಜರುಗಿದ ರಾಷ್ಟ್ರೀಯ ಅಂಧರ ಸಂಘದ ಕ್ರೀಡಾಕೂಟದಲ್ಲಿ ಅಂಗವಿಕಲರೊಡನೆ ಮೊದಲ ಮುಖಾಮುಖಿಯಾದದ್ದು. ಮಾತುಕತೆ ನಡೆಸಿದ ತರುವಾಯ ಸ್ಪರ್ಧಾಳುಗಳ ದುಃಖದ ದಾರುಣತೆ ಅರಿತರು. ಉತ್ತಮ ದಾಂಡಿಗ ಕೊನೆಯ ಆಟಗಾರರನ್ನು ಕ್ರಿಕೆಟ್‌ನಲ್ಲಿ ರಕ್ಷಿಸುವಂತೆ ಜೀವನದಲ್ಲಿ ದೃಢಕಾಯರು ದೀನರಿಗಾಗಿ ಹೊಂದಬೇಕಾದ ಜವಾಬ್ದಾರಿಯನ್ನರಿತರು. ಆದರೆ ಅವರೇನು ಮಾಡಬಲ್ಲರು? ಅಂಧ ಭಿಕ್ಷುಕರಿಗೆ ನಾಣ್ಯನೀಯತೊಡಗಿದರು, ಗೆಳೆಯ ಆರೋಗ್ಯಾಧಿಕಾರಿ ಕುಸುಮ

ಭಾಟಿಯ ಕಡೆದರು. ನಿಮ್ಮ ಧರ್ಮದಿಂದ ಅವರ ಭಿಕ್ಷಾವೃತ್ತಿ ಶಾಶ್ವತ ಎಂದಾಕೆ ಸ್ವಾವಲಂಬನೆಗೆ ನೀವೇಕೆ ಅವರಿಗೆ ಉದ್ಯೋಗ ಕೊಡಬಾರದೆಂದೂ ನುಡಿದರು. ಒಪ್ಪಿದ ಮರ್ಚಂಟರು ಅಂಗವಿಕಲರಿಗೆ ಉದ್ಯೋಗ ಕೊಡಲು ಮುಂದೆ ಬಂದರು. ಅದೇನೂ ಕಷ್ಟದ ಸಂಗತಿಯಾಗಿರಲಿಲ್ಲ. ೧೯೫೦ ರಲ್ಲಿ ಜವಳಿ ಉದ್ದಿಮೆಯು ಉತ್ಕರ್ಷವಿದ್ದ ಕಾಲ. ಮೊದಲಿಗೆ ಕೇವಲ ಅಂಧರ ನೇಮಕಾತಿ ನಡೆಯಿತು. ಅನಂತರ ದೈಹಿಕ ವಿಕಲಾಂಗರೂ ವೈದ್ಯಕೀಯ ತಪಾಸಣೆಗೊಳಗಾಗಿ ಯುಕ್ತ ತರಬೇತಿ ಪಡೆದು ಅವರಿಗೊಪ್ಪುವ ನೌಕರಿಗೆ ಭರ್ತಿಯಾದರು. ಯಾವುದೇ ಅಪಾಯ ಅವಗಢವಿರುತ್ತಿರಲಿಲ್ಲವೆಂದು ಗಿರಣಿಯ ಮಾಜಿ ಅಧಿಕಾರಿ ಕ್ಯಾಪ್ಟನ್ ದೇಸಾಯಿ ನುಡಿಯುತ್ತಾರೆ.

ಅಂಗವಿಕಲರ ಪುನರ್ವಸತಿಯು ಆಸ್ಥೆ ಹೆಚ್ಚಿದಂತೆ ಕೇವಲ ನೌಕರಿ ಕೊಟ್ಟರೆ ಸಾಲದೆಂಬುದು ಮರ್ಚಂಟರಿಗೆ ಮನವರಿಕೆ ಆಯ್ತು. ಸಾಧ್ಯವಾದಷ್ಟು ಮಾಮೂಲಿ ಜೀವನ ನಡೆಸಲು ಪ್ರೋತ್ಸಾಹದ ಬಗ್ಗೆ ಅರಿವಾಯ್ತು. ತಮ್ಮ ಗಿರಣಿಯ ನೌಕರರ ಪೈಕಿ ಅಂಧ ಓಧವಜೀಯು ಇನ್ನೊಬ್ಬ ಅಂಧನಾರಿಯನ್ನು ಮದುವೆಯಾಗಲಿಚ್ಛಿಸಿದ್ದು ತಿಳಿದಾಗ ಮರ್ಚಂಟರು ಬೆಂಬಲಿಸಿದರು. ಮದುವೆ, ಔತಣ ಮತ್ತು ಉಡುಗೊರೆ ಕಾರ್ಯಕ್ರಮ ಗಿರಣಿಯಲ್ಲೇ ಜರಗಿತು. ಒಂದು ಮನೆ ಮಾಡಲು ದಂಪತಿಗಳಿಗೆ ನೆರವು ಮಾಡಿದ ಮರ್ಚಂಟರು ಅಲ್ಲಿ ಆಗಾಗ್ಗೆ ಊಟಕ್ಕೂ ಉಳಿಯುತ್ತಿದ್ದರು. ಅಂಧ ದಂಪತಿ ಗಳಿಗೆ ಹುಟ್ಟಿದ ಮಗಳಿಗೆ ಮರ್ಚಂಟರೆಂದರೆ ಸರ್ವಸ್ವ. ವರ್ಷಗಳುರುಳಿದಂತೆ ಮರ್ಚಂಟರು ಅಂಗವಿಕಲರ ಇಪ್ಪತ್ತು ಮದುವೆ ಏರ್ಪಡಿಸಿದರು.

ತಮ್ಮ ಮನೆಗೆ ಬರುತ್ತಿದ್ದ ಅಂಗವಿಕಲರ ಸೌಖ್ಯಕ್ಕೆ ಮರ್ಚಂಟರು ಹೆಚ್ಚು ಮುತುವರ್ಜಿ ವಹಿಸುತ್ತಿದ್ದರು. ತನ್ನ ಎಳನೆಯ ವಯಸ್ಸಿನಿಂದ ಕುರುಡಿಯಾದ ದಮಯಂತಿ ಮಾರ್ಫತಿಯಾ ತಾನು ಮೊದಲಬಾರಿಗೆ ಭೇಟಿಯಾದಾಗ ಕೊಟ್ಟ ಹೂ ಗುಚ್ಛವನ್ನು ಹೂದಾನಿಯಲ್ಲಿರಿಸಿದ ಮರ್ಚಂಟರು ಸೇವಕನನ್ನು ಕರೆದು ನಿತ್ಯ ನೀರು ಚಿಮುಕಿಸಲು ಹೇಳಿದಾಗ, ಆಕೆಗೆ ತಟ್ಟನೆ ತನಗೊಬ್ಬ ಮಿತ್ರ ದೊರೆತನೆಂಬ ಭಾವನೆ ಬಂತೆಂದು ಆಕೆ ನೆನಪಿಸಿಕೊಳ್ಳುತ್ತಾಳೆ. ಉಪಕೃತರಾದವರಿಗೆ ಮರ್ಚಂಟರೊಂದಿಗೆ ಬೆಸುಗೆ ಬಲುಗಟ್ಟಿ. ಇಪ್ಪತ್ತೈದು ವರ್ಷದಿಂದ ಕುತ್ತಿಗೆಯ ಕೆಳಗೆ ಲಕ್ವದಿಂದ ನರಳುತ್ತಿದ್ದ ಇಳಿವಯಸ್ಸಿನ ವಿಧವೆ ಹರ್ಷೋಲ್ ಶಿವರಾವ್ ಮರ್ಚಂಟರ ಸಹಾಯ ೧೯೮೨ ರ ಜೂನ್‌ನಲ್ಲಿ ಯಾಚಿಸಿದರು. ಮೊದಲು ಆಕೆ ಸುಖವಾಗಿ ಕೂರಲು ಗಾಲಿಕುರ್ಚಿ ಒದಗಿಸಿಕೊಟ್ಟರು. ಬಳಿಕ ಚಿಕಿತ್ಸೆಗೆ ಯೋಗ್ಯ ವೈದ್ಯರನ್ನು ಗೊತ್ತುಪಡಿಸಿದರು. ಹರ್ಷೋಲ್‌ಗೆ ಕ್ರಮೇಣ ತನ್ನ ಬೆರಳು ಮಣಿಗಂಟು ಮತ್ತು ಪಾದ ಅಲುಗಾಡಿಸಲು ಶಕ್ಯವಾಯಿತು. ಉಪಕಾರವಾಸ್ತೆಂದು ಬರೆದ ಎರಡು ಪತ್ರದಲ್ಲಿ ತನ್ನ ಜೀವನದ ಅತ್ಯಂತ ಮಧುರ ಕ್ಷಣವನ್ನು ಆಕೆ ನೆನೆದಳು. ವಿಜಯಭಾಯಿ ಪ್ರವೇಶದಿಂದ ನನ್ನ ಬಾಳು ಹೊಸದಾಗಿ ಆರಂಭವಾಯಿತೆಂದು ಆಕೆ ಹೇಳುತ್ತಿದ್ದರು. ೧೯೮೪ರ ಆಗಸ್ಟಿನಲ್ಲಿ ವಿಜಯಣ್ಣ ಕೊಡಿಸಿದ ಬಂಗಲೆಯಲ್ಲಿ ಆಕೆ ಕೊನೆಯುಸಿರೆಳೆದಾಗ ಪಕ್ಕದಲ್ಲಿದ್ದ ಮರ್ಚಂಟರು ಭಾವಪರವಶರಾದರು. ದೈವ ಪ್ರೇರಣೆಯಿಂದ ನಾನಾಕೆಗೆ ಸಹಾಯ ಕಲ್ಪಿಸಿದೆ ಎಂದು ಅವರು ಉದ್ಗರಿಸಿದರು.

ಮರ್ಚಂಟರ ವರ್ಚಸ್ಸಿನಿಂದ ನೌಕರವರ್ಗ ತುಂಬ ಪ್ರಭಾವಿತರಾಗಿದ್ದರು. ಅಂಗವಿಕಲ ಮತ್ತು ಇತರ ನೌಕರರನ್ನು ಸಮಾನವಾಗಿ ನೋಡಿಕೊಳ್ಳುತ್ತಿದ್ದುದರ ಕುರಿತು ಕ್ಷೇಮಾಧಿಕಾರಿ ಶಶಿ ಕೊಠಾರಿ ಹೇಳಿಕೊಳ್ಳುತ್ತಾರೆ. ಅಂಗವಿಕಲರಿಗೆ ಹೇಗೆ ನೆರವಾಗಬಹುದೆಂದು ತನ್ನ ನೌಕರರಿಗೆ ಮರ್ಚಂಟರು ವಿವರಿಸುತ್ತಿದ್ದರು. ಪ್ರಭಾವಿತನಾದ ಕಾನಾ ಎಂಬ ಜಾಡಮಾಲಿ ಕ್ಷಯದಿಂದ ಮಡಿದ ತನ್ನ ಪತ್ನಿಯ ಕಣ್ಣುದಾನ ಮಾಡಿದ. ೧೯೮೧ರಲ್ಲಿ ವರ್ಷಪೂರ್ತಿ ನಡೆದ ಮುಷ್ಕರದ ದೆಸೆಯಿಂದುಂಟಾದ ಜವಳಿ ಉದ್ದಿಮೆಯು ಕುಸಿತದ ಬಳಿಕವೂ ಅಂಗವಿಕಲರ ನೆರವು ಮುಂದುವರಿಯುತ್ತಿತ್ತು. ಸ್ವೋದ್ಯೋಗ ಕಲ್ಪಿಸಲು ನೆರವಾಗಬಲ್ಲ ಸಾರ್ವಜನಿಕ ಟ್ರಸ್ಟ್ ಸ್ಥಾಪಿಸಿದರು. ಪ್ರತಿ ಅಪರಾಹ್ಣದ ಕೆಲಕಾಲ ಅಂಗವಿಕಲರ ಕಷ್ಟ ತಿಳಿಯಲು ಮರ್ಚಂಟರು ಮೀಸಲಿಟ್ಟಿದ್ದರು. ಪ್ರತಿ ಸಮಸ್ಯೆ ಖುದ್ದಾಗಿ ವಿಚಾರಿಸಲು ಅಧಿಕಾರಿಗಳಿಗೆ ಸೂಚಿಸಿದ್ದರು. ಸಿಹಿತಿನಿಸು, ಬಾಳೆಹಣ್ಣು ಮತ್ತು ಕರವಸ್ತ್ರ ಮಾರುವಂತೆ ಒಬ್ಬನಿಗೆ ಮೊದಲ ಹಂತದ ಸಹಾಯ ನೀಡಲಾಗಿತ್ತು. ಅವನ ಲಾಭಾಂಶ ಹೆಚ್ಚಲು ಶೇಕಡಾ ಇಪ್ಪತ್ತು ರಿಯಾಯಿತಿ ದರದಲ್ಲಿ ತಮ್ಮ ಗಿರಣಿಯಿಂದ ಬಟ್ಟೆ ಕೂಡಾ ಒದಗಿಸಿದರು. ಸಾರ್ವಜನಿಕ ಬೂತುಗಳನ್ನು ತೆರೆದು ಅಂಗವಿಕಲರಿಗೆ ಅವಕಾಶ ಮಾಡಿಕೊಡಲು ಮುಂಬೈ ದೂರವಾಣಿ ಇಲಾಖೆಯ ಮನ ಒಲಿಸಿದರು. ೨೩ ವರ್ಷದ ಯುವಕ ಅಂಬಾಜಿ ಅಶೋಕ ರೈಲು ಅಪಘಾತವೊಂದರಲ್ಲಿ ೧೯೮೮ರಲ್ಲಿ ಕಾಲು ಕಳೆದುಕೊಂಡ. ಅವನು ಇನ್ನೇನು ಭಿಕ್ಷೆ ಎತ್ತುವುದರಲ್ಲಿದ್ದ, ಶೇವಣಿಗೆ ಬ್ಯಾಂಕೊಂದರಿಂದ ಸಾಲ ಕೊಡಿಸಿದ ಮರ್ಚಂಟರು ದೂರವಾಣಿ ಬೂತೊಂದನ್ನು ಮುಫತ್ತಾಗಿ ಕಟ್ಟಿಸಿಕೊಟ್ಟರು. ಅಂಬಾಜಿಯ ಪಾಲಿಗೆ ವಿಜಯಭಾಯಿ ದೇವರು.

ಅಂಗವಿಕಲರ ಬಗ್ಗೆ ಜನಸಾಮಾನ್ಯರ ಕಣ್ತೆರೆಸಲು ಮರ್ಚಂಟರು ಎಣೆಯಿಲ್ಲದೆ ಶ್ರಮಿಸಿದರು. ರೋಟರಿ ಮತ್ತು ಲಯನ್ಸ್ ಸಂಸ್ಥೆಯಲ್ಲಿ ಅವರು ಮಾಡಿದ ಭಾಷಣ ಅದೆಷ್ಟೋ. ಕೆಲಸ ನೀಡುವಂತೆ ತಮ್ಮ ಉದ್ಯಮದ ಸಂಗಡಿಗರನ್ನು ಕೋರಿದ್ದೆಷ್ಟೋ ಸಲ. ಅಂಧರ ರಾಷ್ಟ್ರೀಯ ಸಂಘ ಮತ್ತು ವಿಕಲಾಂಗರ ಸಮಾನಾವಕಾಶದ ರಾಷ್ಟ್ರೀಯ ಸಂಸ್ಥೆಗೆ ಮುಂದಾಳಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ತಮ್ಮ ವರ್ಚಸ್ಸಿನಿಂದ ಅಂಗವಿಕಲರ ಕಲ್ಯಾಣ ಯೋಜನೆಗೆ ಸರಕಾರದಿಂದ ಧನಸಹಾಯ ಪಡೆಯಲು ನೆರವಾಗುತ್ತಿದ್ದರು. ೧೯೮೧ರಲ್ಲಿ ಮುಂಬೈಯಲ್ಲಿ ನಡೆಸಲಾದ ಕ್ರಿಕೆಟ್ ಪಂದ್ಯ ಸುಮಾರು ಮೂರು ಲಕ್ಷ ರೂಪಾಯಿ ಮೊತ್ತವನ್ನು ಅಂಗವಿಕಲರ ಸಂಸ್ಥೆಗೆ ಗಳಿಸಿಕೊಟ್ಟಿತು.

ತಾವು ಶ್ರೀಮಂತರಾಗಿದ್ದರೂ ಮರ್ಚಂಟರದು ಸಾದಾ ಜೀವನ. ಯಾವಾಗಲೂ ಫಿಯೆಟ್ ಕಾರನ್ನೇ ಬಳಸುತ್ತಿದ್ದ ಅಪ್ಪ, ವಿದೇಶೀ ಕಾರನ್ನೇ ಕೊಂಡಿದ್ದಿಲ್ಲ ಎನ್ನುತ್ತಾಳೆ ಮಗಳು ಅದಿತಿ. (ಅಮರ್ ಎಂಬ ಒಬ್ಬ ಮಗನೂ ಇದ್ದಾನೆ.) ಸಂಪ್ರದಾಯವಾದೀ ಹಿನ್ನೆಲೆ ಇದ್ದರೂ ಮರ್ಚಂಟರೂ ಎಂದೂ ದೇವಾಲಯಕ್ಕೆ ಹೋದುದಿಲ್ಲ. ಮನೆಯಲ್ಲಿಯೂ ಪೂಜೆ ಮಾಡಿದ್ದಿಲ್ಲ. ಜನರಿಗೆ ಒಳಿತುಂಟುಮಾಡುವುದು ಧರ್ಮ ಎಂದು ಅಪ್ಪನ ನಂಬಿಕೆಯಾಗಿತ್ತೆನ್ನುತ್ತಾಳೆ ಮಗಳು. ಮುಂಬೈಯ ಸರಪಂಚರಾಗಿ ೧೯೬೩ರಲ್ಲಿ ಮರ್ಚಂಟರು ನೇಮಕವಾದರು. ಅವರ ಹೊಣೆ ಹೆಚ್ಚಾಗತೊಡಗಿದಾಗ

೧೯೭೦ರ ಏಪ್ರಿಲ್‌ನಲ್ಲಿ ಹೃದಯಾಘಾತವಾಯಿತು. ಸರಪಂಚ ಹುದ್ದೆಗೆ ರಾಜಿನಾಮೆ ಸಲ್ಲಿಸಿ ಅಂಗವಿಕಲರ ಸೇವೆ ಮುಂದುವರಿಸಿದರು. ೧೯೮೭ ನೆ ಅಕ್ಟೋಬರ ೨೭ ರಂದು ಐದನೆಯಬಾರಿ ಹೃದಯಾಘಾತವಾದೊಡನೆ ಆಸ್ಪತ್ರೆ ಸೇರಿದರೂ ಮರು ಮುಂಜಾನೆ ತೀರಿಕೊಂಡರು. ನಿಮ್ಮನ್ನು ಜನ ಹೇಗೆ ಸ್ಮರಿಸಬೇಕು ಎಂದೊಮ್ಮೆ ಮರ್ಚಂಟರನ್ನು ಪ್ರಶ್ನಿಸಿದಾಗ "ನನ್ನ ಹೆಸರು ಯಾವುದೇ ರಸ್ತೆಗೆ ಇರಿಸುವುದು ಬೇಡ. ನಾನು ಬೇಡುವು ದೆಂದರೆ ಸಾಂತ್ವನ ನೀಡಿದ ಜನರ ಹೃದಯದಲ್ಲಿ ಒಂದಿನಿತು ಜಾಗ ಮಾತ್ರ" ಎಂದುತ್ತರಿಸಿದರು. ವಿಜಯಭಾಯಿ ಅದಕ್ಕಿಂತ ಅಧಿಕ ಹೊಂದುವರೆನ್ನುವುದರಲ್ಲಿ ಸಂಶಯ ಇಲ್ಲ.

ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದ ವಿವಾದಮಾಡುವದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲೂ, ವಾದ ವಿವಾದಮಾಡಬೇಡಿರೆಂದು ನನ್ನ ಸೂಚನೆ.

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಅದು ಆತನ ಅಚ್ಚಳಿಯದ ಸ್ಮಾರಕ.

ಗಾಂಧೀಜಿ

೧೯೩೦ರ ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿಜಿ ಉಪ್ಪಿನ ಸತ್ಯಾಗ್ರಹ ಏಕೆ ಕೈಗೊಂಡರು?

ಎ. ಪಿ. ಶ್ರೀನಿವಾಸಮೂರ್ತಿ

೧೯೩೦ರ ಜನವರಿಯಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸ್
ಸತ್ಯಾಗ್ರಹ ಚಳುವಳಿಯನ್ನು ಯೋಚಿಸಿ ಇದರ ಸರ್ವೋಚ್ಚ
ನಾಯಕತ್ವವನ್ನು ವಹಿಸಿಕೊಳ್ಳುವಂತೆ ಮಹಾತ್ಮಾ ಗಾಂಧಿ
ಯವರನ್ನು ಕೇಳಿಕೊಂಡಾಗ ಇದಕ್ಕೆ ಒಪ್ಪಿದ ಗಾಂಧಿಜಿಯವರು,
ಪ್ರಥಮತಃ, ಉಪ್ಪು ತಯಾರಿಕೆಯ ಮೇಲೆ ಸರ್ಕಾರವು ವಿಧಿಸಿದ್ದ
ತೆರಿಗೆ ನಿರ್ಬಂಧವನ್ನು ಧಿಕ್ಕರಿಸಿ ಉಪ್ಪು ತಯಾರಿಸಿ ಕಾನೂನು
ಭಂಗ ಮಾಡುವ ಉಪ್ಪಿನ ಸತ್ಯಾಗ್ರಹವನ್ನು ಕೈಗೊಳ್ಳಲು ತೀರ್ಮಾನಿ
ಸಿದರು. ಈ ಸತ್ಯಾಗ್ರಹ ಚಳುವಳಿಗೆ ಉಪ್ಪಿನತೆರಿಗೆ ವಿರೋಧಿಸು
ವುದನ್ನು ಗಾಂಧಿಜಿಯವರು ಏಕೆ ಚುನಾಯಿಸಿಕೊಂಡರು ಎಂಬು
ದನ್ನು ತಿಳಿಯಲು ಉಪ್ಪಿನತೆರಿಗೆಯನ್ನು ಸರ್ಕಾರವು ಏಕೆ ವಿಧಿಸಿ
ದ್ದಿತು ಎಂಬುದನ್ನು ತಿಳಿಯಬೇಕು. ಈ ಕಥೆ ಸ್ವಾರಸ್ಯವಾಗಿದೆ.
ಬ್ರಿಟಿಷರು ನಮ್ಮ ದೇಶವನ್ನು ವಶಪಡಿಸಿಕೊಂಡ ಮೇಲೆ, ತಮ್ಮ
ದೇಶದಿಂದ ತಯಾರಿಸಿದ ಸರಕುಗಳನ್ನು ನಮ್ಮ ದೇಶಕ್ಕೆ ಕಳಿಸಿ
ಇಲ್ಲಿಂದ ಕಚ್ಚಾಪದಾರ್ಥಗಳನ್ನು ತಮ್ಮ ದೇಶಕ್ಕೆ ಕೊಂಡೊಯ್ಯು
ತ್ತಿದ್ದರು. ಭಾರತಕ್ಕೆ ಇಂಗ್ಲೆಂಡು ರಫ್ತು ಮಾಡುತ್ತಿದ್ದ ತಯಾರಿಸಿದ
ಸರಕುಗಳನ್ನು ಭಾರತಕ್ಕೆ ತರಲು ಸಾಕಾಗುವಷ್ಟು ಹಡುಗುಗಳು
ಭಾರತದಿಂದ ಇಂಗ್ಲೆಂಡು ತೆಗೆದುಕೊಂಡು ಹೋಗುತ್ತಿದ್ದ ಕಚ್ಚಾ
ಪದಾರ್ಥಗಳನ್ನು ಮತ್ತು ಆಹಾರ ವಸ್ತುಗಳನ್ನು ತೆಗೆದುಕೊಂಡು
ಹೋಗಲು ಬೇಕಾಗುವ ಹಡಗುಗಳಿಗಿಂತ ಕಡಮೆಯಾಗಿದ್ದವು
ಇವುಗಳನ್ನು ಕೊಂಡೊಯ್ಯಲು ಖಾಲಿಹಡಗುಗಳು ಇಂಗ್ಲೆಂಡಿನಿಂ
ಭಾರತಕ್ಕೆ ಬರುವುದು ಬ್ರಿಟಿಷರಿಗೆ ತುಂಬ ನಷ್ಟವಾಗುತ್ತಿತ್ತು
ಅಲ್ಲದೆ, ಖಾಲಿಹಡಗುಗಳ ಸಂಚಾರವೂ ಕಷ್ಟವಾಗಿದ್ದಿತು. ಆದು
ರಿಂದ, ಬ್ರಿಟನ್ನಿನ ಚೆಷೈರ್ ಎಂಬ ಬಳಿ ಹೇರಳವಾಗಿದ್ದ ಉಪ್ಪಿನ

ಈ ಹಡಗುಗಳಿಗೆ ತುಂಬಿ ಕಳಿಸುವ ಯೋಚನೆ ಬ್ರಿಟಿಷರಿಗೆ ಹೊಳೆಯಿತು. ಆದರೆ, ಈ ಉಪ್ಪಿನ ತಯಾರಿಕೆಯ ಹಾಗೂ ಸಾಗಣೆಯ ವೆಚ್ಚವು ಭಾರತದ ಉಪ್ಪಿನ ತಯಾರಿಕಾ ವೆಚ್ಚಕ್ಕೂ ಹೆಚ್ಚಾಗಿದ್ದಿತು. ಈ ಪರಿಸ್ಥಿತಿಯನ್ನು ಪರಿಶೀಲಿಸಲು ಸರ್ಕಾರವು ೧೮೩೬ರಲ್ಲಿ 'ಉಪ್ಪಿನ ಆಯೋಗ'ವೊಂದನ್ನು (Salt Commission) ನೇಮಿಸಿತು. ಇಂಗ್ಲೆಂಡಿನ ಉಪ್ಪು ಭಾರತದಲ್ಲಿ ಲಾಭಕರವಾಗಿ ಮಾರಾಟವಾಗಬೇಕಾದರೆ ಭಾರತೀಯ ಉಪ್ಪಿನ ಮೇಲೆ ತೆರಿಗೆ ವಿಧಿಸುವ ಮೂಲಕ ಇದರ ಬೆಲೆ ಹೆಚ್ಚಿಸಬೇಕೆಂದು ಹೇಳಿ ಈ ಸಮಿತಿಯು ಉಪ್ಪಿನ ತೆರಿಗೆ ವಿಧಿಸುವಂತೆ ಶಿಫಾರಸುಮಾಡಿತು. ಇದರ ಪ್ರಕಾರ ಸರ್ಕಾರವು ಭಾರತದಲ್ಲಿ ಉಪ್ಪಿನ ತಯಾರಿಕೆಯ ಮೇಲೆ ತೆರಿಗೆ ವಿಧಿಸಿತು. ಹೀಗೆ ವಿಧಿಸಲಾದ ಉಪ್ಪಿನ ತೆರಿಗೆಯು ಬ್ರಿಟಿಷರು ತಮ್ಮ ಲಾಭಕ್ಕಾಗಿ ಅನುಸರಿಸಿದ ಭಾರತದ ಶೋಷಣೆಯ ಒಂದು ಮಾರ್ಗ ಎಂಬುದು ಸ್ಪಷ್ಟವಾಗುವುದು. ಅಲ್ಲದೆ, ಉಪ್ಪು ಸಾರ್ವತ್ರಿಕ ಬಳಕೆಯ ಪದಾರ್ಥವಾದುದರಿಂದ ಉಪ್ಪಿನ ತೆರಿಗೆಯ ಹೊರೆಯು ದೇಶದ ಅತ್ಯಂತ ಬಡವರ್ಗದವರ ಮೇಲೂ ಬಿದ್ದಂತಾಗಿದ್ದಿತು. ಈ ಕಾರಣಗಳಿಂದಲೇ ಗಾಂಧಿಜಿಯವರು ಉಪ್ಪಿನ ಕಾನೂನನ್ನು ಉಲ್ಲಂಘಿಸಿ ತೆರಿಗೆ ನೀಡದೆ, ರಹದಾರಿ ಪಡೆಯದೆ ಸ್ವತಂತ್ರವಾಗಿ ಉಪ್ಪನ್ನು ತಯಾರಿಸುವ ಉಪ್ಪಿನ ಸತ್ಯಾಗ್ರಹವನ್ನು ಕೈಗೊಂಡರು.

ಸಬರ್‌ಮತಿ ಆಶ್ರಮದಿಂದ ಸಮುದ್ರತೀರದ ಗ್ರಾಮವಾಗಿದ್ದ ದಂಡಿ ಎಂಬಲ್ಲಿಗೆ —ಸುಮಾರು ೨೦೦ ಮೈಲಿಗಳು—'ಪಾದಯಾತ್ರೆ'ಯ ಮೂಲಕ ಉಪ್ಪಿನ ಸತ್ಯಾಗ್ರಹ ನಡೆಸುವುದೆಂಬ ಗಾಂಧಿಜಿಯವರ ತೀರ್ಮಾನವೂ ಭಾವಗರ್ಭಿತವಾದ ವಿಷಯವಾಗಿದೆ. ಎಪ್ಪತ್ತೊಂಬತ್ತು ಪಾದಚಾರಿಗಳೊಡನೆ ಗಾಂಧಿಜಿಯವರು ನೂರಾರು ಗ್ರಾಮಗಳ ಮೂಲಕ ಹಾದು ಹೋಗುವ ಮಾರ್ಗದಲ್ಲಿ ನೆರೆಯುತ್ತಿದ್ದ ಜನಸಮೂಹಕ್ಕೆ ತಮ್ಮ ಸತ್ಯ ಮತ್ತು ಅಹಿಂಸೆಯ ಮೂಲಕ ಸತ್ಯಾಗ್ರಹ ಚಳುವಳಿಯನ್ನು ಹೇಗೆ ನಡೆಸಬೇಕೆಂಬುದರ ಬಗ್ಗೆ ಉಪದೇಶಿಸಿ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಹುರಿದುಂಬಿಸಲು ಇದರಿಂದ ಉತ್ತಮ ಅವಕಾಶವಾಯಿತು. ಅಲ್ಲದೆ, ವಿದೇಶೀ ಪತ್ರಿಕಾಬಾತ್ಮಿದಾರರೂ ಛಾಯಾ ಗ್ರಾಹಕರೂ, ಗಾಂಧಿಜಿಯವರ ಪಾದಯಾತ್ರಿಕರೊಡನೆ ಇದ್ದುದರಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ಭಾರತವು ಅಹಿಂಸಾ ಸ್ವರೂಪದಲ್ಲಿ ದಂಗೆ ಎದ್ದಿದೆ ಎಂಬ ಅಂಶವು ಪ್ರಪಂಚದ ನಾನಾ ದೇಶಗಳಲ್ಲಿ ಪ್ರಚಾರವಾದಂತಾಯಿತು.

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನು ಭಂಗ ಚಳವಳಿಗೆ ಅತ್ಯಂತ ಅರ್ಹ.

ಗಾಂಧೀಜಿ

ಆಧುನಿಕ ಗಾಂಧಾರಿ

ಲೇ : ಅಮಿತಾ ಶ್ರೀವಾಸ್ತವ

ಅನು : ವೈ. ಸಿ. ಭಾನುಮತಿ

ತಾಯಿಯ ಪತ್ರವನ್ನು ಓದಿ ನನಗೆ ಒಂದು ಬಗೆಯ ಆಘಾತವಾದಂತಾಯಿತು. ಇಷ್ಟೊಂದು ಚಿಂತೆಗಳ ಬಳಿಕ ನನ್ನ ಚಿಕ್ಕ ತಂಗಿಯ ವಿವಾಹ ನಿಶ್ಚಯವಾಗಿದೆ. ಹುಡುಗ ಕುಟುಂಬಸಂಪನ್ನ, ಸುಶಿಕ್ಷಿತ. ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದಾನೆ. ಆದರೆ ನೇತ್ರಹೀನ. ನಮ್ಮೆಲ್ಲ ಸೋದರ ಸೋದರಿಯರ ಭಾಗ್ಯ ಪ್ರತಿಯೊಂದು ರೀತಿಯಲ್ಲೂ ಸಹಜ ಹಾಗೂ ಸುಂದರವಾಗಿರುವಾಗ ಪುನಃ ಜೀವನದ ಸಂಜೆಯಲ್ಲಿ ನನ್ನ ತಾಯಿ ತನ್ನ ಕಿರಿಯ ಸಂತಾನದ ಈ ಅಸಹಜ ಭಾಗ್ಯದ ಅಂಧಕಾರವನ್ನು ಯಾವ ರೀತಿ ಸಹಿಸಬಲ್ಲಳು? ಹೋರಾಟದ ಬದುಕಿನ ಈ ದೀರ್ಘ ಅವಧಿಯಲ್ಲಿ ತಂದೆಯ ಸಾವಿನ ತರುವಾಯ ಅವ್ಯವಸ್ಥವಾಗಿದ್ದ ಕುಟುಂಬ ಮೆಲ್ಲಮೆಲ್ಲನೆ ಚೇತರಿಸಿಕೊಂಡಿತು. ಯಾವಾಗ ನಾವೆಲ್ಲ ಸಮರ್ಥರಾದೆವೊ ಈಗ ಇಂಥ ದೌರ್ಭಾಗ್ಯ!

ತಂದೆ, ನಾವಿಬ್ಬರು ಸೋದರಿಯರ ವಿವಾಹ ಮಾಡಿ ಈ ದೊಡ್ಡ ಸಂಸಾರದ ಹೊರೆಯನ್ನು ತಾಯಿಯ ಹೆಗಲ ಮೇಲೆ ಹಾಕಿ ತೀರಿಕೊಂಡರು. ಇಂದು ಅಸಮರ್ಥತೆಯ ಹೊರೆ ನನ್ನನ್ನು ಎಷ್ಟೊಂದು ಬಾಧಿಸಲು ಪ್ರಾರಂಭಿಸಿದೆಯೆಂದರೆ, ಅಂದು ಸುತ್ತಲೂ ಕವಿದಿದ್ದ ಅಷ್ಟೊಂದು ಅಂಧಕಾರದ ದಿನಗಳಲ್ಲಿ ಕೂಡ ಕತ್ತಲೆಯಾವರಿಸಿದಂತೆ ತೋರಿರಲಿಲ್ಲ.

ಆ ದಿನಗಳು ನೆನಪಿಗೆ ಬರುತ್ತಿವೆ. ಆಗ ತಾಯಿ ಹಗಲು ರಾತ್ರಿ ತಂದೆಯ ಸೇವೆಯಲ್ಲಿ ತೊಡಗಿರುತ್ತಿದ್ದಳು. ಎರಡು ವರ್ಷದ ಪುಟ್ಟ ಲಿಪಿಯನ್ನು ನಾನು ಹೆಗಲಿಗೆ ಹಾಕಿಕೊಂಡು ಅವಳನ್ನು ಸಮಾಧಾನ ಪಡಿಸುತ್ತಿದ್ದೆ. ಹಸಿವಿನಿಂದ ಕಮರಿಹೋದ ಅವಳ ತುಟಿಗಳು ಹಾಲಿನ ಕೊರತೆಯಿಂದ ಕಪ್ಪಾಗಿ ಹೋಗುತ್ತಿದ್ದವು.

೧೯೮೫ರ ಸೆಪ್ಟೆಂಬರ್ ತಿಂಗಳಿನ 'ನವನೀತ' ಹಿಂದಿ ಮಾಸ ಪತ್ರಿಕೆಯಲ್ಲಿ ಪ್ರಕಟವಾದ "ಆಧುನಿಕ್ ಗಾಂಧಾರಿ" ಲೇಖನದ ಅನುವಾದ.

ಆಗ ನಾನು ನೀರಿನಲ್ಲಿ ರೊಟ್ಟಿ ಸಕ್ಕರೆಯನ್ನು ಕಲಸಿ ಅವಳಿಗೆ ತಿನ್ನಿಸುತ್ತಿದ್ದೆ. ತಾಯಿಯ ಸೆರಗನ್ನು ಹುಡುಕುತ್ತಿದ್ದ ಆ ಪುಟ್ಟಮಗುವನ್ನು ನಾನು ನನ್ನ ಎಳೆಯ ಎದೆಗೆ ಅಪ್ಪಿಕೊಂಡು ಮಮತೆಯ ಸೆರಗನ್ನು ಹೊದಿಸಿ ಮಲಗಿಸಲು ಪ್ರಯತ್ನಿಸುತ್ತಿದ್ದೆ. ಆಗ ಬಹುಶಃ ನಮ್ಮೆಲ್ಲರ ಅಸಹಾಯಕತೆಯನ್ನು ಅರಿತೋ ಏನೊ ಅವಳು ನನ್ನ ಮಡಿಲಿನಲ್ಲಿ ನಿದ್ರೆಹೋಗುತ್ತಿದ್ದಳು. ತಂದೆಯವರು ತಮ್ಮ ಖಾಹಿಲೆಯಲ್ಲಿಯೇ ನನ್ನ ಮದುವೆ ಮಾಡಿದರು. ಆ ಸಮಯದಲ್ಲಿ ಲಿಪಿಯನ್ನು ತೊರೆದು ನಾನು ಅತ್ತೆಯ ಮನೆಗೆ ಬಂದ ನಂತರ ಪ್ರತಿ ಸಂಜೆಯೂ ಅವಳ ಅಳುವಿನ ಅದೃಶ್ಯ ಧ್ವನಿ ನನ್ನ ನೆಮ್ಮದಿಯನ್ನು ಕೆಡಿಸುತ್ತಿತ್ತು.

ತಂದೆಯ ಸಾವಿನ ಬಳಿಕ ಮೂರನೇ ಸೋದರಿಯ ಮದುವೆಗೆ ಹೋದಾಗ ಲಿಪಿ ಏಳು ವರ್ಷದವಳಾಗಿದ್ದಳು. ಕೆಲವರು ಅವಳನ್ನು ಪದೇ ಪದೇ ರೇಗಿಸುತ್ತಿದ್ದುದು ನನಗೆ ನೆನಪಿದೆ. ಆಗೆಲ್ಲ ಕೋಪದಿಂದ ಕೂಡಿದ ಅವಳು ತಲೆ ಎತ್ತಿ ಕಡೆಯವರೆಗೂ ಜಗಳ ಕಾಯುತ್ತಿದ್ದಳು. ಮೆಲ್ಲಮೆಲ್ಲಗೆ ಮುಗುಳ್ನಗೆ ಬೀರುವ ಬಂಧುಗಳ ಮಧ್ಯೆ ಆಳವಾಗಿ ಯೋಚಿಸಿ ಮಾತನಾಡುತ್ತಿದ್ದ ಆ ಏಳು ವರ್ಷದ ಹುಡುಗಿಯ ತೀಕ್ಷ್ಣತೆಯನ್ನು ನೋಡಿ ನಾವೆಲ್ಲರೂ ಬೆರಗಾಗಿದ್ದೆವು. ಒಂಟಿಯಾದ ಈ ಚಿಕ್ಕ ಹುಡುಗಿಯನ್ನು ಹೀಗೆ ರೇಗಿಸುವುದು ಎಷ್ಟು ಅಶೋಭನೀಯ! ನಾನು ಮುಂದೆ ಹೋಗಿ ಎಲ್ಲರನ್ನೂ ಗದರಿಸಿದ್ದೆ. ಎಲ್ಲರೂ ತಮ್ಮ ತಪ್ಪಿನ ಬಗ್ಗೆ ಲಜ್ಜಿತರಾಗಿದ್ದರು. ಅವಳು ಒಪ್ಪಂದದ ರೀತಿಯಲ್ಲಿ, ದೊಡ್ಡ ಕೈಗಳನ್ನು ಒದರಿ ಅಳುವುದನ್ನು ನಿಲ್ಲಿಸಿ ಕೊಠಡಿಯಿಂದ ಹೊರಟು ಹೋಗಿದ್ದಳು.

ಅವಳದೊಂದು ಬಟ್ಟೆಯ ಗೊಂಬೆ ಇತ್ತು. ಅದು ಕೊಳೆಯಾಗಿ, ಮೂಗು ಚಪ್ಪಟೆಯಾಗಿ ಅಲ್ಲಲ್ಲಿ ಹರಿದಿತ್ತು. ಆ ಗೊಂಬೆಯನ್ನು ತೆಗೆದುಕೊಂಡ, ಅವಳ ವಯಸ್ಸಿನವಳೇ ಆದ ನನ್ನ ಚಿಕ್ಕಮ್ಮನ ಮಗಳ ಜೊತೆ ತುಂಬಾ ಜಗಳವಾಗಿತ್ತು. ನಾನು ಎಲ್ಲ ಹುಡುಗಿಯರಿಗೂ ರಬ್ಬರಿನ ಸುಂದರವಾದ ಗೊಂಬೆಗಳನ್ನು ಖರೀದಿಸಿದ್ದೆ. ಆದರೆ ಏನು ಹೇಳುವುದು. ಅವಳ ಪ್ರಾಣವೆಲ್ಲ ಅದೇ ಹಳೆಯ ಗೊಂಬೆಯ ಮೇಲೆ ನೆಲಸಿತ್ತು. ಬಹುಶಃ ಆ ಗೊಂಬೆಯ ಮೇಲೆ ವಿಜಯ ಸಾಧಿಸಲೋಸುಗವೇ ಎಲ್ಲ ಹುಡುಗಿಯರೂ ಆ ಗೊಂಬೆಯನ್ನು ಎಳೆದಾಡುತ್ತಿದ್ದರು. ಹೀಗೆ ಅವಳ ಹೃದಯಕ್ಕೆ ಒತ್ತಿಕೊಂಡಿದ್ದ ಆ ಗೊಂಬೆಯನ್ನು ನೋಡಿ ಒಂದು ದಿವಸ ನಾನು ಲಿಪಿಯನ್ನು ಕೇಳಿದ್ದೆ—'ನಿನಗೇಕೆ ಇಂಥ ಕೊಳೆಯಾದ ಗೊಂಬೆ ಇಷ್ಟ, ಹೊಸಗೊಂಬೆ ನಿನಗೆ ಇಷ್ಟವಾಗುವುದಿಲ್ಲವಾ?'

ಸ್ವಲ್ಪ ಹೊತ್ತು ಅವಳು ತನ್ನ ಗೊಂಬೆಯನ್ನು ಅತ್ಯಂತ ಪ್ರೀತಿಯಿಂದ ಮಲಗಿಸುತ್ತ ಮತ್ತೆ ಹೇಳಿದಳು—'ಇದು ಕೊಳಕಾಗಿಲ್ಲ. ಇದಕ್ಕೆ ಖಾಹಿಲೆಯಾಗಿದೆ. ನಾವು ಹೇಗೆ ಖಾಹಿಲೆ ಬೀಳುತ್ತೇವೆಯೋ ಹಾಗೆ. ಆದರೂ ಅಮ್ಮ ನಮ್ಮನ್ನು ಬಹಳ ಪ್ರೀತಿಸುತ್ತಾಳೆ. ಅದೇ ರೀತಿ ಇದಕ್ಕೆ ಖಾಹಿಲೆಯಾಗಿದೆ. ಹೊಲಸಾದರೆ ಏನು ನಾವು ಇದನ್ನು ಪ್ರೀತಿಸಬಾರದೆ?'

ಒಂದು ದಿನ ಅವಳು ಅದೇ ಗೊಂಬೆಯನ್ನು ಎತ್ತಿಕೊಂಡು ಬಂದು ನನಗೆ ಹೇಳಿದ್ದಳು—"ಅಕ್ಕ, ಸ್ವಲ್ಪ ಇದನ್ನು ಸುಮ್ಮನಿರಿಸು. ಅಮ್ಮ ನನ್ನನ್ನು ಕರೆಯುತ್ತಿದ್ದಾಳೆ."

ನಾನು ಅವಳಿಗಾಗಿ ಆ ಗೊಂಬೆಯನ್ನು ಎದೆಗೆ ಒತ್ತಿಕೊಂಡೆ. ತನ್ನ ಎರಡೂ ಕಡೆಗೆ ಹರಡಿರುವ ಹತ್ತಿ ತುಂಬಿದ ಮೃದುವಾದ ತೋಳು ನನ್ನ ಹೃದಯದ ಮೇಲೆ ವ್ಯಾಪಿಸಿ ಆ ಗೊಂಬೆ ನನ್ನನ್ನು ಅಂಟಿಕೊಂಡುಬಿಟ್ಟಿತು. ಅದರಲ್ಲಿ ಒಂದು ಬಗೆಯ ಕಾವಿತ್ತು, ಕೋಮಲತೆ ಇತ್ತು. ಅದೃಶ್ಯ ಜೀವನದಿಂದ ತುಂಬಿದ್ದ ಆ ಕೊಳಕುಗೊಂಬೆ ಒಂದು ಪುಟ್ಟ ಮಗುವಿನಂತೆ ಇಚ್ಛಾಹೀನವಾಗಿ ಕಂಡು ಬಹಳ ಇಷ್ಟಪಡುವಂತಾಯಿತು. ಪುಟ್ಟಹುಡುಗಿ ತಂದುಕೊಟ್ಟ ಆ ಅನುಭವವನ್ನು ನಾನು ಇಂದಿಗೂ ಮರೆತಿಲ್ಲ.

ಒಂದು ದಿನ ನನ್ನ ಅಜ್ಞಾನಿ ಮಗ ಲಿಪಿಗೆ ಹೊಡೆದ. ಆಗ ಜೋರುಜೋರಾಗಿ ಅಳುತ್ತಿರುವ ಲಿಪಿಯನ್ನು ತಾಯಿ ಸಮಾಧಾನಪಡಿಸಿದಳು—'ಇವನು ಚಿಕ್ಕವನು. ತಿಳುವಳಿಕೆ ಇಲ್ಲದವನು. ನಿನ್ನ ಮನೆಗೆ ಅತಿಥಿಯಾಗಿ ಬಂದಿದ್ದಾನೆ. ನೀನು ಇವನ ಚಿಕ್ಕಮ್ಮ ಅಲ್ವಾ? ಇವನು ಹೊಡೆದರೆ ಅಳಬಾರದು ' ನಾನು ಲಿಪಿಯನ್ನು 'ಎಲ್ಲಿಗೆ ಏಟಾಗಿದೆ' ಎಂದು ಕೇಳಿದೆ. 'ನನಗೆ ಗಾಯವಾಗಿರುವುದಕ್ಕೆ ಅಳುತ್ತಿಲ್ಲ. ನಾನು ಇವನ ಚಿಕ್ಕಮ್ಮ. ಇವನು ನನ್ನನ್ನು ಚಿಕ್ಕಮ್ಮನೆಂದು ಗೌರವಿಸದೆ ಹೊಡೆಯುತ್ತಾನೆ. ಅದಕ್ಕಾಗಿ ಅಳುತ್ತಿರುವೆ' ಎಂದಳು. ನಾನು ನನ್ನ ಮಗನಿಂದ 'ಸಾರಿ' ಹೇಳಿಸಿ ಅವಳ ಕಾಲು ಮುಟ್ಟಿ ನಮಸ್ಕಾರ ಮಾಡಿಸಿದೆ. ಆಗ ಅವಳು ಶಾಂತಳಾದಳು.

ಮಕ್ಕಳ ಓದಿನ ಕಾರಣದಿಂದಾಗಿ ಮುಂದಿನ ವರ್ಷಗಳಲ್ಲಿ ನಾನು ತವರಿಗೆ ಹೋಗುವುದು ಕಡಿಮೆಯಾಯಿತು. ನಾನು ಯಾವಾಗ ಅವಳನ್ನು ಭೇಟಿಮಾಡುತ್ತಿದ್ದೆನೊ ಆಗೆಲ್ಲ ಅವಳ ವ್ಯಕ್ತಿತ್ವ ಸಾಧಾರಣ ಹುಡುಗಿಯರಿಗಿಂತ ಭಿನ್ನವಾಗಿರುವುದು ಕಂಡುಬರುತ್ತಿತ್ತು. ಅವಳು ಈಗಲೂ ತಾಯಿಯ ಸೆರಗನ್ನು ಹಿಡಿದುಕೊಂಡ ಚಿಕ್ಕ ಹುಡುಗಿಯೇ ಆಗಿದ್ದಳು. ಆದರೆ ಮತ್ತೊಂದು ಕಡೆಯಿಂದ ಅವಳು ಭೀಷಣಪರಿಸ್ಥಿತಿಯಲ್ಲಿ ಸಾಗುತ್ತಿದ್ದ ಕುಟುಂಬದ ಜೊತೆ ಸಂಘರ್ಷಣೆ ಮಾಡುತ್ತ ತನ್ನ ವಯಸ್ಸಿಗೂ ಮೀರಿದ ಸಹನಶೀಲಳಾಗಿದ್ದಳು, ವಿಚಾರವಂತಳಾಗಿದ್ದಳು. ತನ್ನ ಬಾಹ್ಯ ವ್ಯಕ್ತಿತ್ವದ ಬಗ್ಗೆ ಸದಾ ಉದಾಸೀನಳಾಗಿರುತ್ತಿದ್ದ ಅವಳ ಅಂತರ್ಯದಲ್ಲಿ ಸುಕೋಮಲವಾದ ಪ್ರಪಂಚವೊಂದು ನೆಲಸಿತ್ತು. ತಂದೆಯ ಕೊರತೆ ತುಂಬಲಾರದಾಗಿತ್ತು. ನಮ್ಮೆಲ್ಲ ಸೋದರ ಸೋದರಿಯರಿಂದ ನಮ್ಮ ನಮ್ಮದೇ ಆದ ವಿಶೇಷ ಪ್ರೀತಿ ಅವಳಿಗೆ ದೊರೆಯಿತು. ಆ ಅನುಭವವನ್ನು ಅವಳು ಖಂಡಿತ ಪಡೆದಿರಬೇಕು. ಯಾವುದೇ ಅನ್ಯಾಯವನ್ನು ದೃಢತೆಯಿಂದ ವಿರೋಧಿಸುವ ಕ್ಷಮತೆ ಅವಳ ಒಳಗೆ ಸದಾ ಇರುತ್ತಿತ್ತು. ಯಾವುದೇ ತಪ್ಪು ಮಾತಿಗೆ ಅವಳೆಂದೂ ತಲೆಬಾಗುತ್ತಿರಲಿಲ್ಲ.

ಇದರಿಂದಾಗಿಯೆ ತಾಯಿಯ ಈ ಪತ್ರದಿಂದ ನಾನು ಸ್ತಬ್ಧಳಾದೆ, ಏನು ಲಿಪಿ ಮನೆಯ ಪರಿಸ್ಥಿತಿಯಿಂದ ವಿವಶಳಾಗಿ ಕಡೆಯಲ್ಲಿ ಈ ತೀರ್ಮಾನಕ್ಕೆ ಬಂದಿದ್ದಾಳೆಯೇ? ತಾಯಿಯ ಪತ್ರ ಬಂದ ಬಳಿಕ ಅವಳ ಪತ್ರವನ್ನು ಓದಿ ಎಲ್ಲವೂ ಸ್ಪಷ್ಟವಾಯಿತು. ಅವಳು ಯಾವುದೇ ರಾಜಿ ಮಾಡಿಕೊಂಡಿರಲಿಲ್ಲ. ತಾಯಿ ಅಥವಾ ಸೋದರರ ದೋಷ ಕೂಡ ಇದರಲ್ಲಿ ಇರಲಿಲ್ಲ. ಅವರ ಕಡೆಯಿಂದ ವಿರೋಧವೇ ವ್ಯಕ್ತಪಟ್ಟಿತ್ತು. ಈ ನಿರ್ಣಯ ಅವಳ ಸ್ವಂತದ್ದು. ಸುವೀರಜೀ ಅವರು ಅವಳ ಪ್ರಕಟಿತ ಕವನದ ಬಗ್ಗೆ ತಮ್ಮ ಅಭಿಪ್ರಾಯ ಕಳಿಸಿದ್ದರು. ಅನಂತರದಲ್ಲಿ ಅವರಿಬ್ಬರ ನಡುವೆ ಪತ್ರವ್ಯವಹಾರ

ಹೆಚ್ಚಿತು. ಒಂದು ದಿನ ಅವರು ಲಿಪಿಯನ್ನು ಭೇಟಿ ಮಾಡಲು ಬಂದರು. ಅವರು ಕುರುಡರೆಂಬುದು ಆಗ ಅವಳಿಗೆ ತಿಳಿಯಿತು. ಅವರಿಗಾಗಿ ಓದುವ, ಬರೆಯುವ ಕೆಲಸವನ್ನು ಅವರ ತಂಗಿ ಮಾಡುತ್ತಿದ್ದಳು. ಭಾರತದಲ್ಲಿ ಅಂಧರಿಗಾಗಿ ಬ್ರೈಲ್ ಮಾದರಿಯ ಓದು ಮೆಟ್ರಿಕ್‌ವರೆಗೆ ಮಾತ್ರ ಲಭ್ಯವಿದೆ. ಅದರ ನಂತರ ಇಂಥ ನೇತ್ರಹೀನ ವಿದ್ಯಾರ್ಥಿಗಳು ಭಾರತದ ಇತರೆಲ್ಲ ವಿದ್ಯಾರ್ಥಿಗಳ ಗುಂಪಿನಲ್ಲಿ ಸೇರಿ ತಮ್ಮ ಮಾರ್ಗವನ್ನು ಸ್ವಯಂ ಹುಡುಕಬೇಕಾಗುತ್ತದೆ. ಅವರಿಗಾಗಿ ಬ್ರೈಲ್ ಮಾದರಿಯಲ್ಲಿ ಉಚ್ಚ ಶಿಕ್ಷಣಕ್ಕೆ ಸಂಬಂಧಿಸಿದ ಯಾವ ಪುಸ್ತಕಗಳೂ ದೊರೆಯುವುದಿಲ್ಲ. ಅವರು ತಮ್ಮ ಪರೀಕ್ಷೆಯನ್ನು ಬ್ರೈಲ್‌ನಲ್ಲಿ ಬರೆಯಲು ಅವಕಾಶವಿಲ್ಲ. ಪರೀಕ್ಷಾ ಮಂದಿರದಲ್ಲಿ ತಮ್ಮ ಉತ್ತರವನ್ನು ಹೇಳಿ ಬರೆಸ ಬೇಕಾಗುತ್ತದೆ. ಯಾವ ದೇಶದಲ್ಲಿ ವಿದ್ಯಾರ್ಥಿಗಳು ತಮ್ಮ ಭವಿಷ್ಯಕ್ಕಾಗಿ ಹಗಲು ರಾತ್ರಿ ಹೋರಾಟ ನಡೆಸಬೇಕಾಗುತ್ತದೆಯೊ ಅಂಥ ದೇಶದಲ್ಲಿ ಒಬ್ಬ ಅಂಧ ವಿದ್ಯಾರ್ಥಿಯ ಕತ್ತಲೆ ಎಷ್ಟೊಂದು ಗಾಢವಾಗುತ್ತ ಹೋಗುತ್ತದೆ! ಇದರ ಬಗ್ಗೆ ಯಾರು ಯೋಚಿಸು ತ್ತಾರೆ? ಇಂಥ ಒಂದು ಪರಿಸ್ಥಿತಿಯಲ್ಲಿ ತಮ್ಮ ದೃಢವಾದ ಮನೋಬಲದಿಂದ ಅವರು ಎಂ. ಎ. ಮಾಡಿದರು. ವಿಶ್ವವಿದ್ಯಾನಿಲಯದಲ್ಲಿ ಹನ್ನೊಂದನೆಯ ಸ್ಥಾನವನ್ನು ಪಡೆದರು. ಸ್ನೇಹಿತರ ಮೂಲಕ ಸಿಕ್ಕಿದ ನೋಟ್ಸ್, ಟೇಪ್ ಮಾಡಿದ ಉಪನ್ಯಾಸಗಳು, ಸಹೋದರಿಯ ಸಹಾಯ ಮತ್ತು ಸ್ವಂತ ಪರಿಶ್ರಮದಿಂದ ಅವರು ಸಫಲರಾದರು. ಅಧ್ಯಾಪಕರಾದ ಬಳಿಕ ಅವರು ತಮ್ಮ ಕುಶಾಗ್ರತೆಯಿಂದ, ಪ್ರಾಮಾಣಿಕತೆಯಿಂದ, ಪರಿಶ್ರಮಪೂರ್ವಕ ವ್ಯಕ್ತಿತ್ವದಿಂದ ವಿದ್ಯಾರ್ಥಿಗಳನ್ನು ವಶಪಡಿಸಿಕೊಂಡರು. ತೀವ್ರವಾಗಿ ವಿರೋಧಿಸುತ್ತಿದ್ದ ವಿದ್ಯಾರ್ಥಿಗಳೂ ಕೂಡ ಇಂದು ಅವರನ್ನು ಆದರಿಸುತ್ತಾರೆ.

ಅವರು ತಮ್ಮೆಲ್ಲ ಕೆಲಸಗಳನ್ನು ಯಾರ ಆಶ್ರಯವಿಲ್ಲದೆ ನಿರ್ವಹಿಸುತ್ತಾರೆ. ಎಲ್ಲಿಯವರೆಗೆಂದರೆ ಕಾಲೇಜಿಗೆ ಅವರು ಪಾಠ ಹೇಳಲು ಒಬ್ಬರೇ ಬಸ್ಸಿನಲ್ಲಿ ಹೋಗಿ ಬರುತ್ತಾರೆ. ಅವರಲ್ಲಿ ಯಾವುದೇ ರೀತಿಯ ಅಸಹಜತೆ, ಹೀನತೆ ಅಥವಾ ದಯನೀಯತೆ ಯಾಗಲಿ ಇಲ್ಲ. ಅವರ ವ್ಯಕ್ತಿತ್ವ ಆತ್ಮವಿಶ್ವಾಸದಿಂದ ತುಂಬಿದೆ. ಯಾವುದೇ ವಿಷಯದ ಬಗ್ಗೆ ಅವರು ಆಳವಾಗಿ ಮಾತನಾಡಬಲ್ಲರು. ಇಂಥ ಪುರುಷ, ಯಾರು ತಮ್ಮ ಜೀವನದ ನಿರ್ಮಾಣವನ್ನು ತಮ್ಮ ಪುರುಷತ್ವದಿಂದಲೆ ಮಾಡಿದ್ದಾರೊ, ಅವರೊಡನೆ ಹಿಂದು ಮುಂದು ನೋಡದೆ ವಿವಾಹದ ಪ್ರಸ್ತಾಪ ಮುಂದಿಟ್ಟಾಗ, ಆತ ನೇತ್ರಹೀನನೆಂದು ಅವಳಿಗೆ ಒಂದುಕ್ಷಣವೂ ಭಾಸವಾಗಲಿಲ್ಲ. ಆತನ ಅಂತರಂಗದ ಬೆಳಕು ಎಷ್ಟೊಂದು ಉಜ್ವಲವಾಗಿತ್ತೆಂದರೆ ಅವಳಿಗೆ ತನ್ನ ಜೀವನದ ಗುರಿ ಸ್ಪಷ್ಟವಾಗಿತ್ತು.

ಅವಳ ವಿವಾಹಕ್ಕೆ ನಾನು ಅವಶ್ಯವಾಗಿ ಬರಬೇಕೆಂದು ಆಗ್ರಹ ಪೂರ್ವಕವಾಗಿ ಬರೆದಿದ್ದಾಳೆ. ಅವಳ ಈ ತೀರ್ಮಾನದ ಬಗ್ಗೆ ನನ್ನ ಅಭಿಪ್ರಾಯವೇನಿದೆ ಎಂಬುದನ್ನೂ ತಿಳಿಯಲು ಇಚ್ಛಿಸಿದ್ದಾಳೆ. ಅವಳ ಬಗ್ಗೆ ನನ್ನ ಮನಸ್ಸು ಗೌರವದಿಂದ ತುಂಬಿ ಬಂತು. ನನಗೆ ಗೊತ್ತು ಅವಳ ಈ ನಿರ್ಣಯ ಯಾವುದೇ ದಯಾಭಾವ ಅಥವಾ ಭಾವಾವೇಶದಿಂದ ತೆಗೆದುಕೊಂಡದ್ದಲ್ಲ. ಗಾಂಧಾರಿಯಂತೆ ಛಲದಿಂದ ಕಟ್ಟಿಕೊಂಡದ್ದೂ ಅಲ್ಲ. ಯಾರ ಬಗ್ಗೆ ಭಗವಂತನ ಕರುಣೆ ಇರಲಿಲ್ಲವೊ, ಯಾರ ತಪಸ್ಸಿಗೆ ಉಚಿತವಾದ ಉತ್ತರ ದೊರೆಯಲಿಲ್ಲವೊ, ಅಂತಹ ಮಹಾಮಹಿಳೆ ಆ ಗಾಂಧಾರಿಯ ತ್ಯಾಗದ ರೀತಿ ಅವಳದಲ್ಲ.

ನನ್ನ ತಂಗಿ ತಪಸ್ಸು ಮಾಡಿ ಯಾವುದೇ ದೇವರಿಂದ ತನ್ನ ಭಾಗ್ಯದ ನಿರ್ಣಯವನ್ನು ಕೇಳಲಿಲ್ಲ. ಭವಿಷ್ಯದಲ್ಲಿ ಕೂಡ ಸುವೀರಜೀಯವರ ಕಣ್ಣುಗಳು ಸರಿಯಾಗಲಾರವೆಂದು ಅವಳಿಗೆ ತಿಳಿದಿದೆ. ಅವಳು ತನ್ನ ಮನೋಬಲದ ಮೇಲೆ ಇಂಥ ತ್ಯಾಗ ಮಾಡಿದ್ದಾಳೆ.

ಸುವೀರಜೀ ಅವರ ಕಣ್ಣುಗಳಲ್ಲಿ ದೋಷವಿಲ್ಲ. ಏಳು ವರ್ಷದವರಾಗಿದ್ದಾಗ ಅವರಿಗೆ ಬಂದ ತೀವ್ರಜ್ವರದ ಕಾರಣ ಅವರ ದೃಷ್ಟಿ ಹೊರಟುಹೊಯಿತು. ಜಗತ್ತಿನ ಯಾವ ವೈದ್ಯನೂ ಅವರ ಕಣ್ಣುಗಳನ್ನು ಸರಿಪಡಿಸಲಾರ. ತಮ್ಮ ಕುಶಲತೆಯಿಂದ ವಿಶ್ವದಾದ್ಯಂತ ಪ್ರಸಿದ್ಧರಾದ ಇಲ್ಲಿಯವರೆಗಿನ ನೇತ್ರಜ್ಞರಾರೂ ಅವರ ಕಣ್ಣುಗಳ ಶಸ್ತ್ರಕ್ರಿಯೆಯನ್ನು ಮಾಡಲಾರರು. ಆದರೂ ಅವಳು ಜಗತ್ತಿಗೆ ವಿಮುಖಳಾಗಿ ಕಣ್ಣುಗಳಿಗೆ ಪಟ್ಟಿಕಟ್ಟುವುದಿಲ್ಲ. ಹೇ ದೇವರೇ ! ನಾನು ತಿಳಿದಿದ್ದೇನೆ. ನೀನು ಈ ಬಾರಿ ಗಾಂಧಾರಿಯನ್ನು ಮೋಸಪಡಿಸಲಾರೆ. ಅವಳು ಇಂದಿನ ಗಾಂಧಾರಿ. ಅವಳು ತನ್ನ ಪತಿಯ ನೇತ್ರಜ್ಯೋತಿಯಾಗಿ ಈ ಜಗತ್ತಿನಲ್ಲಿ ಉಚಿತ ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡುತ್ತಾಳೆ.

ಯಾವುದೇ ಬಾಹ್ಯ ಕ್ರಿಯೆಗಿಂತ ಮೂಕ ಪ್ರಾರ್ಥನೆಯು ಅನೇಕ ಸಲ ಹೆಚ್ಚು ಸಮರ್ಥವು ಎಂದು ನನ್ನ ವಿಶ್ವಾಸ. ದೇಹಕ್ಕೆ ಅನ್ನವು ಅವಶ್ಯವಿದ್ದಂತೆ ಆತ್ಮನಿಗೆ ಪ್ರಾರ್ಥನೆ ಅವಶ್ಯ.

ಗಾಂಧೀಜಿ

ಮುಪ್ಪೆಂಬ ರೋಗಕ್ಕೆ ಮದ್ದುಂಟೆ?

ಡಾ|| ಪಿ. ಆರ್. ಅನಂತರಾವ್

ವರ್ತಮಾನದಲ್ಲಿ ಯೋಗ್ಯ ಕಾರ್ಯಮಗ್ನರಾಗಿ ಆತ್ಮಭರವಸೆಯಿಂದ ಬಾಳುವುದೇ ಮುಪ್ಪನ್ನು ಎದುರಿಸುವ ಸಮರ್ಥಮಾರ್ಗ. ಮುಪ್ಪೆಂಬ ರೋಗಕ್ಕೆ ಮದ್ದಿಲ್ಲ. ಏಕೆಂದರೆ ಅದು ರೋಗವೇ ಅಲ್ಲ, ವ್ಯಕ್ತಿಯ ದೈಹಿಕ-ಮಾನಸಿಕ ಸ್ಥಿತಿ.

ಶೇಕ್ಸ್‌ಪಿಯರ್ ಒಂದು ಕಡೆ ಹೀಗೆ ಹೇಳುತ್ತಾನೆ: "ನಾವು ಗಂಟೆ ಗಂಟೆಗೂ ಮಾಗುತ್ತೇವೆ, ಗಂಟೆ ಗಂಟೆಗೂ ಕೊಳೆಯುತ್ತ ಹೋಗುತ್ತೇವೆ. ಬದುಕಿನ ಕತೆ ಅಲ್ಲೇ ಅಡಗಿದೆ—ಬೆಳೆಯುವುದು, ಕೊಳೆಯುವುದು." ನಾವೆಲ್ಲ ಪ್ರತಿಕ್ಷಣ ಅನುಭವಿಸುವ ಈ ದೈಹಿಕ ಮಾರ್ಪಾಟಿನ ಬಗ್ಗೆ ವೈದ್ಯಕೀಯವಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶ.

ಪ್ರತಿಯೊಂದು ಜೀವಂತ ಪ್ರಾಣಿಯೂ ಬದುಕಿನ ಅವಧಿಯಲ್ಲಿ ಬದಲಾಗುತ್ತ ಕೊನೆಗೆ ಸಾಯಲೇಬೇಕು. ಇದು ನಿಸರ್ಗ ನಿಯಮ. ನಿಸರ್ಗ ಸೃಷ್ಟ್ಯಾತ್ಮಕವಾಗಿರುವಂತೆ ವಿನಾಶಾತ್ಮಕವೂ ಆಗಿದೆ. ಎಲ್ಲ ಪ್ರಾಣಿಗಳೂ ಒಂದು ಘಟ್ಟದವರೆಗೆ ಬೆಳವಣಿಗೆಯಲ್ಲಿ ಪ್ರಗತಿ ತೋರಿಸಿ ಅನಂತರ ಅವಸಾನದ ಹಾದಿಯನ್ನು ಅನುಸರಿಸುತ್ತವೆ. ಭ್ರೂಣಾವಸ್ಥೆಯಲ್ಲಿ ಪ್ರಾರಂಭವಾದ ಬೆಳವಣಿಗೆ ಜನನ, ಶೈಶವ, ಯೌವನಗಳನ್ನು ದಾಟಿ ಮುಪ್ಪು ಎನ್ನುವ ಅವಸ್ಥೆ ತಲಪುತ್ತದೆ. ಯಾರಾದರೊಬ್ಬ ವ್ಯಕ್ತಿಗೆ ವಯಸ್ಸಾಗುತ್ತಿದೆ ಎನ್ನುವಾಗ ಈ ಎಲ್ಲ ಅಂಶಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು.

ವಯಸ್ಸಾಗುವಿಕೆ ಎಂದರೆ ಒಂದು ಜೀವಕಣದಲ್ಲಿ ಅಥವಾ ಒಂದು ಅಂಗಾಂಶದಲ್ಲಿ ಅಥವಾ ಒಂದು ಅಂಗದಲ್ಲಿ ಅಥವಾ ಇಡೀ ಶರೀರ ರಚನೆಯಲ್ಲಿ ಕಾಲಾನುಗತಿಕವಾಗಿ ಕ್ರಮೇಣ ಕಾಣಬರುವ ಬದಲಾವಣೆಗಳು ಎಂದು ಹೇಳಬಹುದು. ತೊಟ್ಟಿಲಿನ ಹಂತದಲ್ಲೇ ಮನುಷ್ಯನಿಗೆ ವಯಸ್ಸಾಗಲು ಶುರುವಾಗುತ್ತದೆ. ಏಳು ತಿಂಗಳ

ಮಗುವಿನ ರಕ್ತನಾಳಗಳು ಗಡುಸಾಗಿರುವ ಉದಾಹರಣೆಗಳಿವೆ. ಆದರೆ ಸಾಮಾನ್ಯವಾಗಿ ಪ್ರೌಢಾವಸ್ಥೆಯಿಂದ ಸಾವಿನವರೆಗಿನ ಅವಧಿಯನ್ನು ವಯಸ್ಸಾಗುವ ಕಾಲ ಅಥವಾ ಮುಪ್ಪು ಬೆಳೆಯುವ ಕಾಲ ಎಂದು ಪರಿಗಣಿಸಬಹುದು. ಜೆರೆಂಟಾಲಜಿ ಎಂಬ ವೈದ್ಯಕೀಯ ವಿಜ್ಞಾನ ಶಾಖೆ ಮುಪ್ಪು ಮತ್ತು ಅದರ ಸಮಸ್ಯೆಗಳ ಅಭ್ಯಾಸಕ್ಕೆ ಮೀಸಲಾಗಿದೆ.

ಮುಪ್ಪಿನ ಬಗ್ಗೆ ಯಾವುದೇ ಸಿದ್ಧಾಂತವನ್ನು ಹೇಳುವ ಮೊದಲು, ಜೀವಿತಾವಧಿ ಆನುವಂಶಿಕ ಗುಣಗಳ ಮಿತಿಗೆ ಒಳಗಾಗಿರುತ್ತದೆಂಬ ವಿಷಯವನ್ನು ಮರೆಯಬಾರದು. ಪ್ರತಿಯೊಂದು ಜೀವರಾಶಿಗೂ ತನ್ನದೇ ಆದ ನಿಗದಿಯಾದ ಒಂದು ನಿರ್ದಿಷ್ಟ ಜೀವಿತಾವಧಿ ಇದೆ. ಉದಾಹರಣೆಗೆ ಹೆಗ್ಗಣದಂಥ ಹ್ಯಾಮಸ್ಟರ್‌ಗೆ ೨ ವರ್ಷ, ಇಲಿಗಳಿಗೆ ೩ ರಿಂದ ೫ ವರ್ಷ, ಚಿಂಪಾಂಜಿಗೆ ೧೮ ವರ್ಷ, ಆಮೆಗೆ ೧೭೦ ವರ್ಷ ಕೆಲವು ಮನುಷ್ಯರು ನೂರು ವರ್ಷ ಬದುಕುತ್ತಾರೆ. ಅಂದರೆ ಪ್ರತಿಯೊಂದು ಪ್ರಾಣಿಗೂ ಒಂದು ನಿರ್ದಿಷ್ಟ ಸಾಮಾನ್ಯ ಜೀವಿತಾವಧಿ ಇದೆ ಎಂದಾಯಿತು. ಅಮೆರಿಕ ಮತ್ತಿತರ ಮುಂದುವರಿದ ದೇಶಗಳಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ ೭೦ರಿಂದ ೭೫ ವರ್ಷಗಳು. ನಮ್ಮ ವೇದಗಳು ಶತಮಾನಂಭವತಿ, ಶತಾಯುಃ ಪುರುಷಃ ಶತೇಂದ್ರಿಯೋ ಇತ್ಯಾದಿ ಹೇಳುತ್ತವೆ. ಮನುಷ್ಯ ನೂರು ವರ್ಷ ಬದುಕಬೇಕು, ಅದಕ್ಕೆ ತಕ್ಕ ದೈಹಿಕ ಸಾಮರ್ಥ್ಯ ಅವನಿಗಿದೆ ಎಂದು ಇದರ ಅರ್ಥ. ಆದರೆ ಹಿಂದಿನ ಕಾಲದಲ್ಲಾಗಲೀ ಅಥವಾ ಇಂದಿನ ಕ್ಯಾನ್ಸರ್, ಹೃದ್ರೋಗಗಳ ಕಾಲದಲ್ಲಾಗಲೀ ಶತಾಯುಷಿಗಳನ್ನು ಕಾಣುವುದು ತೀರ ಅಪರೂಪ.

ನಾವೇಕೆ ಮುಪ್ಪಾಗುತ್ತೇವೆ? ಈ ಪ್ರಶ್ನೆಗೆ ಉತ್ತರವಾಗಿ ಅನೇಕ ಸಿದ್ಧಾಂತಗಳಿವೆ. ಆದರೆ ಇಲ್ಲಿ ಮುಖ್ಯವಾಗಿ ಎರಡು ಸಿದ್ಧಾಂತಗಳನ್ನುಗಮನಿಸಬಹುದು. ಮೊದಲನೆಯದು, ಜೀನ್‌ಗಳಲ್ಲಿ ಅಂತರ್ಗತವಾಗಿರುವ ಕಾರ್ಯಕ್ರಮ ಸಿದ್ಧಾಂತ. ಮತ್ತು ಎರಡನೆಯದು ಡಿ.ಎನ್.ಎ–ಆರ್.ಎನ್.ಎ. ದೋಷ ಸಿದ್ಧಾಂತ. ಈ ಸಿದ್ಧಾಂತಗಳ ಆಧಾರವೆಂದರೆ, ಜೀವಕೋಶಗಳ ವಿಭಜನಾಸಾಮರ್ಥ್ಯ ಕ್ಷೀಣವಾಗುವ ಲಕ್ಷಣ. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ, ಮಕ್ಕಳ ಜೀವಕೋಶಗಳು ೫೦ರಷ್ಟು ವಿಭಜನೆ ಹೊಂದುತ್ತವೆ. ೨೦ ವರ್ಷದ ವ್ಯಕ್ತಿಯ ಜೀವಕೋಶಗಳು ೩೦ರಷ್ಟು ವಿಭಜನೆಗೊಳ್ಳುತ್ತವೆ. ಅದೇ ಕಾಲಾವಧಿಯಲ್ಲಿ ೮೦ ವರ್ಷ ವಯಸ್ಸಿನ ವ್ಯಕ್ತಿಯ ಜೀವಕೋಶಗಳು ಕೇವಲ ೨೦ರಷ್ಟು ಮಾತ್ರ ವಿಭಜನಾಸಾಮರ್ಥ್ಯ ಹೊಂದಿರುತ್ತವೆ. ಈಗ ನಡೆದಿರುವ ಅಧ್ಯಯನಗಳ ಪ್ರಕಾರ ವೃದ್ಧಾಪ್ಯದ ರಹಸ್ಯ ವಿಭಜನೆ ಹೊಂದುವ ಜೀವಕೋಶಗಳಲ್ಲೇ ಅಡಗಿದೆ. ಜೀವಕೋಶಗಳಲ್ಲಿ ಅಡಗಿರಬಹುದಾದ ಆನುವಂಶಿಕ ಲಕ್ಷಣಗಳು ಅವುಗಳ ವಿಭಜನಾಕ್ರಿಯೆಯನ್ನು ನಿಯಂತ್ರಿಸುತ್ತವೆ.

ವಯಸ್ಸು ಹೆಚ್ಚಾದಂತೆ ಜೀವಕಣಗಳು ಕ್ರಮೇಣ ಹಾಗೂ ಸತತವಾಗಿ ಕ್ಷಯ ಹೊಂದಿ ಕಾರ್ಯದಕ್ಷತೆಯನ್ನು ಕಳೆದುಕೊಳ್ಳುತ್ತವೆಂಬ ಸಂಗತಿಯನ್ನು ಮರೆಯಬಾರದು.

ಮುಪ್ಪು, ಅಂದರೆ ಶಕ್ತಿಕ್ಷಯ ಬೇರೆಬೇರೆ ಕಾಲದಲ್ಲಿ ಮತ್ತು ಗತಿಯಲ್ಲಿ ದೇಹವನ್ನು ಆವರಿಸುತ್ತದೆ. ಬೇರೆಬೇರೆ ಅಂಗಗಳಲ್ಲಿ ಬೇರೆಬೇರೆ ವಯಸ್ಸಿನಲ್ಲಿ ಮುಪ್ಪಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ನಮ್ಮ ದೃಷ್ಟಿ ಮತ್ತು ಶ್ರವಣಶಕ್ತಿಗಳು ೧೦ ವರ್ಷ ವಯಸ್ಸಿನಲ್ಲಿ

ಅತ್ಯಧಿಕವಾಗಿ ಬೆಳೆದಿರುತ್ತವೆ; ಬೌದ್ಧಿಕ ಬೆಳವಣಿಗೆ ೨೧ರಲ್ಲಿ, ಸ್ನಾಯುಶಕ್ತಿ ಮತ್ತು ಸಂಘಟನೆ ೨೫ರಲ್ಲಿ ಅತ್ಯಧಿಕವಾಗಿರುತ್ತವೆ. ಹಾಗೆಯೇ ವಿವಿಧ ಅಂಗಗಳು ಕ್ಷಯಹೊಂದುವುದು ಕೂಡ ಬೇರೆಬೇರೆ ವಯಸ್ಸಿನಲ್ಲಿ ಪ್ರಾರಂಭವಾಗುತ್ತದೆ. ಥೈಮಸ್ ಗ್ರಂಥಿಗಳು ಬಾಲ್ಯಾವಸ್ಥೆಯ ಅನಂತರ ಕ್ಷೀಣವಾಗತೊಡಗುತ್ತವೆ. ಅಸ್ಥಿಪಂಜರದ ಸ್ನಾಯುಗಳು ಪ್ರೌಢಾವಸ್ಥೆಯ ಅನಂತರ, ಪ್ರಾಸ್ಟ್ರೇಟ್ ಗ್ರಂಥಿಗಳು ೪೦ರ ಅನಂತರ, ಮೂತ್ರಪಿಂಡಗಳು ೫೦ರ ಅನಂತರ ಮತ್ತು ಮಿದುಳು ೩೦, ೪೦ ಅಥವಾ ೭೦ರ ಅನಂತರ ಕೂಡ ಕಾರ್ಯದಕ್ಷತೆಯನ್ನು ಕಳೆದುಕೊಳ್ಳಬಹುದು.

ಮೇಲ್ನೋಟಕ್ಕೆ ಕಾಣಿಸಿಕೊಳ್ಳುವ ಮುಪ್ಪಿನ ಲಕ್ಷಣಗಳು ಜೀವಕೋಶಗಳಲ್ಲಿ ಅಗೋಚರವಾಗಿ ನಿಗೂಢವಾಗಿ, ಗಹನವಾಗಿ ನಡೆಯುತ್ತಿರುವ ಕ್ರಿಯೆಗಳ ಒಟ್ಟು ಪರಿಣಾಮವೇ ಆಗಿರುತ್ತವೆ. ಹೀಗೆ ವಯಸ್ಸಾದಂತೆಲ್ಲ ಬದಲಾಗುವ ದೈಹಿಕ ಲಕ್ಷಣಗಳನ್ನು ಈಗ ಗಮನಿಸಬಹುದು. ಅವೆಂದರೆ, ಮೂಳೆಗಳ ಬೆಳವಣಿಗೆ ನಿಲ್ಲುವುದು, ಚರ್ಮ ಸುಕ್ಕುಗಟ್ಟುವುದು, ಕೂದಲು ನರೆಯುವುದು, ಹಲ್ಲುಗಳು ಬಿದ್ದು ಹೋಗುವುದು, ಜನನಾಂಗಗಳ ಕುಸಿತ, ಸಂವೇದನೆಯ ದುರ್ಬಲತೆ, ಬೆನ್ನುಬಾಗುವುದು, ಮಾಂಸಖಂಡಗಳ ನಿಶ್ಶಕ್ತಿ, ದೈಹಿಕ ಕ್ರಿಯೆಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು, ಮನಸ್ಸು ಚೈತನ್ಯಹೀನವಾಗುವುದು ಮತ್ತು ಮರೆವು. ಮುಪ್ಪು ವಿವಿಧ ರೀತಿಗಳಲ್ಲಿ ವಿವಿಧ ಅಂಗಗಳ ಕ್ರಿಯೆಗಳಲ್ಲಿ ಸಂಕೀರ್ಣವಾದ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಒಂದು ಗಾಯ ಅಥವಾ ರೋಗದಿಂದ ಉಂಟಾಗಬಹುದಾದ ಅಂಗೋಪಾಂಗಗಳ ನಿಶ್ಶಕ್ತತೆ ಮತ್ತು ಮುಪ್ಪಿನಿಂದುಂಟಾಗುವ ನಿಶ್ಶಕ್ತತೆಗೂ ಇರುವ ವ್ಯತ್ಯಾಸವನ್ನು ತಜ್ಞ ವೈದ್ಯ ಕಂಡುಹಿಡಿಯಬಹುದು.

ವಯಸ್ಸಾದಂತೆಲ್ಲ ನರಮಂಡಲದಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು ಬಹು ಮುಖ್ಯವಾದವು. ೬೦ನೇ ವಯಸ್ಸಿಗೆ ಕಾಲಿಟ್ಟ ವ್ಯಕ್ತಿಗಳಲ್ಲಿ ತಪ್ಪದೆ ಕಾಣಿಸಿಕೊಳ್ಳುವ ನರದೌರ್ಬಲ್ಯ ರೋಗಗಳೆಂದರೆ ನಿಧಾನ ಪ್ರತಿಕ್ರಿಯೆ, ಕುಂಠಿತ ಸ್ಪಂದನ ಸಂವೇದನೆ, ಕಾಲ ಪರಿಜ್ಞಾನದಲ್ಲಿ ಗೊಂದಲ ಮತ್ತು ಹಿಂದೆ ಕಲಿತ ಜ್ಞಾನದ ಮರೆವು. ಪ್ರೌಢಾವಸ್ಥೆಯ ಪ್ರಾರಂಭದಿಂದ ಜರೆಯವರೆಗೆ ಗಂಡಸಿನ ಮಿದುಳಿನ ತೂಕ ಸುಮಾರು ೧೫೦ ಗ್ರಾಮ್ ಕಡಿಮೆಯಾಗುತ್ತದೆ.

ಹಲವಾರು ಸಂದರ್ಭಗಳಲ್ಲಿ ಒಬ್ಬ ಮನುಷ್ಯ ಮುದಿತನದಿಂದ ಬಳಲುತ್ತಿದ್ದಾನೋ ಅಥವಾ ಯಾವುದಾದರೊಂದು ರೋಗದಿಂದ ನರಳುತ್ತಿದ್ದಾನೋ ಪತ್ತೆ ಹಚ್ಚುವುದು ವೈದ್ಯರಿಗೆ ಕಷ್ಟವಾಗಬಹುದು. ಮುಪ್ಪಿನ ಲಕ್ಷಣಗಳನ್ನು ವ್ಯಕ್ತಪಡಿಸುವ ಅಪರೂಪದ ರೋಗ ಒಂದಿದೆ.

ಇಲ್ಲಿ ನನಗೊಂದು ಘಟನೆ ನೆನಪಾಗುತ್ತದೆ. ನಾನು ಚಿಕ್ಕಹುಡುಗನಿದ್ದಾಗ ನಮ್ಮೂರಿನ ಸಾಹುಕಾರನಿಗೆ—ಅವನಿಗೆ ೭೦ ದಾಟಿತ್ತು—ಹಲವಾರು ತಜ್ಞ ವೈದ್ಯರು ಉಪಚಾರ ನಡೆಸುತ್ತಿದ್ದರು. ಎಷ್ಟು ದಿನ ಕಳೆದರೂ ಅವನ ಸ್ಥಿತಿಯಲ್ಲಿ ಎಳ್ಳಷ್ಟು ಬದಲಾವಣೆ ಆಗಲೇ ಇಲ್ಲ. ಆ ಸಾಹುಕಾರನ ಊಳಿಗದಲ್ಲಿದ್ದ ಆಳೊಬ್ಬ ನನಗೆ ಹೀಗೆ ಹೇಳಿದ "ನಮ್ಮ ಸಾಹುಕಾರರಿಗೆ ಬಂದಿರೋ ರೋಗ ಏನು ಅಂತ ಈ ಯಾವ ಡಾಕ್ಟರಿಗೂ

ಗೊತ್ತೇ ಆಗಿಲ್ಲ, ಸುಮ್ಮನೆ ಔಷಧಿ, ಇಂಜಕ್ಷನ್ ಕೊಡ್ತಾ ಇದಾರೆ. ಸಾಹುಕಾರರ ರೋಗ ಏನು ಅಂತ ನಂಗೆ ಗೊತ್ತು." ನಾನು ಕುತೂಹಲದಿಂದ "ಏನು ಕಾಹಿಲೆ ಸಾಹುಕಾರರಿಗೆ?" ಎಂದು ಕೇಳಿದಾಗ, ಅವನು ತಕ್ಷಣ "ಎಲ್ಲಾ ಮುದುಕರಿಗೂ ಬರೋ ರೋಗ, ಮುಪ್ಪು!" ಎಂದ. ಬಹುಶಃ ಅವನ ರೋಗ ನಿದಾನ ಸರಿಯಿರಬಹುದೆಂದು ಈಗ ನನಗೆನಿಸುತ್ತಿದೆ.

ವಯಸ್ಸಾದಂತೆಲ್ಲ ರೋಗ ನಿರೋಧ ಶಕ್ತಿಯೂ ಕುಂದುತ್ತದೆಂಬುದು ನಿಜ. ಮರಣಾಂತಿಕ ರೋಗಗಳೂ ಬರಬಹುದು, ಹೃದ್ರೋಗಗಳು ಪಾರ್ಶ್ವವಾಯು ಮತ್ತು ಕ್ಯಾನ್ಸರ್ ರೋಗಗಳು ಬಾರದಂತೆ ನೋಡಿಕೊಂಡರೆ ವೈದಿಕ ಋಷಿಗಳು ಬಯಸಿದ ಹುಟ್ಟು ಹಬ್ಬದ ಶತಮಾನೋತ್ಸವವನ್ನು ಕಾಣಬಹುದೇನೋ!

ಮುಪ್ಪನ್ನು ನಿವಾರಿಸಬಹುದೇ ಅಥವಾ ನಿಧಾನಿಸಬಹುದೇ ಎಂಬ ಪ್ರಶ್ನೆ ಗಮನ ಸೆಳೆಯುವಂಥದು. ಮುಪ್ಪು ಅನಿವಾರ್ಯವೇ? ಉತ್ತರ, ಮುಪ್ಪು ಅನಿವಾರ್ಯ. ಬಹುಶಃ ಇದನ್ನು ಸ್ವಲ್ಪ ಕಾಲ ಮುಂದೂಡಬಹುದೇನೋ. ಮುಪ್ಪನ್ನು ಸಂಪೂರ್ಣವಾಗಿ ತಪ್ಪಿಸಿ ಕೊಳ್ಳಲೇಬೇಕೆಂದರೆ, ಯೌವನ ಇರುವಾಗಲೇ ಸಾಯಬೇಕು ಎಂಬ ಕುಂಟುಸಮಾಧಾನ ವನ್ನು ಮಾತ್ರ ಹೇಳಬಹುದು.

ನಮ್ಮ ಜೀವನದ ಅವಧಿ ನಮ್ಮ ನಮ್ಮ ಅನುವಂಶಿಕ ಗುಣಗಳಿಂದ ಪೂರ್ವ ನಿಶ್ಚಿತವಾಗಿರುವುದರಿಂದ, ನಾವು ಎಷ್ಟೇ ಕಟ್ಟುನಿಟ್ಟಾದ ಶಿಸ್ತಿನ ಜೀವನಕ್ರಮವನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬಂದರೂ, ನಮ್ಮ ಆಯಸ್ಸಿಗೆ ೧೦ ವರ್ಷಗಳಿಗಿಂತ ಹೆಚ್ಚು ಅವಧಿಯನ್ನು ಸೇರಿಸುವುದು ಅಸಾಧ್ಯವೆಂದೇ ಹೇಳಬೇಕು.

ಇಳಿ ವಯಸ್ಸಿನ ಪರಿಣಾಮಗಳು ಸಹನಯೋಗ್ಯವಾಗಿ ಮಾಡಿಕೊಳ್ಳಲು ಉಪಾಯ ಗಳಿವೆ. ಉಚ್ಚಮಟ್ಟದ ಬೌದ್ಧಿಕತೆ, ಸುಸಂಘಟಿತವಾದ ದಿನಚರ್ಯೆ ಮತ್ತು ಎಲ್ಲ ವಿಷಯಗಳಲ್ಲೂ ಸಮತೂಕವಾದ ನಿರ್ಣಯ ತೆಗೆದುಕೊಳ್ಳುವ ಶಕ್ತಿ—ಇವೆಲ್ಲ ಇಳಿ ವಯಸ್ಸಿನ ದೈಹಿಕ ನಿಶ್ಯಕ್ತತೆಗೆ ಪರಿಹಾರವಾಗಬಹುದು. ಇಳಿ ವಯಸ್ಸನ್ನು ಸುಖಕರ ವಾಗಿ ಪರಿವರ್ತಿಸುವ ಜಾಣ್ಮೆಯಿಂದ ಬೇಸರ, ಒಂಟಿತನಗಳ ನೋವನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ವಿಶ್ರಾಂತಿ ವೇಳೆಯಲ್ಲಿ ಓದುವ ಮತ್ತು ಸಂಗೀತ ಕೇಳುವ ಇತ್ಯಾದಿ ಹವ್ಯಾಸಗಳನ್ನಿಟ್ಟುಕೊಂಡರೆ ಬದುಕು ವೈವಿಧ್ಯಪೂರ್ಣವಾಗುತ್ತದೆ. ಆದರೆ ಈ ಬಗೆಯ ಸಿದ್ಧತೆ ಯೌವನಾವಸ್ಥೆಯಲ್ಲೇ ಆರಂಭವಾಗಬೇಕೆಂಬ ಮಾತನ್ನು ಮರೆಯ ಬಾರದು.

ಮುಪ್ಪು ಅನಿವಾರ್ಯ ಎಂಬ ಸತ್ಯ ಎಷ್ಟೇ ಖಚಿತವಾಗಿ ತಿಳಿದಿದ್ದರೂ, ಮನುಷ್ಯರು ಅದರಲ್ಲೂ ಹೆಂಗಸರು—ತಾವು ಇಳಿ ವಯಸ್ಸಿನತ್ತ ಹೆಜ್ಜೆ ಹಾಕುತ್ತಿದ್ದೇವೆ ಎಂಬ ಮಾತನ್ನು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ನಲವತ್ತು ದಾಟಿದ ಹೆಂಗಸೊಬ್ಬಳು ತನಗೆ ಅಡಿಯಿಂದ ಮುಡಿಯವರೆಗೆ ಏನೇನೋ ಖಾಯಿಲೆಗಳಿವೆಯೆಂದು ಭ್ರಮಿಸಿ ಹಲವಾರು ವೈದ್ಯರ ಸಲಹೆ ಪಡೆದರೂ ಪ್ರಯೋಜನವಾಗಲಿಲ್ಲ. ಋತುಬಂಧದ ಪರಿಣಾಮಗಳಿಗೆ ಒಳಗಾಗಿದ್ದ ಅವಳ ತಕರಾರುಗಳು ಕೇವಲ ಮಾನಸಿಕವಾಗಿದ್ದುವು. ಕಡೆಗೊಬ್ಬ ಡಾಕ್ಟರು, "ನಿಮಗೆ ವಯಸ್ಸಾಗುತ್ತಿರುವುದರಿಂದ ಹೀಗೆಲ್ಲಾ ಆಗುತ್ತಿದೆ."

ಎಂದು ತಿಳಿಸಿದ ಕೂಡಲೇ ಅವಳ ರೋಗಗಳೆಲ್ಲಾ ಮಾಯವಾದುವು! ಎಂದರೆ ನಿಮಗೆ ಮುಪ್ಪು ಆವರಿಸುತ್ತಿದೆ ಎಂಬ ಆ ಡಾಕ್ಟರರ ಮಾತಿನಿಂದಲೇ ಅವಳ ಎಲ್ಲ ರೋಗ ಚಿಹ್ನೆಗಳು ಮಾಯವಾದುವು. ಪ್ರತಿಯೊಬ್ಬರಿಗೂ ಯುವಕರಾಗೇ ಉಳಿಯಬೇಕೆಂಬ ಅದಮ್ಯ ಬಯಕೆ ಇರುತ್ತದೆ. ಯಾರೂ ಮುದುಕರೆಂದು ಕರೆಸಿಕೊಳ್ಳಲು ಇಷ್ಟಪಡುವುದಿಲ್ಲ. ಘನತೆಯಿಂದ, ಗಂಭೀರವಾಗಿ ಇಳಿವಯಸ್ಸನ್ನು ಒಪ್ಪಿಕೊಳ್ಳುವುದು ಮುಪ್ಪಿನ ಬಗ್ಗೆ ಚಿಂತೆಮಾಡಿ ಅಸ್ವಸ್ಥರಾಗುವುದಕ್ಕಿಂತ ಒಳ್ಳೆಯದು.

ಕೊನೆಯದಾಗಿ ಹೇಳಿಕೊಳ್ಳುವಂತಹದೇನೂ ಇಲ್ಲದಾಗ ಮಾತ್ರ ಒಬ್ಬ ವ್ಯಕ್ತಿಯ ವಯಸ್ಸನ್ನು ಗಣನೆಗೆ ತಂದುಕೊಳ್ಳಬಹುದು ಎಂಬ ಮಾತನ್ನು ಮರೆಯಬಾರದು. ಒಬ್ಬ ಮನುಷ್ಯನ ಯೋಗ್ಯತೆಯನ್ನು ಅಳೆಯುವಾಗ ಅವನಿಗೆ ಬೇರೆ ಗುಣಗಳಿಲ್ಲದಿದ್ದಲ್ಲಿ ಕೊನೆಯಲ್ಲಿ ಅವನ ವಯಸ್ಸನ್ನು ಪರಿಶೀಲಿಸುತ್ತೇವೆ. ಆದ್ದರಿಂದ ನಮ್ಮ ಉಳಿದಿರುವ ಆಯುಸ್ಸಿನಲ್ಲಿ ಸಾಧ್ಯವಿದ್ದಷ್ಟೂ ಶ್ರಮಿಸಿ ಸಾರ್ಥಕ ಬದುಕನ್ನು ನಡೆಸುವುದು, ಗತಿಸಿದ ಕಾಲದ ಬಗ್ಗೆ ವ್ಯರ್ಥವಾಗಿ ಕೊರಗುವುದಕ್ಕಿಂತ ಉತ್ತಮವಲ್ಲವೆ?

ನಾಳೆಯನ್ನು ಇಂದು ಬಾಳುವುದು ಚಡಪಡಿಕೆ, ಇಂದನ್ನು ನಾಳೆ ಬಾಳುವುದು ಆಲಸ್ಯ, ನಾಳೆಯನ್ನು ನಾಳೆಯೇ ಮತ್ತು ಇಂದನ್ನು ಇಂದೇ ಬಾಳುವುದು ಬದುಕಿನ ನಿಜಧರ್ಮ, ಆರೋಗ್ಯದ ಒಳಮರ್ಮ!

ಶೀಲವು ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜ ಮಾರ್ಗ.

ಪ್ರಕೃತಿಯ ನಿಯಮಗಳನ್ನು ತಿಳಿದು ಅಥವಾ ತಿಳಿಯದೆಯೇ ಉಲ್ಲಂಘಿಸುವುದು ಅಸತ್ಯದ ಒಂದು ರೂಪ.

ಗಾಂಧೀಜಿ

ನೆಪೋಲಿಯನ್ ಸತ್ತದ್ದು ಹೇಗೆ?

ಡಾ|| ಎಚ್. ಸಂಜೀವಯ್ಯ

ಈ ಪ್ರಶ್ನೆಗೆ ಸಮಕಾಲೀನ ಇತಿಹಾಸ ಕೊಡುವ ಉತ್ತರ ಈ ರೀತಿ ಇದೆ: ೧೮೧೭ರ ಕೊನೆಯ ಭಾಗದಲ್ಲಿ ನೆಪೋಲಿಯನ್ನನ ಆರೋಗ್ಯ ಕೆಡುತ್ತಿರುವುದರ ಮೊದಲ ಸೂಚನೆಗಳು ಕಂಡವು. ಅವನು ಹೊಟ್ಟೆಯ ಹುಣ್ಣು ಅಥವ ಅರ್ಬುದ ರೋಗಕ್ಕೆ ತುತ್ತಾಗಿರುವಂತೆ ತೋರಿತು. ೧೮೨೧ರ ಮೊದಲ ಭಾಗದಿಂದ ಅವನ ಖಾಯಿಲೆ ಉಲ್ಬಣಿಸಿತು. ಮಾರ್ಚ್ ತಿಂಗಳಲ್ಲಿ ಅವನು ಪರಾಧೀನನಾಗಿ ಹಾಸಿಗೆ ಹಿಡಿದ. ಏಪ್ರಿಲ್ ತಿಂಗಳಲ್ಲಿ ಅವನು ತನ್ನ ಅಂತಿಮ ಉಯಿಲನ್ನು ಹೇಳಿ ಬರೆಸಿದ:

ನಾನು ಅಷ್ಟು ಪ್ರೀತಿಸುತ್ತಿದ್ದ ಫ್ರೆಂಚ್ ಜನಸಮೂಹದ ನಡುವೆ, ಸೀನ್ ನದಿ ದಂಡೆಯ ಮೇಲೆ, ನನ್ನ ಚಿತಾಭಸ್ಮ ಇಡಬೇಕೆಂದು ನಾನು ಇಚ್ಛಿಸುತ್ತೇನೆ.... ಇಂಗ್ಲೀಷರ ಸ್ವಲ್ಪ ಜನಾಧಿಪತ್ಯದ ಬಾಡಿಗೆ ಕೊಲೆಪಾತಕರಿಂದ ಹತನಾಗಿ ನಾನು ನನ್ನ ಕಾಲಕ್ಕಿಂತ ಮುಂಚೆ ಸಾಯುತ್ತೇನೆ.

ಮೇ ತಿಂಗಳ ೫ ರಂದು ಅವನು ಕೆಲವು ಪದಪುಂಜಗಳನ್ನು ಅಸ್ಪಷ್ಟವಾಗಿ ಉಚ್ಚರಿಸಿದ: ನನ್ನ ದೇವರು....ಫ್ರೆಂಚ್ ರಾಷ್ಟ್ರ....ನನ್ನ ಮಗ....ಸೈನ್ಯದ ಮುಖ್ಯಸ್ಥ....ಅಂದು ಸಾಯಂಕಾಲ ೫-೪೯ಕ್ಕೆ ಅವನು ಸತ್ತ. ಮುಂದೆ ೧೫೦ ವರ್ಷಗಳ ಕಾಲ ಎಲ್ಲ ನಿಶ್ಯಬ್ದ.

ಇತ್ತೀಚಿನ ಉತ್ತರಗಳು ಈ ರೀತಿ ಇವೆ:

i. ೧೯೬೦ರ ಮುಂಚಿನ ಭಾಗದಲ್ಲಿ ಸ್ವೀಡನ್ನಿನ ವಿಜ್ಞಾನಿ ಫಾರ್ಶ್ಯುಫಡ್ ನೆಪೋಲಿಯನ್ನನಿಗೆ ಸಂಬಂಧಿಸಿದ ಹಳೆ ಕಡತಗಳನ್ನು ಪರಿಶೀಲಿಸುತ್ತಿದ್ದಾಗ ಅವನು ಕೊನೆಯ ದಿನಗಳಲ್ಲಿ ಬಹುಕಾಲದ ಆರ್ಸೆನಿಕ್ ವಿಷಪ್ರಾಶನದಿಂದ ಉಂಟಾಗುವ ೩೦ ಲಕ್ಷಣಗಳಲ್ಲಿ ೨೨ ರಿಂದ ನರಳುತ್ತಿದ್ದನೆಂಬುದನ್ನು ಗಮನಿಸಿದ. ೧೮೦೦ರ ದಿನಗಳಲ್ಲಿ ಶತ್ರುಗಳನ್ನು ಕೊಲ್ಲಲು ಆರ್ಸೆನಿಕ್ ವಿಷವುಣಿಕೆ ಒಂದು ಸಿದ್ಧ ಮಾರ್ಗವಾಗಿತ್ತು.

ಹೆಚ್ಚು ಪರಿಮಾಣದಲ್ಲಿ ಆರ್ಸೆನಿಕ್ಕನ್ನು ಒಂದೇ ಸಾರಿ ಸೇವಿಸಿದರೆ ತಕ್ಷಣ ಸಾವು ಸಂಭವಿಸುತ್ತದೆ. ಶತ್ರುವನ್ನು ನಿಧಾನವಾಗಿ ಕೊಲ್ಲಬೇಕಾಗಿದ್ದಲ್ಲಿ ಅದನ್ನು ಕಡಿಮೆ ಪರಿಮಾಣದಲ್ಲಿ ಅನೇಕ ದಿನಗಳು ತಿನ್ನಿಸಬೇಕು. ಆರ್ಸೆನಿಕ್ ಸ್ವಲ್ಪ ಸ್ವಲ್ಪವಾಗಿ ಶರೀರವನ್ನು ಸೇರುತ್ತಿದ್ದಂತೆ ಬಲಿಪಶು ಕ್ರಮೇಣ ನಿಶ್ಶಕ್ತನಾಗುತ್ತಾನೆ. ಮೈನಡುಕ, ನಿದ್ರಾಹೀನತೆ, ಅತಿಭೇದಿ, ಮಲಬದ್ಧತೆ, ಕೈಕಾಲುಗಳ ಊತ, ರಕ್ತಹೀನತೆ—ಹೀಗೆ ಅನೇಕ ಉಪದ್ರವಗಳು ಅವನಿಗೆ ಎರಗುತ್ತವೆ. ಅರ್ಬುದ ರೋಗಕ್ಕೂ ಅವನು ತುತ್ತಾಗಬಹುದು.

ಶರೀರವನ್ನು ಸೇರಿದ ಆರ್ಸೆನಿಕ್ ಮೇಲೆ ತಿಳಿಸಿದ ಉಪದ್ರವಗಳನ್ನು ಉಂಟು ಮಾಡುತ್ತ ನಿಧಾನವಾಗಿ ಸ್ವಲ್ಪ ಭಾಗ ಕೂದಲಿನ ಬುಡದಲ್ಲಿ ಸಂಚಯವಾಗುತ್ತದೆ. ಕೂದಲು ಬೆಳೆದಂತೆ ಅದರ ಮೇಲು ಭಾಗಕ್ಕೂ ಬರುತ್ತದೆ. ಆದರೆ ಕೂದಲಿನಲ್ಲಿ ಸೇರುವ ಆರ್ಸೆನಿಕ್ಕಿನ ಪ್ರಮಾಣ ಬಹಳ ಕಡಿಮೆ. ಸಾಂಪ್ರದಾಯಿಕ ವಿಧಾನಗಳಿಂದ ಇದನ್ನು ಪತ್ತೆ ಹಚ್ಚುವುದು ಕಷ್ಟ.

ಐವತ್ತರ ದಶಕದಲ್ಲಿ ಟೊರೆಂಟೊ ವಿಶ್ವವಿದ್ಯಾಲಯದಲ್ಲಿ ಡಾ|| ರಾಬರ್ಟ್ ಜೆ. ಜೆರ್ವಿಸ್ ಎಂಬ ವಿಜ್ಞಾನಿ ಸೂಕ್ಷ್ಮ ಪ್ರಮಾಣದಲ್ಲಿರುವ ರಾಸಾಯನಿಕಗಳನ್ನು ಪತ್ತೆ ಮಾಡುವ ವಿಧಾನವನ್ನು ಕಂಡುಹಿಡಿದ. ಈ ವಿಧಾನ ಹೀಗಿದೆ : ಯಾವ ವಸ್ತುವಿನಲ್ಲಿರುವ ಸೂಕ್ಷ್ಮ ಪ್ರಮಾಣದ ರಾಸಾಯನಿಕಗಳನ್ನು ಪತ್ತೆಮಾಡಬೇಕೊ ಅದನ್ನು ಪರಮಾಣು ರಿಯಾಕ್ಟರುಗಳಲ್ಲಿ ಲಭ್ಯವಿರುವ ಅಧಿಕಶಕ್ತಿ ನ್ಯೂಟ್ರಾನುಗಳಿಂದ ಘಟ್ಟಿಸಬೇಕು. ಆಗ ಆ ವಸ್ತುವಿನಲ್ಲಿರುವ ರಾಸಾಯನಿಕ ಪರಮಾಣುಗಳು ನ್ಯೂಟ್ರಾನುಗಳನ್ನು ಹೀರಿಕೊಂಡು ವಿಕಿರಣಪಟುತ್ವವನ್ನು ಪಡೆಯುತ್ತವೆ. ಹೀಗೆ ಅವು ಪಡೆದುಕೊಂಡ ವಿಕಿರಣ ಪಟುತ್ವವನ್ನು ನಿಖರವಾಗಿ ಅಳತೆ ಮಾಡಬಹುದು.

ಫಾರ್ನ್ಬರೋ ಫಡ್ ಪ್ಯಾರಿಸ್ಸಿನಲ್ಲಿರುವ ಸೈನಿಕ ವಸ್ತುಸಂಗ್ರಹಾಲಯದಿಂದ ನೆಪೋಲಿಯನ್ನನ ಕೆಲವು ಕೂದಲಿನ ಎಳೆಗಳನ್ನು ತರಿಸಿಕೊಂಡು ಅವುಗಳನ್ನು ನ್ಯೂಟ್ರಾನ್ ಸಂಘಟ್ಟಣೆಗೆ ಒಳಪಡಿಸಿ ತತ್ಫಲವಾಗಿ ಸಂಭವಿಸಿದ ವಿಕಿರಣಪಟುತ್ವವನ್ನು ಅಳತೆಮಾಡಿದ. ಅದು ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಪಟುತ್ವಕ್ಕಿಂತ ೧೦೦ ರಷ್ಟು ಹೆಚ್ಚಾಗಿತ್ತು. ಇದರಿಂದ ಬ್ರಿಟಿಷರು ಸಂಚು ನಡೆಸಿ ಆರ್ಸೆನಿಕ್ ವಿಷಪ್ರಾಶನದಿಂದ ನೆಪೋಲಿಯನ್ನನನ್ನು ಕೊಲೆಮಾಡಿರಬಹುದೆಂಬ ವಿಚಾರ ಪ್ರಕಟವಾಯಿತು. ವಿಜ್ಞಾನಿಗಳು ಆ ಕೂದಲಿನ ಎಳೆಗಳನ್ನು ಮಿಲಿಮೀಟರ್ ಉದ್ದದ ಚೂರುಗಳಾಗಿ ಕತ್ತರಿಸಿ ಆ ಚೂರುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನ್ಯೂಟ್ರಾನ್ ಸಂಘಟ್ಟಣೆ ಪ್ರಯೋಗಕ್ಕೆ ಒಳಪಡಿಸಿ ವಿಕಿರಣ ಪಟುತ್ವವನ್ನು ಅಳೆದರು. ಈ ಅಳತೆಗಳು ಚಕ್ರವರ್ತಿಗೆ ಯಾವ ಯಾವ ದಿನಗಳಲ್ಲಿ ಆರ್ಸೆನಿಕ್ ವಿಷಹಾಕಿರಬಹುದು ಎಂಬ ವಿಚಾರವನ್ನೂ ಸರಿಸುಮಾರಾಗಿ ತಿಳಿಸಿದವು. ಅಗೆದು ತೆಗೆದ ನೆಪೋಲಿಯನ್ನನ ಶರೀರದ ಭಾಗಗಳ ಮೇಲೆ ನಡೆಸಿದ ಪ್ರಯೋಗಗಳೂ ಆರ್ಸೆನಿಕ್ ವಿಷಪ್ರಾಶನ ಸಿದ್ಧಾಂತಕ್ಕೇ ಇಂಬುಗೊಟ್ಟವು.

ii. ಬ್ರಿಟಿಷರು ಒಳಸಂಚು ನಡೆಸಿ ನೆಪೋಲಿಯನ್ನನನ್ನು ಕೊಂದಿರಲಾರರು ಎಂಬ ಇನ್ನೊಂದು ಅಭಿಪ್ರಾಯವೂ ಇದೆ ;

ಮನುಷ್ಯನ ಶರೀರವನ್ನು ಆರ್ಸೆನಿಕ್ ಆಹಾರದ ಮೂಲಕವೆ ಸೇರಬೇಕೆಂದಿಲ್ಲ; ಅದು ಇರುವ ಗಾಳಿಯನ್ನು ಒಳಕ್ಕೆ ಸೇದಿಕೊಂಡರೂ ಆಗುತ್ತದೆ. ಇಂಥ ಆಲೋಚನೆಯಿಂದ ಪ್ರೇರಿತನಾದ ನ್ಯೂಕ್ಯಾಸಲ್ ವಿಶ್ವವಿದ್ಯಾಲಯದ ಭೌತರಸಾಯನ ವಿಭಾಗದ ಡಾ|| ಡೇವಿಡ್‌ಜೋನ್ಸ್ ೧೯೮೩ರಲ್ಲಿ ಇಟಲಿಯ ಸಾವಯವ ರಾಸಾಯನ ತಜ್ಞ ಇ. ಗೋಸಿಯೊ ನಡೆಸಿದ ಸಂಶೋಧನೆಗಳನ್ನು ಮರುಪರಿಶೀಲಿಸಿ, 'ಅವನಿಗೆ ನಂಜು ಸೇರಿದ್ದು ನಿಜ, ಆದರೆ ಅದು ಒಳಸಂಚಿನಿಂದ (ನಡೆದದ್ದು) ಎಂದು ಕಾಣಿಸುವುದಿಲ್ಲ', ಎಂದು ತಿಳಿಸಿದ (೧೯೮೨). ಅವನು ಕೊಡುವ ವಿವರಣೆ ಹೀಗಿದೆ: ನೆಪೋಲಿಯನ್ನನನ್ನು ಸೆರೆಯಲ್ಲಿಟ್ಟಿದ್ದ ಲಾಂಗ್‌ವುಡ್ ಮನೆಯ ಅಲಂಕಾರಕ್ಕೆ ಬಳಸಿದ್ದ ಗೋಡೆ ಕಾಗದದಲ್ಲಿ ಹಸುರು ವರ್ಣದ್ರವ್ಯವೊಂದಿತ್ತು. ಅದರಲ್ಲಿ ಆರ್ಸೆನಿಕ್ ಸಂಯುಕ್ತವೊಂದು (ಕಾಪರ್ ಆರ್ಸಿನೈಟ್) ಸೇರಿತ್ತು. ಕಾಗದ ಒದ್ದೆಯಾದಾಗ ಅದರ ಮೇಲೆ ಬೂಷ್ಟು ಕಾಣಿಸಿಕೊಳ್ಳುತ್ತಿತ್ತು. ಇಂಥ ಬೂಷ್ಟಿನಿಂದ ಹೊರಬರುವ ಧೂಮದಲ್ಲಿ ಆರ್ಸೆನಿಕ್ ಟ್ರೈ ಮಿಥೈಲ್ ಇರುತ್ತದೆ. ನೆಪೋಲಿಯನ್ ಈ ಧೂಮವನ್ನು ಒಳಕ್ಕೆ ಸೇದಿಕೊಳ್ಳುತ್ತಿದ್ದುದರಿಂದ ಕ್ರಮೇಣ ಅವನ ಶರೀರದಲ್ಲಿ ಸಾಕಷ್ಟು ಆರ್ಸೆನಿಕ್ ಸೇರಿ ಅವನು ಸತ್ತ. ನೆಪೋಲಿಯನ್ನನ ಜೊತೆಗಿದ್ದ ಬೇರೆ ಸೆರೆಯಾಳುಗಳೂ ಈ ವಿಷಾನಿಲದ ಸೇವನೆಯಿಂದ ನರಳಿದ್ದರು. ಇದಕ್ಕೆ ಸಾಕಷ್ಟು ಆಧಾರಗಳಿವೆ.

ನೆಪೋಲಿಯನ್ನನ ಸಾವಿನ ಬಗ್ಗೆ ಇರುವ ವಿವಾದಕ್ಕೆ ಒಂದು ಕೊನೆ ಸಿಕ್ಕಲಾರದು. ಚಕ್ರವರ್ತಿಯ ಉಯಿಲು ವಿಷಪ್ರಾಶನದ ಕಡೆಗೇ ಬೊಟ್ಟುಮಾಡಿ ತೋರಿಸುತ್ತದೆ. ಇದನ್ನು ನಂಬುವವರಿಗೆ ಒಳಸಂಚು ಸಿದ್ಧಾಂತ ಒಪ್ಪಿಗೆಯಾಗುತ್ತದೆ. ಉಳಿದವರಿಗೆ ಜೋನ್ಸನ ತೀರ್ಮಾನ ಹಿಡಿಸುತ್ತದೆ. ಈ ಎರಡೂ ಅಭಿಪ್ರಾಯಗಳು ವಿಜ್ಞಾನದ ಹಾದಿಯಲ್ಲಿ ಮೂಡಿ ಬಂದಿರುವುದು ಸೋಜಿಗದ ಸಂಗತಿ. ಸಮಕಾಲೀನ ಇತಿಹಾಸ ಕೊಟ್ಟ ಉತ್ತರ ಮಾತ್ರ ಹಿಂದಕ್ಕೆ ಬಿದ್ದಂತೆಯೆ ಸರಿ.

(ವಿವಿಧ ಮೂಲಗಳಿಂದ)

ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ! ನಮ್ಮ ಎಷ್ಟು ತಪ್ಪುಗಳನ್ನು, ಎಂಥೆಂಥ ಮೋಸಗಳನ್ನು ಸಹಿಸುತ್ತಾನೆ.

ಗಾಂಧೀಜಿ

ಬಂಕಿಮಚಂದ್ರರ ಕೆಲವು ಮರೆತ ನೆನಪುಗಳು

ಲೇ : ಶ್ರೀಹರಿಮೋಹನ್‌ಶರ್ಮಾ ಅನು : ಮೂರ್ತಿರಾಮನಾಥಪುರ

ಭಾರತ ಸ್ವಾತಂತ್ರ್ಯ ಸಂಗ್ರಾಮದ ಆಧಾರದಮೇಲೆ ಬರೆಯಲ್ಪಟ್ಟ ಅನೇಕ ಕಾದಂಬರಿಗಳಲ್ಲಿ "ಆನಂದಮಠ"ದ ಸ್ಥಾನ ಬಹಳ ಮಹತ್ವವಾದದ್ದು ಹಾಗೂ ವಿಶೇಷವಾದದ್ದು. ಈ ಕಾದಂಬರಿಯೇ ಎಲ್ಲ ರಾಷ್ಟ್ರೀಯ ಭಾವನಾಪ್ರೇರಕ ಶಕ್ತಿಯಿಂದ ಕೂಡಿದ ಗೀತೆ 'ವಂದೇ ಮಾತರಂ' ಅನ್ನು ರಾಷ್ಟ್ರಕ್ಕೆ ಕೊಟ್ಟದ್ದು. ಅದರ ಬಗ್ಗೆ ಬಂಕಿಮಚಂದ್ರರೇ ಭವಿಷ್ಯವಾಣಿ ನುಡಿದಿದ್ದರು: "ನಾನು ಬದುಕಿಲ್ಲದಾಗ ಇದರ ಮೌಲ್ಯ ತಿಳಿಯಲ್ಪಡುತ್ತದೆ. ಆದರೆ ಈ ಗೀತೆ (ಹಾಡು) ಇಡೀ ರಾಷ್ಟ್ರವನ್ನೇ ಜಾಗ್ರತಗೊಳಿಸಿ ಶ್ರೇಯಸ್ಸಿನ ಕಂಠಹಾರವಾಗುತ್ತದೆ....ದೇಶ ಕಳೆದುಕೊಂಡ (ನಾಶವಾದ) ಸ್ವಾತಂತ್ರ್ಯವನ್ನು ಮತ್ತೊಮ್ಮೆ ಹೇಗೆ ಪಡೆಯಲು ಸಾಧ್ಯ ಎಂಬುದನ್ನೇ ನಾನು 'ಆನಂದಮಠ್' ಮೂಲಕ ತೋರಿಸಿದ್ದೇನೆ".

ಹಲವಾರು ವಿಶೇಷ ಕಾರಣಗಳಿಂದ ನಾವು ಮಾತೃಭೂಮಿಯ ಅಮರ ವಂದನೆ—'ವಂದೇ ಮಾತರಮ್'ನ ಸ್ಮರಣೆಯನ್ನು ಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಕೆಲವರು ಆ ಪವಿತ್ರ ಮಹಾ ಮಂತ್ರದ ವಿರುದ್ಧ ಸಂಕುಚಿತ ತರ್ಕವನ್ನು ಮಂಡಿಸುವುದಾದರೆ, ಇತಿಹಾಸದ ಜ್ಞಾತ ಸತ್ಯದ ಮೇರೆಗೆ [ಬಂಗಾಳದ ವಿದ್ರೋಹ] ಶ್ರೇಷ್ಠ ಪಾತ್ರಗಳನ್ನು ಸೃಷ್ಟಿಸಿ, ಎಲ್ಲದರಲ್ಲೂ ತನ್ನ ಬಹುಮುಖ ಭಾವಧಾರೆಯ ಆದರ್ಶವಾದ ರೂಪಕೊಟ್ಟು ಅವರು ಈ ಕಾದಂಬರಿಯನ್ನು ಬರೆದಿದ್ದರು ಎನ್ನುವ ಸತ್ಯವನ್ನು ನಾವು 'ನ'ಕಾರಗೊಳಿಸುವಂತಿಲ್ಲ. 'ವಂದೇ ಮಾತರಮ್' ನ ಸೃಷ್ಟಿಯ ಮುನ್ನ, ಜನ್ಮಭೂಮಿಯ ಮಾತೃ ರೂಪದ ದರ್ಶನ ೧೮೭೫ರಲ್ಲಿ ತಮ್ಮ 'ಕಮಲಾಕಾಂತ್ ಕೀ ಬೈಠಕೋ' ಎಂಬ ಗ್ರಂಥದಲ್ಲಿ ಮಾಡಿದ್ದರು.

೧೯೮೪ರ ಜೂನ್ 'ನವನೀತ' ಹಿಂದಿ ಮಾಸಿಕದಲ್ಲಿ ಪ್ರಕಟವಾದ "ಬಂಕಿಮ ಬಾಬೂಕಿ ಕುಛ್ ಭೂಲೀಹುಈ ಯಾದೇ" ಲೇಖನದ ಅನುವಾದ.

ಆನಂದಮಠದ ಉದ್ದೇಶ :

೧೭೭೩ ರಲ್ಲಿ ನಡೆದ 'ಸಂನ್ಯಾಸಿ ದಂಗೆ'ಯ ಉಲ್ಲೇಖವನ್ನು ತಮ್ಮ ಐತಿಹಾಸಿಕ ಗ್ರಂಥಗಳಲ್ಲಿ ವಾರೆನ್ ಹೇಸ್ಟಿಂಗ್ಸ್ ಒಳಗೊಂಡಂತೆ ಅನೇಕ ಇತಿಹಾಸ ಲೇಖಕರು ಬರೆದಿದ್ದಾರೆ. ಅದರಲ್ಲಿ ಸಂನ್ಯಾಸಿಗಳ ಸಂಖ್ಯೆ, ಅವರ ಕಾರ್ಯಕ್ಷೇತ್ರ ಹಾಗೂ ಉಳಿದ ಸಂಬಂಧಿತ ಘಟನೆಗಳ ವಿಸ್ತೃತ ತಿಳುವಳಿಕೆ ಸೇರಲ್ಪಟ್ಟಿದೆ.

ಬಂಕಿಮ್ ಚಂದ್ರರು 'ಆನಂದಮಠ' ಬರೆದ ಉದ್ದೇಶವೇನೆಂದು ಆಂಗ್ಲ ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತಿತ್ತು. ೧೯೦೬ ಸೆಪ್ಟಂಬರ್ ೨೪ ರಂದು 'ಟೈಮ್ಸ್'ನಲ್ಲಿ ಆನಂದಮಠದ ಬಗ್ಗೆ ಜೆ. ಡಿ. ಎಂಡರರಲ್ ಸ್ಪಷ್ಟವಾಗಿ ಬರೆದಿದ್ದರು : 'ಈ ಕಾದಂಬರಿಯಲ್ಲಿ ವರ್ಣಿತವಾದ ದಂಗೆಯೊಡನೆ ಮಾತೆಯ ವಿಭಿನ್ನರೂಪ ಮಾತೃಭೂಮಿಯ ಪ್ರತೀಕ ರೂಪವೇ' ಎಂದು. ಇಂಗ್ಲೀಷಿನಲ್ಲಿ 'ಆನಂದಮಠ'ದ ಅನುವಾದ 'ಅಬ್ಬೆ ಆಫ್ ಬ್ಲಿಸ್' ಎಂಬ ಹೆಸರಿನಿಂದ ಪ್ರಕಾಶಿತವಾಗಿತ್ತು. ಶ್ರೀ ಅರವಿಂದರು, 'ವಂದೇ ಮಾತರಮ್' ಗೀತೆಯ ಇಂಗ್ಲೀಷ್ ಗದ್ಯ ಮತ್ತು ಪದ್ಯಾನುವಾದ ಮಾಡಿದ್ದರು. ಬಹುಶಃ ಎಲ್ಲಭಾರತೀಯ ಭಾಷೆಗಳಲ್ಲಿಯೂ ಸಹ ಇದರ ಅನುವಾದವಾಗಿದೆ.

'ವಂದೇ ಮಾತರಮ್' ಶಬ್ದ ಹಾಗೂ ಗೀತೆಯ ಐತಿಹಾಸಿಕ ಮಹತ್ವದ ಮೇಲೆ ಬೆಳಕು ಚೆಲ್ಲುತ್ತಾ ಶ್ರೀ ಸಾಧನಚಂದ್ರ ಸೇನ್‌ರವರು ತಮ್ಮ ದೀರ್ಘ ಪ್ರಬಂಧದಲ್ಲಿ —"ಇದಕ್ಕಿಂತ ಮುನ್ನಿನ ಅಂದರೆ ಮೂಲ ವಿಷಯಕ್ಕೆ ನಾವು ಬರೋಣ. ಇದರ ಕರ್ತೃ ಸ್ವರ್ಗೀಯ ಬಂಕಿಮಚಂದ್ರರ ಜೀವನ ಹಾಗೂ ಅವರ ಕ್ರಾಂತಿಕಾರಿಗ್ರಂಥ 'ಆನಂದ ಮಠ'ದ ಸಂಕ್ಷಿಪ್ತ ಚರ್ಚೆ ಮಾಡೋಣ. ಈ ಆಧಾರದ ಮೇಲೆಯೇ ಈ ಗೀತೆಯ ಸರ್ವವ್ಯಾಪಕತೆ, ದೇಶಭಕ್ತಿ ಹಾಗೂ ಕ್ರಾಂತಿಕಾರಿ ಭಾವನೆಗಳನ್ನು ಚೆನ್ನಾಗಿ ತಿಳಿಯಬಹುದೆಂಬುದೇ ಕಾರಣ." ಈ ವಿಷಯಕ್ಕೆ ಬರುವ ಮುನ್ನ ಬಂಕಿಮ ಬಾಬೂರವರ ಸ್ವಲ್ಪ ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು.

ಕಲ್ಕತ್ತಾ ವಿಶ್ವವಿದ್ಯಾಲಯದ ಮೊದಲ ಸ್ನಾತಕರು :

ಬಂಕಿಮ ಬಾಬುಗಳ ಜನ್ಮ ೨೭ ನೇ ಜೂನ್, ೧೮೩೮ ಕ್ಕೆ ೨೪ ಪರಗಣ ಜಿಲ್ಲೆಯ ಕಾಠಾಲಾ ಪುರ ಗ್ರಾಮದಲ್ಲಾಯಿತು. ಅವರ ಕುಟುಂಬದ ಬಹುಶಃ ಎಲ್ಲ ಸದಸ್ಯರೂ ವಿದ್ಯಾವಂತರು ಮತ್ತು ಸಾಹಿತ್ಯಾಸಕ್ತರಾಗಿದ್ದರು. ಐದು ವರ್ಷದ ಬಂಕಿಮರ ಶಿಕ್ಷಣ ಆರಂಭವಾದಾಗ, ಅವರು ಒಂದೇ ದಿನದಲ್ಲಿ ವರ್ಣ–ಪರಿಚಯ (ಅಕ್ಷರ ಜ್ಞಾನ) ಪಡೆದುಕೊಂಡಿದ್ದರು. ೧೬ ನೇ ವಯಸ್ಸಿಗೇ ಹುಬಲೀ ಕಾಲೇಜ್‌ನಲ್ಲಿ ಪ್ರವೇಶ ಪಡೆದಿದ್ದರು. ಒಮ್ಮೆ ಓದಿದ ವಿಷಯವೇನೇ ಇರಲಿ ಅವರ ನೆನಪಿನಲ್ಲಿ ಉಳಿಯುತ್ತಿತ್ತು. ಸಾಹಿತ್ಯ, ಗಣಿತ, ಇತಿಹಾಸ ಮುಂತಾದ ವಿಷಯಗಳ ಮೇಲೆ ಅವರಿಗೆ ಅಸಾಮಾನ್ಯ ಅಧಿಕಾರವಿತ್ತು.

೧೮೫೮ ಕ್ಕೆ ಆಂಗ್ಲರು ಮೊಟ್ಟ ಮೊದಲಿಗೆ ಬಂಗಾಳದಲ್ಲಿ ಬಿ. ಎ. ಪರೀಕ್ಷೆ ಆರಂಭಿಸಿದಾಗ ಬಂಕಿಮರು ಕೇವಲ ಎರಡು ತಿಂಗಳ ತಯಾರಿಯಿಂದಲೇ ಪರೀಕ್ಷೆಗೆ ಕುಳಿತು ಸರ್ವಪ್ರಥಮರಾಗಿ ಉತ್ತೀರ್ಣರಾದರು.

ಸಂನ್ಯಾಸಿಗಳ ಬಗೆಗಿನ ಬಂಕಿಮರ ಭಕ್ತಿ ತಾಯಿ–ತಂದೆಗಳ ಭಕ್ತಿಯಂತೆಯೇ ಪ್ರಖರವಾಗಿತ್ತು. ಬ್ರಹ್ಮಪುರದಲ್ಲಿದ್ದಾಗ ಅವರ ತಾಯಿ ಸ್ವರ್ಗಸ್ಥರಾದರು. ಆಗ ಶೋಕತಪ್ತರಾಗಿ ಹೆಗಲಮೇಲೊಂದು ಉತ್ತರೀಯ, ದೇಹಕ್ಕೊಂದು ಪಂಚೆಯ ತುಂಡು ಸುತ್ತಿಕೊಂಡು ಬರಿಗಾಲಲ್ಲಿಯೇ ಕಚೇರಿಗೆ ಹೋಗುತ್ತಿದ್ದರು. ಇದೇ ಸ್ಥಿತಿಯಲ್ಲಿ ಒಂದು ದಿನ ಅವರು ರೈಲ್ ಗಾಡಿಯಿಂದ ಮನೆಗೆ ಹೋಗಲು ದ್ವಿತೀಯ ದರ್ಜೆ ಬೋಗಿಯನ್ನು ಹತ್ತಿದ್ದಾಗ, (ಇಂಗ್ಲೀಷರು) ಆಂಗ್ಲರು ಶರಾಬು ಕುಡಿಯುವುದನ್ನು ಕಂಡರು. ಬಂಕಿಮರ ದೇಹದ ಮೇಲೆ ಅಲ್ಪ ವಸ್ತ್ರವನ್ನು ಕಂಡ ಇಬ್ಬರು ಆಂಗ್ಲರು ಇವರ ಮೇಲೆ ಕೋಪಗೊಂಡು ಗಾಡಿಯಿಂದ ಇಳಿಯಲು ಹೇಳಿದರು. ಬಂಕಿಮರು ಬಹಳ ಧೈರ್ಯವಾಗಿ ಮುಖ ಮುರಿಯುವಂತೆ ಉತ್ತರಿಸಿದರು. ಪ್ರವಾಹ ರೀತಿಯಲ್ಲಿಯ ಬಂಕಿಮರ ಆಂಗ್ಲ ಭಾಷೆಯಲ್ಲಿನ ರೇಗುವಿಕೆಯನ್ನು ಕೇಳಿ ಅವರಿಬ್ಬರೂ ಆ ಗಾಡಿಯನ್ನೇ ಬಿಟ್ಟು ಓಡಿದರು.

ಒಮ್ಮೆ ಆಂಗ್ಲನೊಬ್ಬ ಶ್ರಾದ್ಧ–ಪಕ್ಷದ ಚರ್ಚೆಯನ್ನು ಆರಂಭಿಸಿದಾಗ ಬಂಕಿಮರು ಕೊಟ್ಟ ಬಿರುನುಡಿಗಳಿಂದ ಗಪ್–ಚಿಪ್ ಆದನು. ತಮ್ಮ ಸಾಹಸ ತೋರಿಸುವುದರಲ್ಲಿ ಅವರೆಂದೂ ಹೆದರಿದವರಲ್ಲ. ಹೀಗಾಗಿಯೇ ಉನ್ನತ ಆಂಗ್ಲ ಅಧಿಕಾರಿಗಳೂ ಸಹ ಇಂತಹ ನ್ಯಾಯನಿಷ್ಠ, ಕರ್ತವ್ಯನಿಷ್ಠ, ನಿರ್ಭೀತ ಮತ್ತು ತೇಜಃಪೂರ್ಣ ಭಾರತೀಯರನ್ನು ಗೌರವದಿಂದ ಕಾಣುತ್ತಿದ್ದರು.

ತಾವು ನಿರ್ಭೀತರಾಗಿದ್ದರೂ, ಅವಕಾಶ ಸಿಕ್ಕಾಗ ಅವರೊಡನೆ ಯಾವಾಗಲೂ ಹೋರಾಟ ನಡೆಸುತ್ತಲೇ ಇರುತ್ತಿದ್ದರು. ಒಮ್ಮೆ ದುಷ್ಟ ಆಂಗ್ಲರ ಅತ್ಯಾಚಾರ ಸಹಿಸಲಾರದೆ ಅವರು ೧೮೯೦ ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಇತ್ತರು. ಮತ್ತು ನಿರ್ಧನರ ಹಾಗೂ ಶೋಷಿತರಾದ ದೇಶವಾಸಿಗಳ ಕ್ಷೇಮಕ್ಕೆ, ಅವರ ನಡುವೆಯೇ ಇದ್ದು ಕೆಲಸ ಮಾಡಲು ನಿಶ್ಚಯಿಸಿದರು. ಸರ್ಕಾರಿ ನೌಕರಿ ಬಿಡುವಾಗಲೂ ಸಹ ಅವರು ಒಂದು ವರ್ಷದವರೆಗೆ ಆಂಗ್ಲ ಅಧಿಕಾರಿಗಳೊಂದಿಗೆ ಹೋರಾಡಬೇಕಾಯಿತು. ಈ ಸಮಯದಲ್ಲಿಯೇ ಅವರು ಭಗವದ್ಗೀತೆ ಮುಂತಾದ ಪ್ರಾಚೀನ ಧಾರ್ಮಿಕ ಗ್ರಂಥಗಳ ಅಧ್ಯಯನ ಮತ್ತು ಪ್ರಚಾರ ಮಾಡಿದರು.

ಎಲ್ಲ ಧರ್ಮಕ್ಕೂ ಮೇಲಾದದ್ದು ಸ್ವದೇಶಪ್ರೇಮ:

ಸಮಾಜ–ಕಲ್ಯಾಣ ಕಾರ್ಯವನ್ನೇ ಅವರು ದೇಶಪ್ರೇಮದ ಮೂಲಮಂತ್ರವೆಂದು ಒಪ್ಪುತ್ತಿದ್ದರು. 'ಧರ್ಮತತ್ವ'ವೆಂಬ ಹೆಸರಿನ ತಮ್ಮ ಪುಸ್ತಕದ ಕೊನೆಯಲ್ಲಿ ಅವರು, "ಎಲ್ಲ ಧರ್ಮಗಳಿಗೂ ಮೇಲಾದದ್ದು ಸ್ವದೇಶಧರ್ಮ. ಇದನ್ನು ಮರೆಯಬಾರದು" ಎಂದು ಬರೆದಿದ್ದಾರೆ. ಇದೇ ಪುಸ್ತಕದ ೮ನೇ ಅಧ್ಯಾಯದಲ್ಲಿ, "ಆತ್ಮರಕ್ಷಣೆ ಹಾಗೂ ಸ್ವದೇಶ ರಕ್ಷಣೆಗಾಗಿ ಶಾರೀರಿಕ ಶಿಕ್ಷಣವನ್ನು ಹೊಂದಬೇಕಾದ್ದು ನಮ್ಮ ಪವಿತ್ರ ಕರ್ತವ್ಯವಾಗಿದೆ" ಎಂದೂ ಬರೆದಿದ್ದಾರೆ. ತಮ್ಮ 'ಸೀತಾರಾಮ್' ಅನ್ನೋ ಗ್ರಂಥದಲ್ಲಿ "ಹಿಂದೂಸ್ಥಾನವನ್ನು ಒಂದು ವೇಳೆ ಹಿಂದೂವಾಗಿ ಉಳಿಸದಿದ್ದರೆ ಮತ್ಯಾರು ಉಳಿಸುವವರು?" ಎಂದು ಬರೆದಿದ್ದಾರೆ.

ಬಂಕಿಮಚಂದ್ರರು ಹೇಳುತ್ತಿದ್ದಂತೆ ಮಾಡುತ್ತಲೂ ಇದ್ದರು. ಬಂಗಾಳದ ಭೀಷಣ (ಭಯಂಕರ) ಕ್ಷಾಮದ ದೃಶ್ಯ ಯಾವಾಗಲೂ ಅವರ ಮಾನಸಪಟಲದಲ್ಲಿ ಹರಡಿತ್ತು. ೧೮೮೧ರಲ್ಲಿ ಬರಹಮ್‌ಪುರ್‌ದಲ್ಲಿ ಆಂಗ್ಲ ಅಧಿಕಾರಿ ಡಫರಿನ್ ಹಾಗೂ ಹಾವಡಾದ ಕಲೆಕ್ಟರ್‌ರ ಜತೆ ಉಂಟಾದ ಘರ್ಷಣೆಗೂ ಆನಂದಮಠವೊಂದಿಗೆ ಗಾಢ ಸಂಬಂಧವಿದೆ.

ಆನಂದಮಠದ ಇತಿಹಾಸದ ಬಗ್ಗೆ ಪ್ರಶ್ನಿಸುವ ಜನಗಳಿಗೆ ಬಂಕಿಮಚಂದ್ರರು ಹೇಳುತ್ತಿದ್ದುದು—'ಸಂನ್ಯಾಸಿದಂಗೆ ನಿಜಕ್ಕೂ ಒಂದು ಐತಿಹಾಸಿಕ ಘಟನೆ. ಹಂಟರ್ ಬಂಗಾಳದ ಹಳ್ಳಿಗಳ ಬಗ್ಗೆ ಬರೆದ ಪುಸ್ತಕದಲ್ಲಿ ಈ ಸಂನ್ಯಾಸಿದಂಗೆಯ ಉಲ್ಲೇಖವಿದೆ. ಆನಂದಮಠವನ್ನು ಕೇವಲ ಒಂದು ಚಾರಿತ್ರಿಕ ಕಾದಂಬರಿಯಾಗಿ ತಿಳಿಯಬಾರದೆಂದೇ ನಮ್ಮ ಓದುಗರಲ್ಲಿ ನನ್ನ ಒತ್ತಾಯ.'

ಆನಂದಮಠದಲ್ಲಿ ಕಲೆಯ ಕೊರತೆ ಇದೆ ಎಂಬ ಒಬ್ಬ ಸಮೀಕ್ಷಕರ ಟಿಪ್ಪಣಿಯ ಬಗ್ಗೆ ಬಂಕಿಮ್‌ಬಾಬೂ, "ಉನ್ನತಿ ಹೊಂದದ ಸ್ವಾರ್ಥಿಗಳು ಮತ್ತು ವಂದೇ ಮಾತರಂ ಹೇಳುವ ಸ್ಥಳದಲ್ಲಿ ಹೇಳದವರಿಗೆ ಆನಂದಮಠದ ಮೂಲಮಂತ್ರವನ್ನು ತಿಳಿಸಿ ನಾನೇನು ಮಾಡಲಿ?" ಎಂದು ಹೇಳಿದ್ದರು.

ಆನಂದಮಠ ಬರೆಯುವುದಕ್ಕೆ ಬಹಳ ಮೊದಲೇ ಅವರು 'ವಂದೇ ಮಾತರಂ' ರಚನೆ ಮಾಡಿದ್ದರು. ಮೊಟ್ಟಮೊದಲಿಗೆ, ಅವರ ಮಿತ್ರ ಕ್ಷೇತ್ರನಾಥರು ಈ ಗೀತೆಯನ್ನು ಮಲ್ಹಾರ ಸ್ವರದಲ್ಲಿ ಕಟ್ಟಿದ್ದರು. ಮತ್ತು ಬಂಕಿಮ ಬಾಬುಗಳ ಸ್ಥಳದಲ್ಲಿ (ಉಂಟಾಗುವ) ನಡೆಯುವ ಸಭೆಗಳಲ್ಲಿ ಅದನ್ನು ಹಾಡಿ ತಿಳಿಸುತ್ತಿದ್ದರು. ೧೮೯೫ರಲ್ಲಿ ಬಂಗಾಳಿ ಪತ್ರಿಕೆ 'ಭಾರತೀಯ'ದಲ್ಲಿ ಶ್ರೀಮತಿ ಸರಳಾದೇವಿಯವರು ವಂದೇ ಮಾತರಮ್‌ಗೆ ಸ್ವರಲಿಪಿಯನ್ನು ಮೊಟ್ಟ ಮೊದಲಿಗೆ ಪ್ರಕಟಿಸಿದ್ದರು. ಗೀತೆ ಬಂಕಿಮಚಂದ್ರರದ್ದೆಂದು, ಸ್ವರ ಶ್ರೀ ರವೀಂದ್ರನಾಥ ಠಾಗೂರರದ್ದೆಂದು ಅದರಲ್ಲಿ ಬರೆದಿತ್ತು. ೧೮೯೬ರಲ್ಲಿ ರವೀಂದ್ರರು ಇದನ್ನು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ರಾಷ್ಟ್ರಗೀತೆಯ ರೂಪದಲ್ಲಿ ಹಾಡಿದ್ದರು. ೧೯೦೬ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ವಂದೇ ಮಾತರಂ ಸಂಪ್ರದಾಯ' ಎಂಬ ಹೆಸರಿನ ಸಂಘಟನೆಯೊಂದು ಇದನ್ನು ಸಾಮೂಹಿಕವಾಗಿ ಬಳಸಿಕೊಂಡಿತ್ತು.

ರಾಷ್ಟ್ರೀಯ ಚೈತನ್ಯದ ಪ್ರವರ್ತಕ :

ಕಾಮ್ರೇಡ್ ಸರೋಜ್ ಮುಖರ್ಜಿಯವರು ಆನಂದ್‌ಮಠವನ್ನು ರಾಷ್ಟ್ರೀಯ ಐಕ್ಯತೆಯ ವಿರೋಧಿ ಕಾದಂಬರಿಯೆಂದು ಘೋಷಿಸಿದಾಗ ಪ್ರಖ್ಯಾತ ಮಾರ್ಕ್ಸ್‌ವಾದಿ ಚಿಂತಕ ಹಾಗೂ ಅಧ್ಯಾಪಕರಾದ ಡಾ॥ ಅರವಿಂದ್ ಪೋದ್ದಾರರು ತಮ್ಮ ಕೃತಿ 'ಬಂಕಿಮ ಮಾನಸ'ದಲ್ಲಿ—"ಆನಂದ್‌ಮಠದ ಸಂತಾನಗಳನ್ನು ಸಾಧನೆಗಳು (ಇದರ ಆರಂಭದಲ್ಲಿ ಇತಿಹಾಸ ಲೇಖಕರಾದ ಶ್ರೀ ಬ್ಯಾನರ್ಜಿಯವರ ಅಭಿಪ್ರಾಯದಂತೆ, ಸರ್ವ ಪ್ರಥಮ ಕ್ರಾಂತಿಕಾರಿ ರಾಷ್ಟ್ರಪತಿ ಶಿವಾಜಿಯ ಬಳಿಯಲ್ಲಿ ಅನುಯಾಯಿ ವಾಸುದೇವ ಬಲವಂತ್ ಫಡಕೆ ಇದ್ದರು.) ಮತ್ತು ಸಂಗ್ರಾಮ ಸಿದ್ಧಿಯ ವರ್ಣನೆಯ ಮೂಲಕ

ಬಂಕಿಮರು—ಪ್ರತಿಯೊಬ್ಬ ಸಮಕಾಲೀನನೂ ಅದರಲ್ಲಿ ತನ್ನದೇ ಮನೋಭಿಲಾಷೆಯನ್ನು ಬದಲಾಯಿಸಿರುವುದನ್ನು ನೋಡಿರುವಂತೆ ಅದ್ಭುತವಾಗಿ ಆನಂದಪೂರ್ವಕ, ಸಹೃದಯತೆಯಿಂದ ಮತ್ತು ಆದರ್ಶವಾಗಿ ಅಂಕಿತಗೊಳಿಸಿದ್ದಾರೆ" ಎಂದು ಬರೆದಿದ್ದರು. ಈ ಕಾರಣದಿಂದಲೇ ಈ ಕಾದಂಬರಿ ರಾಷ್ಟ್ರೀಯ ಚೈತನ್ಯದಲ್ಲಿ ಒಂದು ವಿರಾಟ್‌ರೂಪವಾದ ಅಲ್ಲೋಲ-ಕಲ್ಲೋಲವನ್ನು ಸೃಷ್ಟಿಸುವುದರಲ್ಲಿ ಸಮರ್ಥವಾಯಿತು. ಇದರಿಂದ ಭಾರತೀಯರ ನಿರಾಶೆಯಿಂದಾವರಿಸಿದ ವರ್ತಮಾನವನ್ನು ಸ್ವಪ್ನಮಯವಾದ ಭವಿಷ್ಯದ ಸಂಭಾವ್ಯತೆಗಳಿಂದ (ಬಣ್ಣ ಕಟ್ಟಿ) ವರ್ಣಿಸಿದರು. ಆನಂದಮಠದ ಶಕ್ತಿ ಮತ್ತು ಸಾರ್ಥಕತೆ ಈ ತಥ್ಯದಲ್ಲಿಯೇ ಸೇರಿಕೊಂಡಿದೆ. ಯೋಜನಾಬದ್ಧ ರಾಜಕೀಯ ಕ್ರಿಯೆ ಮತ್ತು ಸಂಘಟನೆ ಯಾವ ಪರಿಕಲ್ಪನೆಗೆ ಆನಂದಮಠದಲ್ಲಿ ಭಾಷೆ ಸಿಕ್ಕಿತು, ಅದರಲ್ಲಿಯೂ ಸಮಕಾಲೀನ ರಾಜನೈತಿಕ ಚಳುವಳಿಯ ಶಕ್ತಿ ಮತ್ತು ದೂರದರ್ಶಿತ್ವದ ಮುದ್ರೆ ಒತ್ತಿತು. ಅದು ಸ್ಪಷ್ಟವಾಗಿದೆ—" ಎಂದಿದ್ದಾರೆ.

ಯೋಗಿಗಳಾದ ಅರವಿಂದರು ಬಂಕಿಮಚಂದ್ರರ ಬಗ್ಗೆ ಹೇಳುತ್ತಾ—"ಅವರು ನಮಗೆ 'ವಂದೇ ಮಾತರಂ' ರೂಪದಲ್ಲಿ ನವಭಾರತವನ್ನು ನಿರ್ಮಿಸುವ ಉದ್ಬೋಧಕ ಮಂತ್ರವನ್ನು ಕೊಟ್ಟು ಕೃತಾರ್ಥಗೊಳಿಸಿದ್ದಾರೆ. ಅವರ ರಚನೆಗಳ ಪ್ರಮುಖ ಉದ್ದೇಶವೆಂದರೆ—ಸ್ವದೇಶಪ್ರೇಮರೂಪಕ ಧರ್ಮ....ಇಂದು ನಮ್ಮ ದೇಶ ಉತ್ಸಾಹವರ್ಧಕ ಪ್ರವೃತ್ತಿಮಾರ್ಗದಲ್ಲಿ ಯಾವ ಕುಂಟುಹೆಜ್ಜೆ ಹಾಕುತ್ತಿದೆ (ಮುನ್ನುಗ್ಗಲು, ಮುಂದುವರಿಯಲು), ಅದರ ಪ್ರಣೇತಾ ಮತ್ತು ಆಧ್ಯಾತ್ಮಿಕ ಗುರು ಬಂಕಿಮಚಂದ್ರರೇ. ಅವರು ನಮ್ಮ ಕಣ್ಣುಗಳೆದುರಿಗೆ ಭಾರತ ಮಾತೆಯ ಪ್ರತ್ಯಕ್ಷ ರೂಪವನ್ನು ತೆರೆದು ತೋರಿಸಿದ್ದೇ, ರಾಷ್ಟ್ರದ ಬಗೆಗಿನ ಅವರ ಸರ್ವೋತ್ತಮ ಸೇವೆ"—ಎಂದು ತಿಳಿಸಿದ್ದರು.

ದೇವರಿಗೆ ಭಯ ಪಡಬೇಕು ; ಮನುಷ್ಯರಿಗೆ ಭಯಪಡಬಾರದು.

ಗಾಂಧೀಜಿ

ಅರಳಿದ ಗುಲಾಬಿ

ಲೇ : ಅತಿಯ್ಯಾ ಪರವೀನ್ (ATIA PARWEEN)

ಅನು : ಮಾಧವರಾವ್ ಮುಧೋಳ್

ಅವನ ಪರಿಚಯವನ್ನು ನನ್ನ ಭಾವ ಈ ರೀತಿ ಮಾಡಿಸಿದರು.

"ಮಗೂ ! ಇವನನ್ನು ಭೇಟಿ ಮಾಡು. ಇವನ ಹೆಸರು ಮುಸ್ತಫಾ. ಬಹಳ ಒಳ್ಳೆಯವನು. ಹೋದ ವರ್ಷ ಈರಾನ್‌ದಿಂದ, ಇಂಜಿನಿಯರಿಂಗ್ ಕೋರ್ಸ್ ಮಾಡಲು ಇಲ್ಲಿಗೆ ಬಂದಿದ್ದಾನೆ. ಐದು ವರ್ಷದ ಮೇಲೆ ಕೋರ್ಸು ಮುಗಿಸಿ, ತಮ್ಮ ದೇಶಕ್ಕೆ ಹೋಗುತ್ತಾನೆ. ಇವನಿಗೆ ಇರಲು ಮನೆ ಎಲ್ಲೂ ಸಿಕ್ಕಿರಲಿಲ್ಲ. ನಮ್ಮ ಮನೆ ಒಡತಿ ಅಚ್ಛನ್ ಆಪಾ ಅವರಿಗೆ ಹೇಳಿ, ಒಂದು ಕೋಣೆ ಕೊಡಿಸಿದ್ದೇನೆ. ಊಟ, ಬೆಳಗಿನ ತಿಂಡಿ ಅವರಲ್ಲೇ ಮಾಡುತ್ತಾನೆ. ಒಟ್ಟಿನಲ್ಲಿ ಬಹಳ ಒಳ್ಳೆಯವನು. ನನಗೆ ಇವನದೇ ಚಿಂತೆ. ಪರದೇಶಕ್ಕೆ ಬಂದಿದ್ದಾನೆ. ಯಾವ ತೊಂದರೆಯೂ ಇವನಿಗೆ ಆಗಬಾರದು."

ಅವನನ್ನು ನೋಡಿದೆ. ಮುಗುಳು ನಗುತ್ತಿದ್ದ. ಬಿಳಿಗೆಂಪು ಬಣ್ಣ. ದಟ್ಟವಾದ ಗುಂಗುರುಗೂದಲು. ಹವಣಿಯಾದ ನಿಲುವು. ಚಿಕ್ಕದಾದರೂ ಹೊಳೆಯುವ ಕಣ್ಣುಗಳು. ಅತ್ಯಂತ ಗಟ್ಟಿ ಮುಟ್ಟಾದ ಒಪ್ಪಾದ ಚೆಲುವಾದ ದೇಹ.

"ತಮ್ಮನ್ನು ಕಂಡು ಬಹಳ ಸಂತೋಷವಾಯಿತು. ಚಿ....ಕ್ಕಮ್ಮ" ಎಂದು ಹರಕು ಮುರುಕು ಉರ್ದು ಭಾಷೆಯಲ್ಲಿ ಉತ್ತರಿಸಿ, ಕೈ ಕುಲುಕುವುದಕ್ಕೆ ಸದೃಢವಾದ ತನ್ನ ಕೈಯನ್ನು ಮುಂದೆ ಚಾಚಿದ. ನನಗೆ ಆಶ್ಚರ್ಯವಾಯಿತು.

"ಪರವಾ ಇಲ್ಲ! ನಮ್ಮ ಭಾಷೆಯನ್ನು ನೀವು ರೂಢಿಸಿಕೊಂಡಿದ್ದೀರಿ." ಅಂದೆ.

೧೯೮೬ ರ ಜುಲೈ ತಿಂಗಳಿನ "ಬೀಸ್ವೀಸದಿ" ಉರ್ದು ಮಾಸಿಕದಲ್ಲಿ ಪ್ರಕಟವಾದ "ವೋ ಏಕ್ ಚಹರಾ ಗುಲಾಬ್ ಜೈಸಾ" ಎಂಬ ಕಥೆಯ ಅನುವಾದ.

"ಹಾಂ! ಹೌದು!! ನಾನು ಬಹಳ ಪ್ರಯತ್ನಪಟ್ಟು ಕಲಿತಿದ್ದೇನೆ" ಎಂದು ನಗುತ್ತ ನುಡಿದ. "ನಮ್ಮ ಹೋಮ್ ಮಿನಿಸ್ಟರ್ ಇದ್ದಾರಲ್ಲ, ಅವರು....ನಾಜ್.... ನಾಜ್....ನೀನ್, ಅವರಿಂದ ಕಲಿತಿದ್ದೇನೆ.

"ಹೋಮ್ ಮಿನಿಸ್ಟರ್(!)" ಎಂದು ಆಶ್ಚರ್ಯ ಸೂಚಿಸುತ್ತ ಮುಂದೆ ಚಾಚಿದ್ದ ಅವನ ಹಸ್ತವನ್ನು ಸ್ವಲ್ಪ ಹಿಡಿದುಬಿಟ್ಟುಬಿಟ್ಟೆ. ಅವನು ಹೇಗೂ ನನಗೆ ಚಿಕ್ಕಮ್ಮ ಅಂದಿದ್ದ. ಅಂದಮೇಲೆ ಕೈ ಹಿಡಿಯಲು ಏನೂ ಅಭ್ಯಂತರವಿರಲಿಲ್ಲ.

"ಹಾಂ! ಅವರು ನಮ್ಮ ಮನೆಯ ಒಡತಿಯ ಮಗಳು. ಅವಳಿಗೆ ನಾನು ಹೋಮ್ ಮಿನಿಸ್ಟರ್ ಅನ್ನುತ್ತೇನೆ. ಅವರು ಬಹಳ ಛಲದ ಗರ್ಲ್...."

"ಬಹಳ ಚಾರ್ಮಿಂಗನೂ...." ನನ್ನ ಭಾವನ ಮಗಳು ರಾನಾ ತುಂಟತನದಿಂದ ಹೇಳಿದಳು. ರಾನಾಳನ್ನು ನೋಡಿ ಅವನು ನಕ್ಕುಬಿಟ್ಟ. ಸಿಗರೇಟ್ ಡಬ್ಬಿ ತೆಗೆದು, "ಹಾಂ! ಹೌದು!! ಚಾರ್ಮಿಂಗೂ ಕೂಡಾ. ಅವಳ ಕೂದಲು ತುಂಬಾ ನೀಳ. ಜಡೆ ಹಾಕಿದಳು ಅಂದರೆ, ಜಡೆಗೆ ಜೋತುಬಿದ್ದು ನಾನು ಬೇಕಾದರೆ ಈರಾನಕ್ಕೂ ಹೋಗ ಬಹುದು."

ನಾನು, ಅತ್ತಿಗೆ, ಭಾವ, ನನ್ನ ಮಗಳು ಮತ್ತು ನನ್ನ ಭಾವನ ಮೂವರೂ ಹುಡುಗಿಯರು, ಎಲ್ಲರೂ ನಕ್ಕುಬಿಟ್ಟೆವು.

"ಇದರ ಅರ್ಥ....ಅವಳ ನೀಳ ಕೂದಲಿನಲ್ಲಿ ನಿಮ್ಮ ಮನಸ್ಸು ಸಿಲುಕಿಕೊಂಡಿದೆ ಅನ್ನಿ" ಎಂದೆ ನಾನು.

ಸಿಗರೇಟಿನ ಬಹಳ ದೊಡ್ಡ ಜುರಿಯನ್ನು ಎಳೆದು ಮುಗುಳುನಗುತ್ತ ಅವನು ನನ್ನ ಕಡೆಗೆ ನೋಡಿದ. ಅವನ ಮಂದಸ್ಮಿತ ಅತ್ಯಂತ ಆಕರ್ಷಕವಾಗಿತ್ತು. ಇಪ್ಪತ್ತೆರಡು ಇಪ್ಪತ್ನಾಲ್ಕು ವರುಷ. ಪರದೇಶದ ಸುಂದರ ತರುಣ. ಆದರೂ ನಮ್ಮೆಲ್ಲರ ಮಧ್ಯದಲ್ಲಿ ನಮ್ಮಂತೆಯೇ ಹಳ್ಳಿಗಾಡಿನ ವಾತಾವರಣದಲ್ಲಿ, ಮಾವಿನ ಸಿಪ್ಪೆ, ನೊಣ, ಅಡಿಗೆಮನೆಯ ಹೊಗೆ, ನೌಕರ ಚಾಕರರ ಕೂಗಾಟದ ಮಧ್ಯೆ ಸೇರಿಕೊಂಡು ಬಿಟ್ಟಿದ್ದ. ನೀಲೀ ಜೀನ್ಸ್, ತುಂಬು ತೋಳಿನ ಕರಿಗೀರಿನ ಬಿಳಿ ಶರ್ಟು, ಉಕ್ಕುವ ಅಚ್ಚಗುಲಾಬಿಗಲ್ಲ, ನಿಜವಾಗಲೂ ನನಗೆ ಅವನು ಬಹಳ ಮೆಚ್ಚುಗೆಯಾದ. ನನ್ನ ಅಂತಃಕರಣ ಅವನಿಗೆ ಬಹಳ ಹಿಡಿಸಿತು. "ಇಷ್ಟು ಗಮಗಮಿಸುವ ಒಳ್ಳೆಯ ಟೀ ನನ್ನ 'ಜನ್ನೆ ಅಮ್ಮ' ಕೂಡ ಕುಡಿಸುವುದಿಲ್ಲ" ಎನ್ನುತ್ತಿದ್ದ. 'ಜನ್ನೀ ಅಮ್ಮ' ಅಂದರೆ ಚಿಕ್ಕಪ್ಪನ ಹೆಂಡತಿ–ಚಿಕ್ಕಮ್ಮ ಎಂದು. ಅವನು ನನಗೆ ನನ್ನ ಭಾವನ ಹೆಣ್ಣು ಮಕ್ಕಳು ರಾನಾ, ಪಶಾನಾ, ದೀಪಾ ಅಂದಹಾಗೆ ಚಿಕ್ಕಮ್ಮ ಎಂದು ಕರೆಯುತ್ತಿದ್ದ. ಅವನ ಬಾಯಿಯಿಂದ ಚಿಕ್ಕಮ್ಮ ಅನ್ನುವುದು ನನಗೆ ಬಹಳ ಹಿಡಿಸುತ್ತಿತ್ತು. ಅವನು ಚಿಕಮ್ಮ ಎಂದು ಬೇಗ ಪೂರ್ತಿ ಅಂದು ಬಿಡುತ್ತಿರಲಿಲ್ಲ. ಚಿ....ಅಂದು, ಸ್ವಲ್ಪ ತಡೆದು ಮತ್ತೆ....ಕ್ಕಮ್ಮ....ಅನ್ನುತ್ತಿದ್ದ. ಹೀಗೆ ನನ್ನನ್ನು ಭಾಗಮಾಡಿ ಹಂಚುತ್ತಿದ್ದ. ಆದರೂ ಅವನ ಬಾಯಿಯಿಂದ ಈ ಶಬ್ದ ನನಗೆ ಬಹಳ ಚೆಂದವೆನಿಸುತ್ತಿತ್ತು. ಬೇಸಿಗೆಗೆ ಮೊಹರಮ್ಮಿನಲ್ಲಿ, ನಾವೆಲ್ಲ ನಮ್ಮ ಹಳ್ಳಿ ಮನೆಯಲ್ಲಿ ಸೇರುತ್ತಿದ್ದೆವು. ಈ ಸಲ ಅವನೂ ಭಾವನವರ ಆಮಂತ್ರಣದಮೇಲೆ ನಮ್ಮ ಹಳ್ಳಿಗೆ ಬಂದಿದ್ದ. ಅವನಿಗೆ ಇಲ್ಲಿ ಅತ್ಯಂತ ಆನಂದವಾಗಿತ್ತು. ಸೀದಾ ಸಾದಾ ಹಳ್ಳಿಗರು,

ಮಾವಿನ ಹಣ್ಣು, ಸೀಬೆ ಹಣ್ಣಿನ ತೋಟ, ಹಸಿರು ಹುಲ್ಲು ಹೊದಿಸಿದ ಚಪ್ಪರದ ಮನೆಗಳು, ಸಂದು ಗೊಂದಿನ ಸೊಟ್ಟ ಪಟ್ಟಾದ ಗಲ್ಲಿಗಳೂ, ಎಲ್ಲವೂ ಅವನಿಗೆ ಇಷ್ಟವಾಗಿದ್ದವು. ಎಲ್ಲ ನೌಕರ ಚಾಕರರ ಮತ್ತು ಉಳಿದವರ ಮಧ್ಯೆ ಮನೆಯ ಹೊರಗೆ ಕುಳಿತು ಸ್ವಾರಸ್ಯವಾಗಿ ಹರಟುತ್ತಿದ್ದ. ಅವನ್ನು ನೋಡಿದರೆ ಈ ಪರಿಸರ ಅವನಿಗೆ ಹೊಸತಲ್ಲ ಅನಿಸುತ್ತಿತ್ತು. ತನ್ನ ಮೋಟರ್ ಸೈಕಲ್ ಮೇಲೆ, ಧೂಳು ಮುಸುಕಿದ ಮುಗ್ಧ ಹಳ್ಳಿಯ ಮಕ್ಕಳನ್ನು ಹತ್ತಿಸಿಕೊಂಡು ಪಾಳೀ ಪ್ರಕಾರ ಊರು ಸುತ್ತಿಸುತ್ತಿದ್ದ. ಹೀಗಾಗಿ ಅವನು ಬರಿಯ ನಮ್ಮಗಳಿಗೇ ಅಲ್ಲ, ಊರಿನವರಿಗೆಲ್ಲ ಬೇಕಾದವನಾಗಿದ್ದ. ಮೊಹರಮ್ಮಿನ ಹನ್ನೊಂದನೆಯ ದಿವಸ ನಮ್ಮಲ್ಲಿ ದೊಡ್ಡ ಅನ್ನ ಸಂತರ್ಪಣೆ ನಡೆಯುವುದು. ಅದರ ಸರ್ವವ್ಯವಸ್ಥೆ ನನ್ನ ಗಂಡ ಮಾಡಬೇಕಾಗುವುದು. ಹೊರಗಿನ ವ್ಯವಸ್ಥೆ ಅವರದು. ಒಳಗಿನದು ನನ್ನದು. ಇಡೀ ರಾತ್ರಿ ನನ್ನ ಗಂಡನ ಜೊತೆಗೆ ಅವನೂ ಎದ್ದು, ಅಡಿಗೆ ಮಾಡಿಸಿ, ಇತರ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ. ಅಡಿಗೆಯವರಿಗೆ, ಕೆಲಸದವರಿಗೆಂದು ಮಾಡಿಟ್ಟ ಟೀಯನ್ನು ರುಚಿಯಾಗಿದೆಯೆಂದು ಕುಡಿಯುತ್ತಿದ್ದ. ಒಳಗೆ ಬಂದು ಮನೆಗೆಲಸದಲ್ಲಿ ನನಗೆ ಕೈಗೂಡುತ್ತಿದ್ದ. ಹರಟೆ ಹೊಡೆಯುತ್ತಿದ್ದ. ಹೊರಗೆ ಇಟ್ಟ ಕಾಳುಗಳನ್ನು ಒಳಗೆ ತಂದು ಒಲೆಯ ಮೇಲಿನ ಬೆಂಕಿಯಲ್ಲಿ ಹುರಿದುಕೊಂಡು ತಿನ್ನುತ್ತಿದ್ದ. ನನ್ನ ಗಂಡನ ಸಲುವಾಗಿ ಮಾಡಿಟ್ಟ ಗ್ರೀನ್‌ಲೇಬಲ್ ಟೀಯನ್ನು, "ವ್ಹಾ! ರುಚಿಕರವಾಗಿದೆ. ಇದನ್ನು ಕುಡಿದ ಮೇಲೆ ಇಲ್ಲಿಂದ ನಾನು ಹೋಗಲೇ ಬಾರದು ಅನ್ನಿಸುತ್ತದೆ" ಎನ್ನುತ್ತಿದ್ದ.

ಇದರಂತೆ ಮೂರೂ ವರ್ಷವೂ ನಮ್ಮ ಜೊತೆಗೇ ಮೊಹರಮ್ಮ ಆಚರಿಸಿದ. ಒಳ್ಳೇ ಅಂಕ ಪಡೆದು ಪಾಸೂ ಆಗುತ್ತಿದ್ದ. ಅವನ ತಂದೆತಾಯಿ ಪ್ರತಿತಿಂಗಳು ಬಹಳಷ್ಟು ದುಡ್ಡು ಅವನಿಗೆ ಕಳುಹಿಸುತ್ತಿದ್ದರು. ಹೀಗಾಗಿ ಅವನು ಒಳ್ಳೆಯ ರಾಜಕುಮಾರನಂತೇ ಇರುತ್ತಿದ್ದ. ನನ್ನ ಭಾವನಿಗಂತೂ ಅವನೊಬ್ಬ ಮನೆಯ ಮಗನೇ ಆಗಿದ್ದ. ಎಲ್ಲ ಹೊರಗಿನ ಕೆಲಸ ಅವನೇ ನೋಡಿಕೊಳ್ಳುತ್ತಿದ್ದ. ನನ್ನ ಭಾವ ಬೇರೆ ಊರಿನಲ್ಲಿ ಸರ್ವೀಸಿನಲ್ಲಿದ್ದರು. ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದರು. ಹುಡುಗಿಯರ ಜೊತೆ ಅತ್ತಿಗೆ ದಿಲ್ಲಿಯಲ್ಲಿಯೇ ಇರುತ್ತಿದ್ದರು. ನಾನೂ ನಾಲ್ಕೈದು ತಿಂಗಳಿಗೊಮ್ಮೆ ದಿಲ್ಲಿಗೆ ಹೋಗುತ್ತಿದ್ದೆ. ಅಲ್ಲಿ ಇದ್ದಷ್ಟು ದಿವಸ ಮುಸ್ತಫಾನಿಂದಾಗಿ ಸ್ವಾರಸ್ಯವಾಗಿ ಕಳೆಯುತ್ತಿದ್ದೆ. ಎಲ್ಲದಕ್ಕೂ ಹೆಚ್ಚಿನ ಸ್ವಾರಸ್ಯವೆಂದರೆ, ಅಣ್ಣನ ಆಪಾನ ಮಗಳು ನಾಜನೀನ್. ಅವಳು ಅತ್ಯಂತ ಚೆಲುವೆ. ಸ್ಮಾರ್ಟ್. ಆದರೆ ಹಟಮಾರಿ. ಮುಸ್ತಫಾನನ್ನು ಅವಳು ತನ್ನ ಕನಸಿನ ರಾಜಕುಮಾರನನ್ನಾಗಿ ಮಾಡಿಕೊಂಡಿದ್ದಳು. ಚಂದ್ರನ ಹಿಂದೆ ಚಕೋರಿಯಂತೆ, ದೀಪದ ಸುತ್ತ ಪತಂಗದಂತೆ, ಅವನ ಸುತ್ತ ತಿರುಗುತ್ತಿದ್ದಳು. ಮುಸ್ತಫಾನ ಚಿಕ್ಕ ಚಿಕ್ಕ ಮಾತಿನ ಕಡೆಗೂ ಲಕ್ಷ್ಯವಿಟ್ಟಿರುತ್ತಿದ್ದಳು. ಅವನು ಟೀ ಕುಡಿಯುವವರೆಗೆ ತಾನೂ ಟೀ ಕುಡಿಯುತ್ತಿರಲಿಲ್ಲ. ಅವನು ಕಾಲೇಜಿನಿಂದ ಬರುವವರೆಗೆ ತಾನೂ ಊಟ ಮಾಡದೆ ಹಸಿದುಕೊಂಡೇ ಇದ್ದು ಅವನಿಗಾಗಿ ಚಡಪಡಿಸುತ್ತಿದ್ದಳು. ಮುಸ್ತಫಾನ ಸಲುವಾಗಿ ಸಿಂಗರಿಸಿಕೊಳ್ಳುತ್ತಿದ್ದಳು. ಒಂದಕ್ಕಿಂತ ಒಂದು ಕಣ್ಣು ಕುಕ್ಕುವ ಬಟ್ಟೆ ಧರಿಸುತ್ತಿದ್ದಳು. ತನ್ನ ದಟ್ಟವಾದ ಉದ್ದನೆಯ ಕಪ್ಪು ಕೂದಲುಗಳನ್ನು ಒಪ್ಪಾಗಿ ಹೊಸ ಹೊಸ ಸ್ಟೈಲಿನಿಂದ ಬಾಚಿ ಹೆಣೆದುಕೊಳ್ಳುತ್ತಿದ್ದಳು. ಹೀಗಾಗಿ ಅತ್ಯಂ

ಸುಂದರಿಯಾಗಿ ಕಾಣುತ್ತಿದ್ದಳು. ಇವಳ ಈ ಹುಚ್ಚು ಪ್ರೀತಿ ಇವಳ ಕಡೆಯಿಂದ ಮಾತ್ರವಿತ್ತು. ಮುಸ್ತಫಾ ಇವಳನ್ನು ಗೌರವವಾಗಿ ಕಾಣುತ್ತಿದ್ದ. ಇವಳ ನೋವನ್ನು ತಾನೂ ಅನುಭವಿಸುತ್ತಿದ್ದ. ಇವಳಿಗಾಗಿ ಉಡುಗೊರೆ ಕಾಣಿಕೆಗಳನ್ನು ತರುತ್ತಿದ್ದ. ಆದರೆ ಅವನ ಒಲವು ನಾಜನೀನಳ ಮೇಲೆ ಇರಲಿಲ್ಲ. ತನಗಾಗಿ ಚಿಕ್ಕಂದಿನಲ್ಲಿಯೇ ನಿಶ್ಚಯಿಸಲಾದ, ಸದಾ ಅವನ ಹೃದಯ ಮಿಡಿಯುತ್ತಿರುವ ತಮ್ಮ ದೇಶದ ಹುಡುಗಿಯ ಮೇಲಿತ್ತು.

ಅವನು, "ಚಿಕ್ಕಮ್ಮ! ನೀವೇ ಹೇಳಿ. ನಿಶ್ಚಯಿಸಿದ ಹುಡುಗಿಗೆ ನಾನು ಹೇಗೆ ಮೋಸ ಮಾಡಲಿ? ಬೆಣ್ಣೆಯೊಳಗಿಂದ ಕೂದಲು ಬಿಡಿಸಿಕೊಂಡು ಬರುವಹಾಗೆ ಎಲ್ಲಿಯೂ ತೊಡಕಿನಲ್ಲಿ ಸಿಕ್ಕದೆ ಇಂಡಿಯಾದಿಂದ ನನ್ನನ್ನು ಉಳಿಸಿಕೊಂಡು ಬರುವೆನೆಂದು ಅವಳಿಗೆ ವಚನ ಕೊಟ್ಟಿದ್ದೇನೆ. ಅವಳಿಗಾಗಿಯೇ ಜೀವದಿಂದ ಇದ್ದೇನೆ. ಅವಳೂ ನನಗಾಗಿಯೇ ಜೀವಿಸಿದ್ದಾಳೆ. ಅವಳೂ ಬಹಳ ಚಾರ್ಮಿಂಗು. ಚಿಕ್ಕಮ್ಮ! ಬ್ಯೂಟಿಫುಲ್ ಗರ್ಲ್! ಅವಳ ಕಣ್ಣುಗಳು ಸಾವಿರ ವಾಟ್ ಬಲ್ಬುಗಳು. ಅವಳ ನೀಳವಾದ ಕೇಶರಾಶಿಯಲ್ಲಿ ಝಗಝಗಿಸುವ ಸೂರ್ಯ ರಶ್ಮಿಗಳ ಹೊಳಪು, ತುಟಿಗಳಲ್ಲಿ ಮೆಲುನಗು. ಬಣ್ಣ, ಅವಳ ಬಣ್ಣ ಹೇಗಿದೆ ಎಂದರೆ....ಎಂದರೆ...." ಅನ್ನುತ್ತ ಹುರುಪಿಗೆ ಬಂದು, ಸಿಗರೇಟನ್ನು ತಿಕ್ಕಿ ಆರಿಸಿ, ಕುರ್ಚಿಯಿಂದ ಮೇಲೆದ್ದು, ಕೆಳದುಟಿಯನ್ನು ಕಚ್ಚುತ್ತ, ಅದೇನೆಂದರೆ ಎಂದು ಉಪಮೆ ಸಹಿತ ಹೇಳಬೇಕೆಂದರೂ ಅವನಿಂದ ಆಗದಿದ್ದಾಗ, ಕೀಟಲೆಗೆಂದು ನಾನು,

"ಮೈದಾದಲ್ಲಿ....ಸಿಂಧೂರು...." ಎಂದೆ.

"ಮೈದಾ....ಸಿಂಧೂರು....ಅಂದರೆ ಏನು?" ಎಂದು ಕೇಳಿದ.

"ಮೈದಾ ಬಿಳೀ ಬಣ್ಣದ ನುಣ್ಣನೆ ಹಿಟ್ಟು; ಸಿಂಧೂರ್. ಹೆಂಗಸರು ಹಣೆಯ ಮೇಲೂ ಬೈತಲೆಯಲ್ಲೂ ಇಟ್ಟುಕೊಳ್ಳುವ ಕೆಂಪು ಮಂಗಲ ವಸ್ತು" ಎಂದೆ.

"ನೋ....ನೋ....ಹಿಟ್ಟೂ ಅಲ್ಲ....ಸಿಂಧೂರೂ ಅಲ್ಲ" ಎಂದು ಜೋರಾಗಿ, "ಇಲ್ಲ ಚಿ .. ಕ್ಕಮ್ಮ....ಹೇಗೆಂದರೆ...."

"ಹೇಗೆಂದರೆ....ಹಾಲಿನಲ್ಲಿ ಕೆಂಪು ಗುಲಾಬಿ" ಎಂದೆ ನಾನು, ಬೇಕೆಂತಲೇ ತಿರುಗಿಸಿ.

"ಓ! ನೋ....ಹಾಲೂ....ಅಲ್ಲ... ಕೆಂಪು ಗುಲಾಬೀನೂ....ಅಲ್ಲ" ಎಂದ ಹಣೆ ಹಣೆ ಚಚ್ಚಿಕೊಳ್ಳುತ್ತ.

"ಹಾಗೆಂದರೆ ಏನು ನಿನ್ನ ತಲೆ?" ಎಂದು ಅವನಿಗೆ ಕೇಳಿಸದಂತೆ ಅಸ್ಪಷ್ಟವಾಗಿ ನುಡಿದೆ.

"ಹಾಗೆಂದರೆ ಹೀಗೆ ಹೇಳೋಣ! ಬೆಳದಿಂಗಳಲ್ಲಿ ಝಗಝಗಿಸುವ ಅಮೃತಶಿಲೆಯ ಮೂರ್ತಿ; ಕೆನ್ನೆಯಲ್ಲಿ ಗುಲಾಬಿ, ಅಧರದಲ್ಲಿ ಜೇನು, ಕಣ್ಣುಗಳೋ ಮಧುಬಟ್ಟಲುಗಳು, ಹಣೆ ಹೊಳೆಯುವ ರನ್ನಗನ್ನಡಿ...." ಎಂದೆ ಜೋರಾಗಿ.

"ಓ! ಯಸ್....ಯಸ್....ಅದಕ್ಕೂ ಹೆಚ್ಚು...." ಎಂದು ಹುರುಪಿನಿಂದ ಕುಣಿದ.

"ಆದರೆ ನಿನ್ನನ್ನು ಕಂಡರೆ ಪಂಚಪ್ರಾಣವನ್ನು ಅರ್ಪಿಸುತ್ತಾಳಲ್ಲ ಆ ಹುಡುಗಿ, ನಾಜನೀನ್, ಅವಳ ಗತಿ ಏನು?" ಎಂದೆ.

"ಅದಕ್ಕೆ ನಾನೇನು ಹೇಳಲಿ?" ಎಂದು ಭುಜಗಳನ್ನು ಕುಣಿಸುತ್ತ, "ನನಗಾಗಿ ಪ್ರಾಣಕೊಡು ಎಂದು, ಅವಳಿಗೆ ನಾನೆಂದು ಹೇಳಿದ್ದೆ? ನಾನು ಯಾವಾಗಲೂ ಅವಳನ್ನು, ಆ ದೃಷ್ಟಿಯಿಂದ ನೋಡಿಯೂ ಇಲ್ಲ. ಮೂರ್ಖ ಹುಡುಗಿ! ಸ್ಟುಪಿಡ್‌ಗರ್ಲ್!! ನಾನೇನು ಮಾಡಲಿ?....ಅವಳ ವಿಷಯಕ್ಕೆ ನನಗೆ ಕನಿಕರ ಬರುತ್ತದೆ. ನಾನು ಅವಳಿಗೆ ಬಹಳ ತಿಳಿಹೇಳಿದೆ. ನನ್ನ ಕನಸನ್ನು ಕಾಣಬೇಡ. ನನ್ನ ಮೇಲೆ ಬೇರೆಯವರ ಹಕ್ಕಿದೆ ಎಂದು. ಆದರೆ ಅವಳು ಕೇಳುತ್ತಲೇ ಇಲ್ಲ. ನನ್ನ ಎಲ್ಲ ಕೆಲಸವನ್ನು ಮಾಡುತ್ತಾಳೆ. ಹೊಲಸಾದ ನನ್ನ ಚಪ್ಪಲಿಗಳನ್ನೂ ತೊಳೆದಿಡುತ್ತಾಳೆ. ನನ್ನ ಹಾಸಿಗೆ ಹಾಸುತ್ತಾಳೆ. ನನ್ನ ಬಟ್ಟೆಗಳನ್ನು ಒಗೆದು, ಇಸ್ತ್ರೀ ಮಾಡಿಡುತ್ತಾಳೆ. ನನಗೆ ಮೆಚ್ಚುವ ಊಟ ತಿಂಡಿಗಳನ್ನು ಮಾಡುತ್ತಾಳೆ. ನಾನೇನು ಮಾಡಲಿ? ನಾನು ಎಷ್ಟು ಬೇಡವೆಂದು ಹೇಳಿದರೂ ಅವಳು ಒಪ್ಪುವುದೇ ಇಲ್ಲ" ಎಂದನು.

ಸ್ವತಃ ನಾನೂ ನಾಜನೀನ್‌ಳಿಗೆ ತಿಳಿಹೇಳಿದೆ. "ಈ ತರುಣನಿಗಾಗಿ ಹುಚ್ಚಿಯಾಗ ಬೇಡ. ತನಗೆ ನಿಶ್ಚಯಮಾಡಿದ ಹುಡುಗಿಗೆ ಅವನು ವಚನಭಂಗ ಮಾಡಲಾರ. ಅದು ಹೋಗಲಿ. ಇದನ್ನಾದರೂ ಕೇಳು. ಅವನು ಬಹಳ ಸಭ್ಯ. ನಿನ್ನ ಈ ಮರುಳು ತನದ ದುರುಪಯೋಗ ಅವನು ಪಡೆಯುತ್ತಿಲ್ಲ. ಬೇರೆ ಇನ್ನಾರಾದರು ಆಗಿದ್ದರೆ, ಹರಿಯುವ ಗಂಗೆಯಲ್ಲಿ ಯಥೇಚ್ಛ ಕೈತೊಳೆದುಕೊಂಡು ಹೊರಟು ಹೋಗುತ್ತಿದ್ದರು. ಅವರಿಗೇನು ನೀನು ಶಾಸ್ತಿ ಮಾಡುತ್ತಿದ್ದೆ?" ಎಂದೂ ಕೇಳಿದೆ.

"ಏನೇ ಇರಲಿ ಚಿಕ್ಕಮ್ಮ! ಅವನಿಗಾಗಿ ನಾನು ಪ್ರಾಣವನ್ನೂ ಕೊಡುವೆ"

"ಅದರಿಂದಲೂ ಅವನಿಗೆ ಏನೂ ನಷ್ಟವಾಗಲಾರದು."

ಮುಸ್ತಫಾ ನಾಜ್‌ನೀನ್‌ಳಿಗಾಗಿ ಬಹಳ ಒಳ್ಳೇ ಒಳ್ಳೇ ಗಂಡುಗಳನ್ನು ಸೂಚಿಸಿ, ಸಂಬಂಧಗಳನ್ನು ತಂದಿದ್ದ. ಅಚ್ಛನ್‌ಆಪಾ ಅಂಗಲಾಚಿ ಬೇಡಿಕೊಂಡರೂ ಕೇಳದೆ, ನಾಜ್‌ನೀನ್ ಒಂದಕ್ಕೂ ಒಪ್ಪಲಿಲ್ಲ. "ಮುಸ್ತಫಾಗೆ ನನ್ನ ಮೇಲೆ ಕರುಣೆ ಬಾರದಿದ್ದರೂ ನಾನು ಅವನನ್ನೇ ಪೂಜಿಸುತ್ತೇನೆ" ಎಂದು ಅಚಲವಾಗಿ ಉದ್ಗರಿಸಿದಳು.

"ನಿಜವಾಗಲೂ ನೀನು ಸ್ಟುಪಿಡ್‌ಗರ್ಲ್! ಎಂದೆಂದಿಗೂ ನಿನ್ನವನಾಗಲಾರದವ ನನ್ನು ನೀನು ಪೂಜೆಮಾಡುವೆ. ಎರಡು ವರ್ಷದನಂತರ ಅವನು ತನ್ನ ದೇಶಕ್ಕೆ ಹೊರಟು ಹೋಗುತ್ತಾನೆ. ಅಲ್ಲಿ ಅವನು ಮೊದಲೇ ಗೊತ್ತು ಮಾಡಿದ್ದವಳನ್ನು ವಿಜೃಂಭಣೆಯಿಂದ ಮದುವೆ ಮಾಡಿಕೊಂಡು, ಮನೆಗೆ ಅವಳನ್ನು ಕರೆತರುತ್ತಾನೆ. ಮನೆಯ, ಹೃದಯದ ರಾಣಿಯನ್ನಾಗಿ ಮಾಡಿಕೊಳ್ಳುತ್ತಾನೆ. ಸುಂದರ ಮುದ್ದುಮುದ್ದಾದ ಮಕ್ಕಳಿಗೆ ಜನ್ಮ ಕೊಡುತ್ತಾನೆ. ಆದರೆ ನೀನು?....ನೀನು....ಅವನ ಚಿತ್ರಪಟಕ್ಕೆ ಆರತಿ ಎತ್ತುತ್ತ ಕೂಡುವೆ. ನಿನ್ನ ಹಣೇಬರಹ. ದೇವರೂ ಸಿಕ್ಕಲಿಲ್ಲ....ಪ್ರಿಯಕರನ ಸಾಮೀಪ್ಯವೂ ಸಿಕ್ಕಲಿಲ್ಲ ಅನ್ನುವಹಾಗೆ ಆಗುತ್ತದೆ" ಎಂದೆ ನಾನು.

ನಾಜ್‌ನೀನ್ ಮಂದವಾಗಿ ನಕ್ಕಳು. ಅದು ಒಂದು ಬಗೆಯ ಉದಾಸೀನವಾದ ನಿರಾಶೆಯ ನಗು.

ಅದೇ ಸುಮಾರಿಗೆ ನನ್ನ ಭಾವನ ಹಿರಿಯಮಗಳು ಷಹಾನಾಳ ಮದುವೆ ಯಾಯಿತು. ಬಹಳ ಉತ್ಕೃಷ್ಟವಾದ ಆದರ್ಶನೀಯ ಮದುವೆ. ಪೌರೋಹಿತ್ಯದಲ್ಲಿಲ್ಲ ಆ

ಮದುವೆಯ ಸಡಗರ. ಮುಸ್ತಫಾ ಷಹಾನಾಳನ್ನು ತನ್ನ ತಂಗಿಯನ್ನಾಗಿ ಮಾಡಿಕೊಂಡಿದ್ದ. ಪ್ರತಿರಕ್ಷಾಬಂಧನದ ದಿವಸ ಷಹಾನಾ ಅವನ ಅಗಲವಾದ ಕೆಂಪು ಮುಂಗೈಯಿಗೆ ರಾಖಿಯನ್ನು ಕಟ್ಟುತ್ತಿದ್ದಳು. ಪ್ರತಿಯಾಗಿ ಇವಳಿಗೆ ಅವನು ನೂರುರೂಪಾಯಿಯ ನೋಟು ಮತ್ತು ಇತರ ವಸ್ತುಗಳನ್ನು ಕಾಣಿಕೆಯಾಗಿ ಕೊಡುತ್ತಿದ್ದ. ಅವಳ ಮದುವೆಗೆಂದು, ಇರಾನಿನಿಂದ ಬಹಳ ಬೆಲೆ ಬಾಳುವ ಉಡುಗೊರೆಗಳನ್ನು ತಂದಿದ್ದ. ಕುತನಿಯ ದಿಂಬುಗಳಿಗೆ ತೊಡಿಸುವ ರೇಶ್ಮೆಯ ಗೌಸಣಿಕೆಗಳು, ಒಳ್ಳೆಯ ಟೀ ಸೆಟ್ಟು, ಲೆಮನ್ ಸೆಟ್ಟು; ಮತ್ತು ಸುಂದರವಾದ ಥರ್ಮಾಸ್, ತಂದಿದ್ದ—ಇದಲ್ಲದೇ ಹಗಲೂ ರಾತ್ರಿ ಓಡಾಡಿ ಬಹಳ ಶ್ರಮವಹಿಸಿ ಮದುವೆಯ ಕೆಲಸದಲ್ಲಿ ನೆರವಾದ. ರಾತ್ರಿ ಬಿಡುವು ಸಿಕ್ಕಾಗ ನಮ್ಮ ಜೊತೆಗೆ ಕುಳಿತು ಮದುವೆಯ ಮಂಗಲ ಗೀತೆಗಳನ್ನು ಹಾಡಿದ. ಅನ್ವರ್—ಅತ್ತೆಯಿಂದ ಢೋಲಕ್ ಕಸಿದುಕೊಂಡ. ಅದನ್ನು ಡ್ರಮ್ಮಿನಂತೆ ಬಾರಿಸತೊಡಗಿದ. ಇರಾನ್ ದೇಶದ ಪಾರಿಸೀ ಭಾಷೆಯ ಅದೇನೇನೋ ಹಾಡುಗಳನ್ನೂ ಹೇಳಿ ನಗಿಸಿದ. ನಮಗೆಲ್ಲ ನಕ್ಕು ನಕ್ಕು ಸಾಕಾಯಿತು. ಮದುವೆಯ ಎಲ್ಲ ಸಂಪ್ರದಾಯಗಳನ್ನೂ ಲಕ್ಷ್ಯಗೊಟ್ಟು ನೋಡುತ್ತ ಒಳ್ಳೆಯ ಸ್ವಾರಸ್ಯವನ್ನು ಅನುಭವಿಸುತ್ತಿದ್ದ.

"ದೇವರಾಣೆ! ನನ್ನ ಮಗನೂ ಮುಸ್ತಫಾನಷ್ಟು ಕಷ್ಟಪಟ್ಟು ಕೆಲಸಮಾಡುತ್ತಿರಲಿಲ್ಲ" ಎಂದು ನನ್ನ ಭಾವನವರು ಹೇಳಿದರು.

ಮದುವೆಯ ಗಂಡು ಮನೆಗೆ ಬಂದ ದಿವಸ ನಾಜ್‌ನೀನ್ ಜರತಾರಿ ಕೆಂಪು ಉಡುಪುಧರಿಸಿ ಮದುಮಗಳಂತೆ. ಸಿಂಗರಿಸಿಕೊಂಡಿದ್ದಳು. ಹಣೆಯಮೇಲೆ ಬೊಟ್ಟು, ಮೂಗಿನಲ್ಲಿ ಮೂಗುಬಟ್ಟು ಮಾತ್ರ ಇರಲಿಲ್ಲ. ಅವಳು ಅತ್ಯಂತ ಚೆಲುವೆಯಾಗಿ ಸಾವಿರಾರು ಜನರ ಹೃದಯವನ್ನು ಕದಿಯುವಂತಾಗಿದ್ದಳು. ಪ್ರತಿಯೊಬ್ಬರ ದೃಷ್ಟಿ ಇವಳ ಪ್ರದಕ್ಷಣೆಯನ್ನೇ ಮಾಡುತ್ತಿದ್ದವು. ನೆರೆದ ಎಲ್ಲ ಯುವಕರೂ ಇವಳಿಗಾಗಿ ಹುಚ್ಚರಾಗಿದ್ದರು. ಆದರೆ ಇವಳು ಮಾತ್ರ ಮುಸ್ತಫಾನನ್ನು ಜ್ಯೋತಿಯೆಂದು ತಿಳಿದು, ಅದರ ಸುತ್ತ ದೀಪದ ಹುಳುವಿನಂತೆ ಸುತ್ತುತ್ತಿದ್ದಳು.

ಅಂದು ಮುಸ್ತಫಾ ಕೂಡ ಅದೆಷ್ಟು ಚೆನ್ನಾಗಿ ಕಾಣುತ್ತಿದ್ದ! ಅಬ್ಬಾ! ದೇವರೇ!! ಆ ಮಂದಸ್ಮಿತ ಮುಖ. ಹೊಳೆಯುತ್ತಿರುವ ಕಣ್ಣುಗಳು; ತೊಟ್ಟ ಆ ಗಾಢ ನೀಲೀ ಸೂಟು....

"ಮುಸ್ತಫಾ! ಬಾ!! ನಿನಗೆ ದೃಷ್ಟಿ ತೆಗೆಯುತ್ತೇನೆ." ಎಂದೆ.

"ದೃಷ್ಟಿ!....ಏನು ಚಿ....ಕ್ಕಮ್ಮ?"

"ನಿನಗೆ ಗೊತ್ತಾಗದು. ನೀನು ತುಂಬಾ ಚೆನ್ನಾಗಿ ಕಾಣುತ್ತಿರುವೆ. ನಾಜ್‌ನೀನ್ ನಿನ್ನನ್ನು ತನ್ನ ಕಣ್ಣಿನಲ್ಲಿ ಹೀರಿಕೊಳ್ಳುವಂತೆ ನೋಡುತ್ತಿದ್ದಾಳೆ. ಅದು ನಿನಗೆ ಗೊತ್ತಾಗದು. ಜ್ವರ ಬಂದು ಮಲಗಿ ಬಿಡುವೆ."

"ಅವಳೂ ಇವತ್ತು ತುಂಬಾ ಚೆನ್ನಾಗಿ ಕಾಣುತ್ತಾಳೆ ...ಬಿಡಿ ಹೋಗಲಿ! ... ಅವಳು ನಿಜವಾಗಲೂ ಬ್ಯೂಟೀಕ್ವೀನು....ಬೈಗಾಡ್! ಸಾಯಿರಾಗೆ ನಾನು ವಚನ ಕೊಟ್ಟಿರದಿದ್ದರೆ...." ಜೋರಾಗಿ ನಕ್ಕು, ಹೊರಗೆ ಹೊರಟು ಹೋದ.

ಸುಂದರವಾದ ಆಳವಾದ ಆದರೆ ಉದಾಸೀನವಾದ ಎರಡು ನಯನಗಳು ಅವನನ್ನು ಹಿಂಬಾಲಿಸಿದ್ದವು.

ಮದುವೆಯು ಗದ್ದಲ ಮುಗಿದಿತ್ತು. ನಾವೆಲ್ಲ ಜೇರಿಜೇರಿ ಕಡೆಗೆ ಹೊರಟೆವು. ಅವನನ್ನು ನಾವು ಬರೇಲಿಗೆ ಬರಹೇಳಿದ್ದೆ. ಆಗ ನಮ್ಮೂರಲ್ಲಿ ಸ್ವಲ್ಪ ಚಳಿ ಇತ್ತು. ಅವನೂ ಅಲ್ಲಿಗೆ ಬಂದ. ನನ್ನ ಮಗಳಸಲುವಾಗಿ ಷಹಾನಾಳಿಗೆ ಕನ್ಯಾದಾನದಲ್ಲಿ ಕೊಟ್ಟಂಥ ಡಿನ್ನರ್ ಸೆಟ್ಟು ತಂದಿದ್ದ. ಎರಡು ದಿವಸ ಅತ್ಯಂತ ಗಲಾಟೆಯಲ್ಲಿ ಕಳೆಯಿತು. ಇಲ್ಲಿಯೂ ಅವನು ತನ್ನ ಮನೆಯಲ್ಲಿರುವಂತೆಯೇ ಇದ್ದ. ನೌಕರನ ಜೊತೆಗೆ ಕುಳಿತು ಎಮ್ಮೆಯ ಹಾಲು ಕರೆಯುವುದಕ್ಕೂ ಪ್ರಯತ್ನಿಸುತ್ತಿದ್ದ. ಅದಕ್ಕೆ ಮೇವು ಹಾಕುತ್ತಿದ್ದ.

ನಾನು ನಾಜ್‌ನೀನ್‌ಳ ಬಗ್ಗೆ ವಿಚಾರಿಸಿದೆ. "ಈಗಲೂ ಅವಳ ವಕ್ರ ವರ್ತನೆ ಹಾಗೆಯೇ ಇದೆ. ತನ್ನನ್ನು ಮದುವೆ ಮಾಡಿಕೋ ಎನ್ನುತ್ತಾಳೆ. ಸಾಯಿರಾನನ್ನು ಬಿಡಬೇಡ. ನಾನು ಎರಡನೆ ಹೆಂಡತಿಯಾಗಿಯೇ ಇರುತ್ತೇನೆ, ಅನ್ನುತ್ತಾಳೆ....ಮೂರ್ಖ ಹುಡುಗಿ! ಅವಳಿಗೆ ಗೊತ್ತಿಲ್ಲ. ಎರಡು ಸುಂದರ ಎಳೆತಗಳ ನಡುವೆ ನಾನು ಜೀವಿಸು ವುದು ಎಷ್ಟು ಕಷ್ಟ ಎನ್ನುವುದು" ಎಂದ ಮುಸ್ತಫಾ.

ಕಾಲೇಜಿನ ಅವನ ಐದು ವರ್ಷಗಳು ಮುಗಿದು ಹೋದವು. ತನ್ನ ದೇಶಕ್ಕೆ ಅವನು ಮರಳಿ ಹೋದ. ಹೋಗುವಾಗ ಒಂದು ಬಗೆಯ ಉದಾಸೀನತೆ. ಇನ್ನೊಂದು ಬಗೆಯ ಸಂತೋಷ....

"ನೀವುಗಳೆಲ್ಲ ತುಂಬಾ ನೆನಪಿಗೆ ಬರುವಿರಿ, ಚಿ....ಕ್ಕಮ್ಮ. ತಮ್ಮೆಲ್ಲರನ್ನೂ ನಾನು ನನ್ನ ಮದುವೆಗೆ ಕರೆಸುತ್ತೇನೆ. ಹಿಂದುಸ್ತಾನಿ ಮದುವೆ ನಾನು ನೋಡಿದ್ದೇನೆ. ಈರಾನೀ ಮದುವೆ ನೀವೂ ನೋಡಿ."

"ನಾಜ್‌ನೀನ್‌ಳದು ಹೇಗೆ? ಎಂದು ಕೇಳಿದೆ."

"ಅವಳೊಬ್ಬ ಮೂರ್ಖ ಹುಡುಗಿ. ಸ್ವಲ್ಪ ದಿವಸ ಅತ್ತು ಮರೆತು ಬಿಡುತ್ತಾಳೆ. ಮದುವೆ ಮಾಡಿಕೊಂಡು ಸಂಸಾರ ಹೂಡಿ, ನನ್ನ ದಾರಿಯನ್ನು ಈಗ ಕಾಯುತ್ತಿದ್ದಂತೆ, ತನ್ನ ಇನಿಯನ ದಾರೀ ಕಾಯುತ್ತಾಳೆ" ಎಂದು ನಕ್ಕು ಬಿಟ್ಟ.

ನಿಜವಾಗಲೂ ನಾಜ್‌ನೀನ್‌ಳದು ಸ್ವಲ್ಪ ದಿವಸ ಬಹಳ ಚಿಂತಾಜನಕ ಪರಿಸ್ಥಿತಿ ಇತ್ತು. "ಕಾಲ ಸರಿದಂತೆ ತಳಮಳ ಕಡಿಮೆಯಾಗತೊಡಗಿತು. ಅವಳು ಚೇತರಿಸಿಕೊಂಡಿ ದ್ದಾಳೆ, ಮುಸ್ತಫಾನನ್ನು ಮರೆಯುತ್ತಿದ್ದಾಳೆ" ಎಂದು ಎಲ್ಲರೂ ಅನ್ನುತ್ತಿದ್ದರು. ಆದರೆ ....ನನಗೆ ಗೊತ್ತು. ಅವಳು ಅವನನ್ನು ಮರೆತಿರಲಿಲ್ಲ. ಅವಳ ಹೃದಯ ಮುಸ್ತಫಾನಿ ಗಾಗಿ ಇನ್ನೂ ಮಿಡಿಯುತ್ತಿರುವುದು. ಈಗಲೂ ಅವಳು ಮುಸ್ತಫಾನ ಕನಸನ್ನು ಕಾಣು ತ್ತಿರುವಳು. ಇತ್ತೀಚೆಗೆ ಅವಳಿಗೆ ಎಷ್ಟೋ ಲಗ್ನ ಸಂಬಂಧಗಳೂ ಬಂದವು. ಅವುಗಳನ್ನು ಅವಳು ನಿರಾಕರಿಸಿದಳು.

ಮುಸ್ತಫಾನ ಮಾತುಗಳಲ್ಲಿ, "ನಾನು ಮೂರ್ಖ ಹುಡುಗಿ...." ಎಂದು ಉದಾಸೀನ ಭಾವದಿಂದ ನಕ್ಕು ಆಗಾಗ ನುಡಿಯುವಳು.

ದಿವಸಗಳು ಉರುಳಿದವು.

ಒಂದು ದಿವಸ ನನ್ನ ಹೆಸರಿಗೆ ಮುಸ್ತಫಾನ ಕಾಗದ ಬಂದಿತು.

"ಪ್ರಪಂಚದಲ್ಲಿ ಪ್ರೀತಿಯನ್ನುಳಿದು....ಇನ್ನೂ ಅನೇಕ ದುಃಖಗಳೂ ಇವೆ. ಚಿ....ಕ್ಕಮ್ಮ!...." ಎಂದು ಹರಕು ಮುರುಕು ಉರ್ದು ಭಾಷೆಯಲ್ಲಿ ಬರೆದಿದ್ದ.

"ನಾನು ಸಾಯುರಾಳೊಡನೆ ಮದುವೆಯಾಗುತ್ತಿಲ್ಲ ಚಿ....ಕ್ಕಮ್ಮ. ನನ್ನ ದೇಶಕ್ಕಾಗಿ ಯುದ್ಧದಲ್ಲಿ ಭಾಗ ವಹಿಸುತ್ತಿದ್ದೇನೆ. ರಣರಂಗಕ್ಕೆ ಹೊರಡುತ್ತಿರುವ ನನ್ನನ್ನು ಸಾಯಿರಾನ ಅಶ್ರುತುಂಬಿನ ಎರಡು ನಯನಗಳು ಹಿಂಬಾಲಿಸುತ್ತಿವೆ. ಅವುಗಳೊಡನೆ ಇನ್ನೂ ಎರಡು ನಯನಗಳು ನನಗೆ ನೆನಪಿಗೆ ಬರುತ್ತಿವೆ. ಭಾರತದ ಗಂಗಾ ಜಲದಿಂದ ತುಂಬಿತುಳುಕುವ ಆಳವಾದ ಸುಂದರನಾದ ಉದಾಸೀನವಾದ ಎರಡು ನಯನಗಳು ಮತ್ತು ಕಂಪಿಸುತ್ತಿರುವ ಅಧರಗಳು, ನಾನು ನಿನ್ನನ್ನು ಮರೆಯಲಾರೆ ಮುಸ್ತಫಾ!.... ಮರೆಯಲಾರೆ....ಎನ್ನುತ್ತಿವೆ...." ಮೊದಲಾಗಿ ಬರೆದಿದ್ದ.

"ಓ! ದೇವರೇ!! ನೀನು ಅವನನ್ನು ರಕ್ಷಿಸು. ಯುದ್ಧದಿಂದ ಕಾಪಾಡು" ಎಂದು ಹೃದಯಾಂತರಾಳದಿಂದ ಪ್ರಾರ್ಥಿಸಿಕೊಂಡೆ. ಆದರೆ ದೇವರು ನನ್ನ ಮೊರೆ ಕೇಳಲಿಲ್ಲ. ಮುಸ್ತಫಾ ಸುರಕ್ಷಿತ ಉಳಿಯಲಿಲ್ಲ. ಆ ನಗುಮುಖದ ಚೆನ್ನಿಗ ತರುಣ, ಎರಡು ಪ್ರೀತಿ ನೌಕೆಗಳ ನಡುವೆ ತೇಲುತ್ತ ಮುಳುಗುತ್ತ ಯಾರೊಬ್ಬರ ಮನದಾಶೆಯನ್ನು ಈಡೇರಿಸದೆ ರಣರಂಗದಲ್ಲಿ ತನ್ನ ದೇಶಕ್ಕಾಗಿ ಮಡಿದುಹೋದ.

ನಾಜ್‌ನೀನ್ ಅವನ ಸುಂದರವಾದ ದೊಡ್ಡ ಚಿತ್ರಪಟಕ್ಕೆ ನಿತ್ಯ ಗುಲಾಬಿ ಹೂವಿನ ಹಾರವನ್ನು ಹಾಕಿ ಸುಗಂಧದ ಕಡ್ಡಿಯನ್ನು ಹಚ್ಚುತ್ತಾಳೆ. ಹಾಗೂ ಆ ಚಿತ್ರಪಟದೆದುರು ನಿಂತು, "ನಾನು ಮೂರ್ಖ ಹುಡುಗಿ! ಹೌದು!! ಅದಕ್ಕೇ ನಿನ್ನನ್ನು ಮರೆಯುವುದಕ್ಕಾಗುತ್ತಿಲ್ಲ. ದೇಶಕ್ಕಾಗಿ ಕಾದಿ ಥಳಥಳಿಸುವ ಅಮರ ಸ್ವರ್ಗದಲ್ಲಿ ಮಲಗಿ ನಿದ್ರಿಸುತ್ತಿರುವ ನೀನು ಅದೆಷ್ಟು ಚೆಲುವಾಗಿ ಕಾಣುತ್ತಿರುವಿ" ಎನ್ನುತ್ತಿರುತ್ತಾಳೆ. ನಾನು ಕೇಳುತ್ತಿರುತ್ತೇನೆ.

"ಅವಳು ಹುಚ್ಚಿಯಾಗಿದ್ದಾಳೆಂದು" ಜನರೆನ್ನುತ್ತಾರೆ ಆದರೆ ನಾನು, "ಇಲ್ಲ" ಎನ್ನುತ್ತೇನೆ.

ನನಗೆ ಅವಳು ಹೇಳಿದ್ದಾಳೆ. ಮುಸ್ತಫಾ ತನ್ನ ದೇಶಕ್ಕೆ ತೆರಳುವಾಗ ಅವಳ ಕಿವಿಯಲ್ಲಿ, "ನಾನು ನಿನ್ನನ್ನು ಮರೆಯಲಿಕ್ಕಾಗುವುದಿಲ್ಲ ನಾಜ್...." ಎಂದು ಮೆತ್ತಗೆ ಉಸುರಿದನಂತೆ.

ಆ ಕಿವಿಮಾತು ಅವಳಿಗೆ ನೆನಪಿಗೆ ಬರುತ್ತಲೂ, ದುಃಖಾತಿಶಯದಿಂದ ವಿಹ್ವಲಳಾಗುತ್ತಾಳೆ. ಅವಳು ಎಲ್ಲವನ್ನು ಮರೆತುಬಿಡುತ್ತಾಳೆ. ಆದರೆ ಒಂದನ್ನು ಮಾತ್ರ ನೆನೆಯುತ್ತಾಳೆ. ಅವನ ಕೊನೆ....ಆ ಹೊಸ ಸಮಾಧಿ....ಅದರ ಮೇಲೆಲ್ಲ ಹರಡಿದ ಗುಲಾಬಿ ಹೂಗಳು. ಸುತ್ತುತ್ತಿರುವ ಸುಗಂಧದ ಸುಳಿ ಲೋಬಾನದ ಧೂಪ....ಮುಸ್ತಫಾಗೆ ಗುಲಾಬಿಯೆಂದರೆ ಪ್ರಾಣ....ಮುಸ್ತಫಾ....ಗುಲಾಬಿ....ಅಯ್ಯೋ! ಅರಳಿದ ಗುಲಾಬಿಯಂತಿರುವ ಮುಖದ ಮುಸ್ತಫಾ!!! ಎಂದು ಅವಳು ಅಸ್ಪಷ್ಟವಾಗಿ ಅನ್ನುತ್ತಿರುತ್ತಾಳೆ.

ನಿಜವಾದ ರಜೆ ತೊಗೊಳ್ಳಿ

ಲೇ : ಬ್ರೂಸ್ ಬಾಲ್ಡ್‌ವಿನ್ ಅನು : ಎಂ. ಎಸ್. ಸುಮಿತ್ರಾ

ಈಗ ಮತ್ತೆ ರಜೆಯ ಸಮಯ. ಆದಾಗ್ಯೂ ನೀವು ಹಿಂದಿನ ಅದೇ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುತ್ತೀರಿ. ಮನೆಯಲ್ಲಿ ಅಥವಾ ಕೆಲಸದಲ್ಲಿ ಇರುವಾಗ ಮಾಡಬೇಕಾದದ್ದು ವಿಪರೀತವಾಗಿರುತ್ತೆ. ಬಿಡುವಾದ ಕೊಂಚ ಸಮಯವನ್ನು ನೀವು ಹೊಂಚಿಕೊಂಡರೂ, ಮಾಡದೆ ಬಿಟ್ಟಿರುವ ಕೆಲಸವನ್ನು ಪೂರೈಸಲು ಅದನ್ನು ಉಪಯೋಗಿಸಿ ಕೊಳ್ಳುವಂತೆ ಕಾಣುತ್ತದೆ. ಈಗ ಹೊರಹೋಗುವುದು ಹಿಂದೆ ಇದ್ದಷ್ಟು ಸುಲಭವಾಗಿಲ್ಲ.

ವೃತ್ತಿ ಜೀವನದ ಆರಂಭದಲ್ಲಿ ಕೆಲಸ ಹಾಗೂ ಪುರಸೊತ್ತಿನ ನಡುವೆ ಆರೋಗ್ಯಕರ ಸಮತೋಲನ ಇರಿಸಿಕೊಂಡಿದ್ದಿರಿ. ನೀವು ಹೊರಗೆ ಕಳೆಯುವ ಕಾಲ, ರಜಾದಿನಗಳು ವಾರಾಂತ್ಯ ದಿನಗಳು, ದಿನ ಪ್ರವಾಸಗಳು, ಸಂಜೆಯ ತಿರುಗಾಟವೂ ಸೇರಿ ಈಗ ಇಳಿಮುಖ ವಾಗುತ್ತಿದೆ. ಇದು ನಿಮ್ಮ ಸುಖ, ಆರೋಗ್ಯದ ಮೇಲೆ ಕೂಡಾ ಪರಿಣಾಮ ಉಂಟುಮಾಡಿದೆ.

ಬದುಕುವ ಅಭಿರುಚಿ ಉಳಿಸಿಕೊಳ್ಳಲು ವಿರಾಮಕಾಲ ಇಟ್ಟು ಕೊಳ್ಳುವುದು, ವಿಶ್ರಾಂತಿ ಮತ್ತು ಹೊರಗಡೆ ಎಲ್ಲಾದರೂ ಇದ್ದು ಬರುವುದು ಅಗತ್ಯ. ದೈಹಿಕ ಪುನರುಜ್ಜೀವನಕ್ಕಾಗಿ ವಿರಾಮ, ಕೊಡವಿಕೊಳ್ಳಲಾಗದ ಆ ಸುಸ್ತಾಗಿದೆ ಎನ್ನುವ ಭಾವನೆಯಿಂದ ನೀವು ಚೇತರಿಸಿಕೊಳ್ಳಲು ವಿಶ್ರಾಂತಿ. ಎಲ್ಲಾದರೂ ಹೊರಗೆ ಹೋಗುವುದು ಸಾಮಾಜಿಕ ವಿಮೋಚನೆಗಾಗಿ ; ನೀನು ಏನಾಗಿದ್ದೀ ಹಾಗೂ ನೀನು ಏನಾಗಬೇಕೆಂದು ಇದ್ದೀಯೆ ಎಂಬುದರ ನೋಟ ವನ್ನು ನಿಶ್ಶಬ್ದತೆಯಲ್ಲಿ ಕಂಡುಕೊಳ್ಳಲು.

ನಿಮ್ಮ ರಜೆ ಆಶಾದಾಯಕವಾಗಬಹುದು ಅಥವಾ ಆಶಾ ಭಂಗದ ಮೂಲವೂ ಆಗಬಹುದು. ರಜೆ ಸಾಮಾನ್ಯವಾದ ಐದು ಬಾಡು ಗಳಲ್ಲಿರುತ್ತದೆ.

೧೯೮೮ ರ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಟೇಕ್ ಎ ರಿಯಲ್ ವೆಕೇಷನ್" ಲೇಖನದ ಅನುವಾದ.

ಜಾಡು ೧ : ನಿರಾಶೆ : ಬಹು ಮಂದಿ ಸಾಧಕರಂತೆ ನೀವೂ ಸುಂದರವಾದ ಮನೆ ಕೊಳ್ಳಲು ಕಷ್ಟಪಟ್ಟು ದುಡಿಯುತ್ತೀರಿ. ಅದರಲ್ಲಿ ವಿಶ್ರಮಿಸಲು ಆಗುವುದಿಲ್ಲ ಎನ್ನುವುದನ್ನು ಕಂಡುಕೊಳ್ಳುತ್ತೀರಿ. ಮನೆ ತನ್ನದೇ ಆದ ಬೇಡಿಕೆಗಳು ಮತ್ತು ಒತ್ತಡಗಳ ಭಾಗವಾಗಿ ಬಿಡುತ್ತದೆ—ನಿಮ್ಮ ಕಚೇರಿಯ ಮಾನಸಿಕ ವಿಸ್ತೃತರೂಪ. ಆಗ ರಜೆಯೆಂದರೆ ಬರೀ ವಿಶ್ರಾಮಕ್ಕಾಗಿ ದೂರ ಹೋಗುವ ಹತಾಶ ಓಟವಾಗಿರುತ್ತದೆ.

ಪರಿಹಾರ : ನೋಡಿಕೊಳ್ಳಬೇಕಾದ ವ್ಯಕ್ತಿಗಳ ಪಟ್ಟಿಯಿಂದ ಕೊನೆಯಲ್ಲಿರುವ ನಿಮ್ಮ ಹೆಸರನ್ನು ತೆಗೆದು ಹಾಕಿ! ಯಾವುದು ಮಾಡಬೇಕಾಗಿದೆಯೋ ಅದು ಆಗಿಯೇ ತೀರುತ್ತದೆ ಎಂದು ನಂಬಿರಿ. ನೀವು ಮತ್ತು ನಿಮ್ಮ ಕುಟುಂಬಕ್ಕಾಗಿ ಸಮಯ ವ್ಯಯಿಸುವುದು ಕಡ್ಡಾಯ ಮಾಡಿಕೊಳ್ಳಿ. ರಜಾ ದಿನಗಳಲ್ಲಿ ಬರಿದೆ ವಿಶ್ರಮಿಸುವುದಕ್ಕಿಂತ ಹೆಚ್ಚಿನದೇನಾದರೂ ಮಾಡಲಾಗುವಂತೆ ವರ್ಷ ಪೂರ್ತಿ ಮನೆಯಲ್ಲಿ ವಿಶ್ರಮಿಸುವುದನ್ನು ಕಲಿಯಿರಿ.

ಜಾಡು ೨ : ನಾಕು ದಿನಗಳ ಪರಿಮಿತಿ : ಒಂದು ದಂಪತಿ ರಜೆಗಾಗಿ ಹೊರಡುತ್ತಾರೆ. ಅವರು ಆಮೋದ ಪ್ರಮೋದಗಳಲ್ಲಿ ಎಷ್ಟೇ ಮಗ್ನರಾಗಿದ್ದರೂ ಸೂಕ್ಷ್ಮ ಆತಂಕವೊಂದು ಬೆಳೆಯಲಾರಂಭಿಸುತ್ತದೆ. ಹೊರಟ ೯೬ ಗಂಟೆಗಳ ಸುಮಾರಿನಲ್ಲಿ ಒಂದು ಸಂದಿಗ್ಧ ಬಿಂದುವಿಗೆ ತಲುಪಿತ್ತು. ನೆಪಗಳನ್ನು ಮುಂದುಮಾಡಿದ್ದಾಯಿತು. ದಂಪತಿಗಳು ಮನೆಯ ಕಡೆ ಹೊರಡುತ್ತಾರೆ. ಇಂತಹ ವ್ಯಕ್ತಿಗಳಿಗೆ ಪರಿಚಿತ ವಾತಾವರಣ ಮತ್ತು ಪ್ರತಿದಿನದ ಕ್ರಮಗಳು ಸುರಕ್ಷತೆಗೆ ಸಂಬಂಧಿತವಾಗಿರುತ್ತದೆ. ಒಳ ಮನಸ್ಸಿನಲ್ಲಿ ಬದಲಾವಣೆಯನ್ನು ಉದ್ದೀಪನಗೊಳಿಸುವ ಹೊಸ ಅನುಭವದ ಬುನಾದಿ ಎಂದು ನೋಡುವುದರ ಬದಲಾಗಿ ಬೆದರಿಕೆಯಂತೆ ನೋಡುತ್ತಾರೆ.

ಪರಿಹಾರ : ಇದು ಪರಿಚಿತ ಎನಿಸಿದರೆ ನೀವು ಸೂಕ್ಷ್ಮತೆಯನ್ನು ಹೋಗಲಾಡಿಸಿಕೊಳ್ಳುವುದು ಒಳ್ಳೆಯದು. ಕ್ರಮವಾಗಿ ರಜಾದಿನಗಳನ್ನು ಒಂದರಿಂದ ಎರಡು ವಾರಗಳವರೆಗೆ ಹೆಚ್ಚಿಸಿಕೊಳ್ಳುತ್ತಾ ಬರುವುದರ ಮೂಲಕ ಇದನ್ನು ಸಾಧಿಸಬಹುದು. ಅಲ್ಲದೆ ಮನೆಯಲ್ಲೂ ದಿನಕ್ರಮದ ಕೆಲಸದಲ್ಲಿ ಬದಲಾವಣೆ ಮಾಡಿಕೊಂಡರೆ ಮಾನಸಿಕ ನೆಮ್ಮದಿಗಾಗಿ ಅದರ ಮೇಲೆ ಅವಲಂಬಿಸುವುದು ತಪ್ಪುತ್ತದೆ.

ಜಾಡು ೩ : ಪೊಳ್ಳು ಕಾಲ : ಸಾಮಾನ್ಯವಾಗಿ ಕೆಲಸದಲ್ಲೇ ತೀವ್ರ ಆಸಕ್ತಿಯುಳ್ಳ ಒಬ್ಬ ವ್ಯಕ್ತಿ ಅದರಿಂದ ದೂರವಿರುವುದೆಂದರೆ ಬಹಳ ಮುಜಗರ ಪಡುತ್ತಾನೆ. ಕುಟುಂಬಕ್ಕೇ ಪೊಳ್ಳಾಟವಾಡುವವನಾಗಿ ಆತ ಆನುಷಂಗಿಕವಾಗಿ ರಜೆ ತೆಗೆದುಕೊಂಡು ಹೋಗಲು ಸಮ್ಮತಿಸುತ್ತಾನೆ. ಅಂದರೆ ಅವನು ಅದರಲ್ಲಿ ಸಂತಸಪಡುವುದಿಲ್ಲ.

ಪರಿಹಾರ : ನೀನು ಮಾಡುವ ಕೆಲಸಕ್ಕಿಂತ ನೀನು ಹೆಚ್ಚಿನವನೆಂಬುದನ್ನು ಗುರುತಿಸು! ನಿನ್ನ ಕುಟುಂಬದವರು ಪ್ರಾಪಂಚಿಕ ವಸ್ತುಗಳಿಗಿಂತಲೂ ನಿನ್ನೊಡನೆ

ಹೆಚ್ಚು ಕಾಲ ಕಳೆಯಲು ಬಯಸುತ್ತಾರೆ. ಆದಷ್ಟೂ ಹೆಚ್ಚು ಬಾರಿ ರಜಾ ತೊಗೊಂಡು ಹೋಗು. ನಿನ್ನ 'ವಿಜಯ ಸಾಧಕ'ನ ಪಾತ್ರಕ್ಕಿಂತ ಮೀರಿದ ಸಾಮ್ಯವನ್ನು ಬೆಳೆಸುವಲ್ಲಿ ಇಂಥ ವಿಶ್ರಾಂತಿ—ಬಿಡುವು ಸಹಾಯಕವಾಗುತ್ತದೆ.

ಜಾಡು ೪ : ಪ್ರೆಶರ್ ಕುಕರ್ : ಕೆಲವು ವ್ಯಕ್ತಿಗಳು ತಾವು ಮಾಡಿದ ಪ್ರಯಾಣ ಎಷ್ಟು ಆಯಾಸ ಹೋಗಿತ್ತು ಎನ್ನುವ ಅಭಿಪ್ರಾಯ ಮೂಡುವಂತೆ ಹೇಳಿ, ಆ ಅನುಭವ ದಿಂದ ವಿಶ್ರಾಂತಿ ಪಡೆಯಲು ಮನೆಗೆ ಬರಬೇಕು ಎನ್ನುವಂತೆ ಮಾಡುತ್ತಾರೆ. ರಜಾದ ಪ್ರತಿಕ್ಷಣವೂ 'ಅರ್ಥಪೂರ್ಣ' ಕೆಲಸಗಳಿಂದ ತುಂಬಿರದಿದ್ದರೆ ರಜಾ ವ್ಯರ್ಥವಾಯಿತು ಎಂದೇ ಭಾವಿಸುವರು. ಬಿಗಿಯಾದ ತಪಸೀಲಿನಿಂದಾಗಿ ಆಶಾಭಂಗ ಹೆಚ್ಚುತ್ತದೆ, ಸಿಟ್ಟು ಕುಟುಂಬ ವಿನೋದವನ್ನು ಹಾಳು ಮಾಡುತ್ತದೆ.

ಪರಿಹಾರ : ದಿಟವಾದ ವಿಶ್ರಾಂತಿ ಅನುಭವವನ್ನು ಆಸ್ವಾದಿಸುವುದರಲ್ಲಿ ಅಡಗಿದೆ ಎನ್ನುವುದನ್ನು ಒಪ್ಪಿಕೊಳ್ಳಿ. ಇದು ನಿಜವಾಗಿ 'ಫಲಕಾರಿ'ಯಾಗಿರಲೇಬೇಕು ಎಂದೇನೂ ಇಲ್ಲ, ಯೋಜನೆಗೆ ತನ್ನದೇ ಆದ ಸ್ಥಾನವಿದೆ. ಆದರೆ ಬಿಗಿಯಾದ ತಪಸೀಲೂ ವ್ಯರ್ಥವಾಗ ಬಹುದು. ಕುಟುಂಬದ ಸದಸ್ಯರ ಅಗತ್ಯಗಳನ್ನು ಕೇಳು ಮತ್ತು ಅವರೊಡನೆ ರಾಜಿ ಮಾಡಿಕೊ.

ಜಾಡು ೫. ಮತ್ತೆ ಮನೆಗೆ....ಪುನಃ ಮನೆಗೆ : ನೈಮಿತ್ತಿಕವಾಗಿ ತಾಯ್ತಂದೆಯ ರನ್ನು ಹಾಗೂ ಕುಟುಂಬದ ಸದಸ್ಯರನ್ನು ಭೇಟಿ ಮಾಡುವುದು ಒಂದು ರೀತಿ. ನಿಮ್ಮ ರಜಾ ಕಾಲವನ್ನೆಲ್ಲಾ ಬಂಧುಗಳನ್ನು ಕಾಣುವುದರಲ್ಲೇ ಕಳೆಯುವುದು ಬೇರೆ ರೀತಿಯದು. ಹಲವು ಸಲ ಈ ತರಹೆಯ ಭೇಟಿಗಳು ತಪ್ಪು ತಪ್ಪಾದ ಪ್ರೇರಣೆಗಳಿಂದಾಗಿ ಆಗಿರುತ್ತದೆ ಅಪರಾಧ, ಋಣ, ಆರ್ಥಿಕ ಪರ್ಯಾಲೋಚನೆ ಹೀಗೆ.

ಪರಿಹಾರ : ಬಂಧುಗಳ ಮನೆಗೆ ಆಗಾಗ್ಯೆ ಹೋಗುತ್ತೀರಿ. ಆದರೆ ರಜಾ ಅವಧಿ ಯಲ್ಲಿ ಕುಟುಂಬದಲ್ಲಿ ಒಬ್ಬರಂತೆ ಅವರನ್ನೂ ಸೇರಿಸಿಕೊಳ್ಳಿ. ಬರಬಹುದಾದ ಋಣದ ಭಾವನೆ ಅಥವಾ ಅಪರಾಧೀ ಮನೋಭಾವನೆಯನ್ನು ಧೈರ್ಯವಾಗಿ ಎದುರಿಸಿ. ನೀವು ಪೂರ್ವ ನಿದರ್ಶನಗಳನ್ನು ಮುರಿಯುತ್ತಿದ್ದೀರಿ ಅಷ್ಟೆ. ಹಾಗೇ ನೀವು ಕೊಂಚ ಬೆಳೆಯು ತ್ತಿದ್ದೀರಿ ಕೂಡಾ.

ನಿಮ್ಮ ರಜಾ ದಿನಗಳ ಜಾಡನ್ನು ನಿರ್ಧರಿಸಿಯಾದ ಮೇಲೆ ಈ ಹೆಚ್ಚಿನ ಸೂಚನೆ ಗಳನ್ನೂ ಗಮನಿಸಿ.

೧. ಪ್ರತಿಯೊಬ್ಬರಿಗಾಗಿಯೂ ಏನಾದರೂ ಆರಿಸಿರಿ. ನಿಮಗೆ ಕಾರ್ಯ ಅಗತ್ಯ ವಾಗಬಹುದು, ನಿಮ್ಮ ಪತ್ನಿ ಅದನ್ನು ಹಗುರವಾಗಿ ತೆಗೆದುಕೊಳ್ಳಲು ಇಷ್ಟ ಪಡಬಹುದು. ಮಕ್ಕಳಿಗೆ ಸತತ ಉತ್ತೇಜನ ಅಗತ್ಯವಾದೀತು. ಎಲ್ಲರ ಅಗತ್ಯಗಳನ್ನೂ ಗಮನಿಸಿ ಮತ್ತು ಯೋಜನೆ ಹಾಕುವಾಗ ಎಲ್ಲರನ್ನೂ ಸೇರಿಸಿಕೊಳ್ಳಿ.

೨. ಮುಂದಾಗಿಯೇ ಗಂಟು ಕಟ್ಟಿ. ಹೊರಡುವುದಕ್ಕೆ ಪೂರ್ವಭಾವಿಯಾಗಿ ಮಾಡಬೇಕಾದ ಅಗತ್ಯದ ಕೆಲಸಗಳು ಹೇರಳವಾಗಿರುತ್ತದೆ. ಹೊರಡುವುದಕ್ಕೆ ಮುಂಚಿನ ಕೆಲವು ದಿನಗಳು ಕ್ಷೋಭೆಯುಂಟು ಮಾಡಬಲ್ಲವು. ಸಮಯಕ್ಕೆ ಮುಂಚಿತವಾಗಿ ತಯಾರಾಗಿರುವುದು—ಸಿದ್ಧವಾಗಲು ಒಂದು ದಿನ ಆಫ್ ತೊಗೊಂಡೂ—ನಿಮ್ಮನ್ನು ಆರಾಮವಾಗಿ, ಆನಂದದಿಂದ ಪ್ರವಾಸ ಹೋಗಲು ಬಿಡುತ್ತದೆ.

೩. ನಿಮ್ಮ ನಿತ್ಯಕ್ರಮವನ್ನು ತಪ್ಪಿಸಿರಿ. ನೀವು ಗಂಭೀರ ಸ್ವಭಾವದವರಾದರೆ, ಹೆಚ್ಚು ಚಟುವಟಿಕೆಯಾಗಿರುವುದು ತೃಪ್ತಿದಾಯಕ. ನಿಮ್ಮ ಮಾಮೂಲು ರೀತಿಯೇ ಅತಿಯಾಗಿದ್ದರೆ ಕೊಂಚ ನಿಧಾನಮಾಡಿ.

೪. ಕೆಲಸಕ್ಕೆ 'ಇಲ್ಲ' ಎನ್ನಿ. ನಿಮ್ಮ ಬ್ರೀಫ್‌ಕೇಸನ್ನು ಜೊತೆಗೆ ಕೊಂಡೊಯ್ಯಬೇಕೆನ್ನುವ ಆಗ್ರಹವನ್ನು ಪ್ರತಿಭಟಿಸಿ! ಆಫೀಸಿಗೆ ಫೋನಿಸಬೇಡಿ! ಮತ್ತು ನಿಜವಾದ ರಜಕ್ಕೆ 'ಕೆಲಸದ ರಜ' ಬದಲಿಯಾಗಲು ಬಿಡಬೇಡಿ.

೫. ಮೂಲಭೂತವಾದುದಕ್ಕೆ ಹಿಂದಿರುಗು. ನಿಮ್ಮ ಮನೋಭಾವದ ಒಳಿತಿಗಾಗಿ ಸೌಂದರ್ಯ ಆಸ್ವಾದನೆ ಹಾಗೂ ಜೀವನದ ಸಣ್ಣಪುಟ್ಟ ಸಂತೋಷಗಳನ್ನು ಅನುಭವಿಸುವುದು ಮುಖ್ಯವಾಗಿದೆ. ಸೂರ್ಯೋದಯ ಕಾಲದಲ್ಲಿ ಸಮುದ್ರ ದಂಡೆಯಲ್ಲಿ ನಡೆದಾಡುವುದೋ ಅಥವಾ ಮರತುಂಬಿರುವ ಕಾಡುದಾರಿಯಲ್ಲಿ ಪ್ರಶಾಂತ ವನಭೋಜನವನ್ನೋ ಯೋಜಿಸಿ.

೬. ಅಡಗಿರುವ ಕಾರ್ಯಯಾದಿಗಳನ್ನು ದೂರವಿಡಿ. ಬಹಳ ಸರ್ತಿ ಮನೆತನದ ಒಬ್ಬರು ಬಾಂಧವ್ಯವನ್ನು ಪುನಶ್ಚೇತನಗೊಳಿಸಲು, ಅದ್ಭುತ ಸಾಹಸದ ಅಂಕಣಕ್ಕಾಗಿ ಪ್ರತೀಕ್ಷಿಸುತ್ತಾರೆಯೆ ಹೊರತು, ಅದನ್ನು ಹಂಚಿಕೊಳ್ಳಲಾರರು. ನೀವು ಇತರರನ್ನು ಪಾಲ್ಗೊಳ್ಳಲು ಬಿಡದಿದ್ದರೆ ಈ ಭ್ರಾಂತಿಗಳು ನಿಜವಾಗಲಾರವು.

೭. ಸೊಳ್ಳೆಗಳನ್ನು ಮರೆಯಬೇಡಿ. ವಾಸ್ತವವಾದಿಯಾಗಿರಿ. ನೀವು ಬೆನ್ನನ್ನು ಸೂರ್ಯಪ್ರಕಾಶದಿಂದ ಸುಡಿಸಿಕೊಳ್ಳುತ್ತೀರಿ. ಮಕ್ಕಳು ಜಗಳವಾಡುತ್ತಾರೆ. ವಾಸ್ತವತೆಗೆ ಸಿದ್ಧರಾಗಿರಿ, ಇಲ್ಲದಿದ್ದರೆ ನಿಮ್ಮನ್ನು ನೀವೇ ಆಶಾಭಂಗಕ್ಕೆ ತಳ್ಳಿಕೊಳ್ಳುತ್ತೀರಿ.

೮. ಕೆಲ ಕಾಲವನ್ನು ಒಬ್ಬರೇ ಕಳೆಯಿರಿ. ಕಾರ್ಯನಿರತ ಜನರಿಗೆ ಮನೆಯಲ್ಲಿ ತಮ್ಮ ಪಾಡಿಗೆ ತಾವು ಇರಲು ಸ್ವಲ್ಪ ಕಾಲದ ಅಗತ್ಯವಿರುತ್ತದೆ, ದಿನವೊಂದಕ್ಕೆ ಕೇವಲ ಇಪ್ಪತ್ತು ನಿಮಿಷ ಮಾತ್ರ ಸಿಕ್ಕರೂ ಸರಿ. ರಜಾ ಕಾಲದಲ್ಲೂ ಇಂತಹ ಸಮಯ ದೊರಕಿಸಿಕೊಳ್ಳಿ, ಕುಟುಂಬದ ಇತರ ಸದಸ್ಯರಿಗೂ ಹೀಗೆ ಮಾಡಲು ಉತ್ತೇಜನ ನೀಡಿ. ಇಂತಹ ಸಂದಿಗ್ಧ ನಿಮಿಷಗಳನ್ನು ನೋಟ ಗುಣಪಡಿಸಿಕೊಳ್ಳಲು ಉಪಯೋಗಿಸಿ ಮತ್ತು ಜೀವನದಿಂದ ಏನು ಬಯಸುತ್ತೀರಿ ಎಂಬುದನ್ನು ನಿಶ್ಚಯಿಸಿ.

ನೀವು ವರ್ಷಾಂತರ ಹೆಣಗಾಡಿದ್ದು, ತ್ಯಾಗಗಳನ್ನೂ ಮಾಡಿರುತ್ತೀರಾಗಿ ಹೊರಗೆ ಕಳೆಯುವ ಕಾಲಕ್ಕೆ ಅರ್ಹರಾಗಿರುತ್ತೀರಿ. ಆದರೆ ಅದನ್ನು ಸಾಧಿಸಿಕೊಳ್ಳಲು ನೀವು ಆಯ್ಕೆಗಳನ್ನು ಮಾಡಿಕೊಳ್ಳಲೇಬೇಕು. ಹಾಗೆಂದರೆ ವೈಯಕ್ತಿಕ ತೃಪ್ತಿಯನ್ನು ಹಣ ಅಥವಾ ಅಂತಸ್ತಿಗಿಂತಲೂ ಮಿಗಿಲಾಗಿಟ್ಟುಕೊಳ್ಳಬೇಕು. ಹಾಗೆಂದರೆ ನಿಮ್ಮನ್ನೇ ನೀವು ಕುಟುಂಬಕ್ಕಾಗಿ ಕೊಟ್ಟುಕೊಳ್ಳಬೇಕು. ಹಾಗೆಂದರೆ ನಿಮ್ಮನ್ನು ನೀವು ದೈಹಿಕವಾಗಿ ಹಾಗೂ ಮಾನಸಿಕವಾಗಿ ನೋಡಿಕೊಳ್ಳಬೇಕು—ದೀರ್ಘಕಾಲ ನೀವು ತಾಳಿಕೊಳ್ಳಬೇಕಲ್ಲ.

ನೀವು ಆ ಮಾತಿಗೇ ನೇರವಾಗಿಬಂದರೆ, ಅಚ್ಚುಕಟ್ಟಾದ ರಜಾ ದಿನಗಳಿಗಾಗಿ ನಿಮಗೆ ಸಮಯಾವಕಾಶ ಇದ್ದೇ ಇರುತ್ತದೆ. ನೀವು ಹಾಗೊಮ್ಮೆ ತೆಗೆದುಕೊಳ್ಳಲು ಶಕ್ತರೂ ಇದ್ದೀರಿ. ಆದ್ದರಿಂದ ನೀವು ಹೊರಟು ಬಿಡಿ!

ಕಲ್ಲು ಬಂಡೆಗಳಿಂದ ಕಟ್ಟಲಾದ ಗುಡಿಗಳಿಗಿಂತಲೂ ನರಗಳಿಂದಲೂ ಮಾಂಸದಿಂದಲೂ ಕಟ್ಟಲಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೆ ಹಳೆಯವು.

ಗಾಂಧೀಜಿ

ನಿಜವಾದ ದೀನ ಬಂಧುಗಳು

—ವಿವಿಧ ಲೇಖಕರು **ಅನು : ಗೋಪಾಲ ಆಶ್ರಿತ**

ಡೇಸಿ ಮೆಂಡೆಸ್ : ಬೊಂಬಾಯಿಯ ಟಾಟಾ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆಯಲ್ಲಿನ ಕೆಲಸಗಾರರ ಮುಷ್ಕರ ೯ ದಿನಗಳವರೆಗೆ ನಡೆದಾಗ ಅದು ಉಗ್ರಸ್ವರೂಪ ತಾಳಬಹುದೆಂದೆನಿಸಿತ್ತು. ಆದರೂ ಡೇಸಿ ಮೆಂಡೆಸಳ ದಿನಚರಿಯಲ್ಲಿ ಯಾವ ಬದಲಾವಣೆಯಾಗಲಿಲ್ಲ. ಮುಷ್ಕರ ನಡೆಸುತ್ತಿದ್ದ ಕೆಲಸಗಾರರು ತನ್ನನ್ನು ಬಡಿಯುವರೆಂಬ ಬೆದರಿಕೆಯನ್ನು ಕಡೆಗಣಿಸಿ ಅವಳು ಹಗಲು ರಾತ್ರಿ—ಕೋಣೆಗಳಲ್ಲಿನ ಕಸ ಬಳಿಯುವದು, ನೆಲ ತೊಳೆಯುವದು, ಶೌಚಾಲಯ ತೊಳೆಯುವದು, ರೋಗಿಗಳ ಬಟ್ಟೆಗಳನ್ನು ಒಗೆಯುವದು, ಅವರಿಗೆ ಪಟ್ಟಿಕಟ್ಟುವಂಥ ಕೆಲಸ ಮಾಡಿದಳು.

ಸುಮಾರು ೩೦ ವರ್ಷಗಳಿಂದ ಡೇಸಿ ಟಾಟಾ ಆಸ್ಪತ್ರೆಯಲ್ಲಿ ಸ್ವಯಂ ಸಹಾಯಕಳಾಗಿ ದುಡಿಯುತ್ತಿರುವಳು. ಇದೆಲ್ಲ ಪ್ರಾರಂಭವಾಗಿದ್ದು ೧೯೫೨ರಲ್ಲಿ. ಈ ಆಸ್ಪತ್ರೆಯ ಹೊರಗಡೆ ಕಟ್ಟೆಯ ಮೇಲೊಬ್ಬ ರೋಗಿ ಬಳಲುತ್ತಿದ್ದುದನ್ನು ಅವಳು ಕಂಡಳು. ಅವನ ಮುಖದ ಅರ್ಧಭಾಗ ಕ್ಯಾನ್ಸರಿಗೆ ಬಲಿಯಾಗಿತ್ತು. ಅವಳಿಗೆ ಅಂದು ರಾತ್ರಿ ನಿದ್ರೆ ಹತ್ತಲಿಲ್ಲ. ಪ್ರತಿಸಲ ಅವಳು ಕಣ್ಣು ಮುಚ್ಚುತ್ತಿದ್ದಂತೆ, ಆ ವ್ಯಕ್ತಿಯ ಹುಣ್ಣಿನ ಮುಖ ಅವಳೆದುರಿಗೆ ಬರುತ್ತಿತ್ತು. ಮರುದಿನ ಬೆಳಿಗ್ಗೆ ಅವಳು ಆಸ್ಪತ್ರೆಗೆ ಮತ್ತೆ ಬಂದಳು. ಸಾಮಾನ್ಯವಾಗಿ ಅಪರಿಚಿತ ವ್ಯಕ್ತಿಗಳೊಡನೆ ಮಾತನಾಡದ ಡೇಸಿ ಆ ರೋಗಿಯ ಜೊತೆ ಹರಟೆ ಹೊಡೆಯ ಹತ್ತಿದಳು.

ಹಿಂದೆ ಎಲೆ ಅಡಿಕೆ (ಪಾನವಾಲಾ) ವ್ಯಾಪಾರದಲ್ಲಿದ್ದ ಆ ಮನುಷ್ಯನ ವ್ಯಾಪಾರ ಚೆನ್ನಾಗಿ ನಡೆದಿತ್ತಂತೆ. ಆದರೆ ಈ ರೋಗದ ಚಿನ್ಹೆಗಳು ಕಾಣ ಹತ್ತಿದಂತೆ, ವ್ಯಾಪಾರ ಇಳಿಮುಖವಾಯಿತಂತೆ. "ನನ್ನ ಜೊತೆ ಮಾತಾಡು ಮಗಳೆ. ಆಗಾಗ ಬಂದು ನನ್ನನ್ನು ಕಂಡು

೧೯೮೭ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಹೀರೋಸ್ ಫಾರ್ ಟುಡೇ" ಎಂಬ ಲೇಖನದ ಅನುವಾದ.

ಹೋಗು" ಎಂದು ಕೇಳಿಕೊಂಡನು. ಈ ರೀತಿಯಾಗಿ, ಕಾಲಾವಧಿ ಮುಗಿದ ರೋಗಿಗಳ ಜೀವನದಲ್ಲಿ ನಲಿವನ್ನು ಹುಟ್ಟಿಸುವ ಉದ್ದೇಶದಿಂದ, ಮೆಂಡೆಸ್ ಈ ಆಸ್ಪತ್ರೆಗೆ ಹೋಗಲಾರಂಭಿಸಿದಳು.

ಮೆಂಡೆಸಳಿಗೆ ವೈದ್ಯಳಾಗಬೇಕು ಅಥವಾ ನರ್ಸಳಾಗ (ಆಯಾ)ಬೇಕು ಎಂಬ ಹಂಬಲ ಮೊದಲಿನಿಂದಲೂ ಇತ್ತು. ಆದರೆ ಅವಳ ಕುಟುಂಬದ ಆರ್ಥಿಕ ಪರಿಸ್ಥಿತಿ ಅಡ್ಡ ಬಂದುದರಿಂದ ಅವಳು ಶಿಕ್ಷಕಿಯಾದಳು. ಈ ರೋಗಿಗಳ ಶೂಶ್ರೂಷೆಯಲ್ಲಿ ಹೆಚ್ಚೆಚ್ಚು ಸಮಯ ವಿನಿಯೋಗಿಸಬೇಕಾಗುವದೆಂದೆನಿಸಿದಾಗ ಅವಳು, ಶಿಕ್ಷಕಿಯ ಕೆಲಸ ಬಿಟ್ಟು ಬಿಟ್ಟಳು. ಇಂದು ಅವಳು, ಕಾಲಾವಧಿ ಮುಗಿದ ರೋಗಿಗಳ ಆಶ್ರಮದಲ್ಲಿಯೆ ನೆಲಸಿದ್ದಾಳೆ.

ಸಾಮಾನ್ಯವಾಗಿ ಅವಳ ದಿನಚರಿಯೇನು? ರೋಗಿಗಳ ಜೊತೆ ಮಾತನಾಡಿ ಅವರನ್ನು ವೈದ್ಯರ ಹತ್ತಿರ ಕರೆದೊಯ್ದು, ಅವರಿಗೆ ಔಷಧೋಪಚಾರ ದೊರೆಯುವಂತೆ ಮಾಡುವಲ್ಲಿ ಅವಳ ಹೆಚ್ಚಿನ ಸಮಯ ವಿನಿಯೋಗವಾಗುತ್ತದೆ. ವಾರಕ್ಕೆ ಎರಡುಸಲ ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಕ್ಯಾನ್ಸರ್ ರೋಗಿಗಳಿಗೆ ಪಟ್ಟಿ ಬದಲಾಯಿಸಿ ಬರುತ್ತಾಳೆ. ರೋಗಿಗಳಿಗೆ ಅಥವಾ ಅವರ ಬಂಧುಗಳಿಗೆ ರೈಲು, ಬಸ್ಸು ಅಥವಾ ವಿಮಾನದ ಟಿಕೇಟು ದೊರಕಿಸಿ ಕೊಡುವಲ್ಲಿಯೂ ಅವಳು ಸಹಾಯ ಮಾಡುತ್ತಾಳೆ. ಮೆಂಡೆಸಳ ಕೀರ್ತಿ ಎಲ್ಲೆಡೆ ಹಬ್ಬಿದೆ. ಈಗಲೂ ಅನೇಕ ರೋಗಿಗಳು ಅವಳ ಸಹಾಯ ಮತ್ತು ಸಲಹೆ ಯಾಚಿಸಿ ಪತ್ರ ಬರೆಯುತ್ತಾರೆ. ಕಳೆದ ವರ್ಷ ಬೊಂಬಾಯಿಯ ರೋಟರಿ ಸಂಸ್ಥೆ ಅವಳ ಈ ನಿಸ್ವಾರ್ಥ ಸೇವೆಗಾಗಿ ಪ್ರಶಸ್ತಿ ನೀಡಿ ಗೌರವಿಸಿತು.

(ಇ. ಆರ್. ರಾಮಕುಮಾರ, ಫೆಮಿನಾ)

* * *

ಬಾಬಾ ಆಮಟೆ: ೭೩ ವರ್ಷಗಳ ಹಿಂದೆ ಮಹಾರಾಷ್ಟ್ರದ ಉಚ್ಚ ಕುಲದ ಮನೆತನವೊಂದರಲ್ಲಿ ಹುಟ್ಟಿದ ಮುರಲಿಧರ ದೇವಿದಾಸ ಆಮಟೆ, ಉನ್ನತ ಶಿಕ್ಷಣ ಪಡೆದು ನ್ಯಾಯವಾದಿಯಾಗಬೇಕಿತ್ತು. ಆದರೆ ಬಾಲ್ಯದಿಂದಲೇ ಕುಲೀನ ವರ್ಗದವರೆಸುಗ ತ್ತಿದ್ದ ತಾರತಮ್ಯದ ವಿರುದ್ಧ ಅವನು ಹೋರಾಡಿದನು. ಗಾಂಧೀಜಿಯವರ ಅಸ್ಪೃಶ್ಯತಾ ಆಂದೋಲನದಲ್ಲಿ ಪಾಲ್ಗೊಂಡು ಹರಿಜನರೊಡನೆ ಕುಳಿತು ಊಟಮಾಡಿದನು. ಮದುವೆ ಯಾದ ಕೆಲವೇ ವಾರಗಳಲ್ಲಿ, ಹೆಂಡತಿಯ ಪೂರ್ಣ ಸಹಕಾರದೊಂದಿಗೆ, ನ್ಯಾಯವಾದಿ ಯಾಗಲು ಪಡೆದಿದ್ದ ಅಪ್ಪಣೆ ಪತ್ರವನ್ನು ಹರಿದು ಹಾಕಿದನಲ್ಲದೆ, ಪಿತ್ರಾರ್ಜಿತ ಆಸ್ತಿ ಯನ್ನು ತ್ಯಜಿಸಿ, ತನ್ನ ಜೀವನವನ್ನು ಅನಾಥರ ಉದ್ಧಾರಕ್ಕಾಗಿ ಮೀಸಲಾಗಿಡುವುದಾ ನಿರ್ಧರಿಸಿದನು.

ಈ ಕೆಲಸದ ಬಗ್ಗೆ ಯೋಚಿಸುತ್ತ ಹೊರಟಾಗ ಅವನಿಗೆ ಅಕಸ್ಮಾತ್ತಾಗಿ ಒಬ್ಬ ಕುಷ್ಟರೋಗಿಯು ಭೇಟಿಯಾಯಿತು. ಅಂಜಿಕೆ ಹಾಗೂ ಹೇಸಿಕೆಯಿಂದ ಆಮಟೆ ರೋಗಿಯ ಮೈಮೇಲೆ ಹೊದಿಕೆಯೊಂದನ್ನು ಸುತ್ತಿದನು. ಕಲ್ಕತ್ತಾದ "ಉಷ್ಣವಲಯ ಔಷಧಶಾಲೆ"ಯಲ್ಲಿ ಆಮಟೆ ಈ ರೋಗದ ಬಗ್ಗೆ ಅಭ್ಯಸಿಸಿದನು. ಗ್ರಾಮಗರಲ್ಲಿ ಕ

ಕುಟುಂಬ, ೬ ಕುಷ್ಠರೋಗಿಗಳು ಹಾಗೂ ಒಂದು ಕುಂಟು ಆಕಳ ಜೊತೆಗೆ, ಚಂದ್ರಾಪುರ ಜಿಲ್ಲೆಯಲ್ಲಿನ—ಕಲ್ಲು ಗುಂಡುಗಳಿಂದ ಕೂಡಿದ, ಹಾಳು ಬಿದ್ದ—೨೦ ಹೆಕ್ಟೇರ್ ಜಮೀನಿಗೆ ಬಂದು "ಆನಂದ ವನ" ಎಂಬ ಆಶ್ರಮ ಸ್ಥಾಪಿಸಿದನು.

ಇಂದು ಆನಂದವನದಲ್ಲಿ ಆಮಟೆ ಮತ್ತು ವೈದ್ಯನಾಗಿರುವ ಆತನ ಹಿರಿಯ ಮಗ ೧೯೦ ಹೆಕ್ಟೇರ್ ಸಂಕೀರ್ಣವೊಂದರಲ್ಲಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದಾರೆ. ಇಲ್ಲಿ ೩೦೦ ವಿದ್ಯಾರ್ಥಿಗಳ ಒಂದು ಕೃಷಿ ಮಹಾವಿದ್ಯಾಲಯ, ೧೫೦೦ ವಿದ್ಯಾರ್ಥಿಗಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಕುರುಡ, ಕಿವುಡ ಹಾಗೂ ಅಂಗವಿಕಲರಿಗಾಗಿ ಒಂದು ಶಾಲೆ, ಒಂದು ಅನಾಥಾಶ್ರಮ; ಒಂದು ವೃದ್ಧಾಶ್ರಮ, ಒಂದು ಆಸ್ಪತ್ರೆ, ೨ ಮಾದರಿ ಜೀವ ಅನಿಲ (Bio-gas plants) ಪ್ಲ್ಯಾಂಟಗಳು, ಒಂದು ಬ್ಯಾಂಕು, ಒಂದು ಅಂಚೆ ಕಚೇರಿ; ೧೬ ಮುಖ್ಯ ಉದ್ಯೋಗಗಳನ್ನು ಪ್ರದರ್ಶಿಸುವ ಅಂಗಡಿಗಳು ಮತ್ತು ಒಂದು ಫಾರ್ಮ ಇವೆ.

ಆನಂದ ವನದಲ್ಲಿ ಉತ್ತಮ ಗುಣಮಟ್ಟದ ಕೈ-ಮಗ್ಗ ಹಾಗೂ ಗಿರಣಿ ಬಟ್ಟೆಯನ್ನು ಉತ್ಪಾದಿಸಲಾಗುತ್ತದೆ. ಕೆತ್ತನೆಯ ಕೆಲಸದ ಸಾಮಾನುಗಳು, ಬಹುಮಾನ ಪಡೆಯುಬಲ್ಲ (ಒಳ್ಳೆಯ ತಳಿ) ದನಗಳು ಮತ್ತು ಹೆಚ್ಚುವರಿ ಬೆಳೆ ಕೊಡಬಲ್ಲ ಬೀಜಗಳು ಹಾಗೂ ಉತ್ತಮ ಆಹಾರ ಧಾನ್ಯಗಳು ಆನಂದವನದ ಕೊಡುಗೆಯಾಗಿವೆ. ೧೦,೦೦೦ಕ್ಕೂ ಹೆಚ್ಚು ಕುಷ್ಟ ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುವುದರ ಜೊತೆಗೆ, ದೈಹಿಕವಾಗಿ ತರಬೇತು ಪಡೆದಿದ್ದಾರೆ. ಸಾಮಾಜಿಕವಾಗಿ ಬಹಳ ತೊಂದರೆಗೀಡಾದ ಸಾವಿರಾರು ಜನರಿಗೆ ಇಲ್ಲಿ ತರಬೇತಿ ನೀಡಲಾಗಿದೆ.

ಇದಲ್ಲದೆ ೧೯೫೭ ರಲ್ಲಿ ಹಾಗೂ ೧೯೬೭ ರಲ್ಲಿ ಆಮಟೆ ಎರಡು ಗ್ರಾಮೀಣ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿದನು. ಹಿಂದೆ ಪ್ರತ್ಯೇಕಿಸಲಾದ ಜನಾಂಗದವರಿಗಾಗಿ ಕೆಲವೊಂದು ಯೋಜನೆಗಳನ್ನು ಹಾಕಿ ಕೊಟ್ಟು ಅವರು ಆಧುನಿಕ ನಾಗರಿಕತೆಗೆ ಹೊಂದಿಕೊಳ್ಳುವಲ್ಲಿ ಆಮಟೆ ಸಹಾಯ ಮಾಡಿದ್ದಾನೆ. ಎರಡು ವರ್ಷಗಳ ಹಿಂದೆ ರಾಷ್ಟ್ರೀಯ ಭಾವೈಕ್ಯವನ್ನು ಉತ್ತೇಜಿಸಲು, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ "ಭಾರತ ಜೊಡೊ" ಸೈಕಲ್ ಓಟದ ಮುಂದಾಳತ್ವ ವಹಿಸಿದನು. ನಂತರ ೧೯೮೬ ರಲ್ಲಿ ಶಾಂತಿ ಮಂಡಳಿಗಳನ್ನು ಸಂಘಟಿಸಿ ಪಂಜಾಬಿಗೆ ಭೇಟಿ ನೀಡುವಂತೆ ಮಾಡಿದನು. ಭಯೋತ್ಪಾದಕರ ಅಥವಾ ಪೋಲಿಸರ ಗುಂಡಿಗೆ ಬಲಿಯಾಗಿ ಸತ್ತವರ ಬಂಧುಗಳನ್ನು ಭೇಟಿಯಾಗಿ ಅವರನ್ನು ಸಂತೈಸಿದ್ದಾನೆ. ಅವನ ಈ ಸೇವಾ ಕಾರ್ಯಕ್ಕೆ ಮನ್ನಣೆ ಯೆನ್ನುವಂತೆ ಅನೇಕ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ರಾಮನ್ ಮೆಗಸೆಸೆ ಪ್ರಶಸ್ತಿ, ಪದ್ಮವಿಭೂಷಣ ಮತ್ತು (ಅಂಗವಿಕಲರಿಗೆ ಸಹಾಯ ಮಾಡಿದ್ದಕ್ಕೆ ದೊರೆತ) ರಾಷ್ಟ್ರೀಯ ಪ್ರಶಸ್ತಿಗಳು ಮುಖ್ಯವಾದವು.

ಆಮಟೆನಿಂದ ಸಹಾಯ ಪಡೆದ ಜನಸಮೂಹ ಅವನನ್ನು ಬಾಬಾ ಆಮಟೆ ಯೆಂದು ಅಕ್ಕರೆಯಿಂದ ಕರೆಯುತ್ತಾರೆ. ಇಷ್ಟೆಲ್ಲ ಸೇವೆ ಮಾಡುವ ಆಮಟೆ ಸ್ವತಃ ಹೆಳವನಾಗಿದ್ದಾನೆ. ಅವನು ಬೆನ್ನು ಮೂಳೆಯ ರೋಗದಿಂದ ಬಳಲುತ್ತಿದ್ದಾನೆ. ಅವನು ಓಡಾಡಬಲ್ಲವನಾಗಿದ್ದರೂ, ಅವನಿಗೆ ನೆಟ್ಟಗೆ ಕೂಡಲು ಬರುವದಿಲ್ಲ. ಪ್ರಯಾಣ

ಮಾಡುವಾಗಲೆಲ್ಲ ಒರಗಿಯೇ ಇರಬೇಕಾಗುತ್ತದೆ. ಆದರೂ ಹೊಸ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯ ರೂಪಕ್ಕೆ ತರುವದನ್ನು ಮಾತ್ರ ಅವನು ಬಿಟ್ಟಿಲ್ಲ. ಇದೆಲ್ಲಕ್ಕಿಂತ ಮಿಗಿಲಾಗಿ ಮಾನವನ ಅತ್ಯಂತ ಭಯಂಕರ ದೋಷವಾದ "ಮಾನಸಿಕ ಕುಷ್ಟರೋಗ" (mental leprosy) ವನ್ನು ನಿರ್ನಾಮ ಮಾಡಬೇಕೆಂಬುದೇ ಅವನ ದೃಢ ಸಂಕಲ್ಪ.

(ಫಿಲಿಪೈನ್ಸ್ ಡೇಲಿ ಎಕ್ಸ್‌ಪ್ರೆಸ್)

* * *

ಧನಸುಖಭಾಯಿದವೆ : ಅವನು ಸುಮಾರು ೨,೦೦೦ದಷ್ಟು ದೈತ್ಯ ಸಾಹಸದ ಪ್ರದರ್ಶನಗಳನ್ನು ಭಾರತ ಮತ್ತು ನೇಪಾಳದಲ್ಲೆಲ್ಲಾ ಮಾಡಿದ್ದಾನೆ. ಎತ್ತರದ ಕಟ್ಟಡಗಳ ಮಧ್ಯ ಕಟ್ಟಿದ ಹಗ್ಗಗಳ ಮೇಲೆ ೯೬ ತಾಸುಗಳವರೆಗೆ ಸೈಕಲ್ ಮೇಲೆ ಕುಳಿತು ಡೊಂಬರಾಟ ಪ್ರದರ್ಶಿಸಿ ಪ್ರಸಿದ್ಧನಾಗಿದ್ದಾನೆ. ಉರಿಯುವ ಟೈರುಗಳ ಮೂಲಕ ಸೈಕಲ್ ಹೊಡೆದುಕೊಂಡು ಹೋಗುವದು, ಸೈಕಲ್ ಮೇಲೆ ಕುಳಿತುಕೊಂಡೇ ಆಯ ತಪ್ಪದಂತೆ ಮಾಡಿ, ನೆಲದ ಮೇಲಿನ ರೂಪಾಯಿ ನೋಟನ್ನು ತನ್ನ ಕಣ್ಣಿನ ರೆಪ್ಪೆಗಳಿಂದ ತೆಗೆದುಕೊಳ್ಳುವದು ಅವನಿಗೆ ಸಾಮಾನ್ಯವಾಗಿದೆ. ಇದೆಲ್ಲಕ್ಕಿಂತಲೂ ಅಸಾಧಾರಣ ಅಂಶವೆಂದರೆ ೫೫ ವರ್ಷದ ಈ ಸೈಕಲ್ ಸವಾರ, ಧನಸುಖಭಾಯಿದವೆ ತನ್ನ ಪ್ರದರ್ಶನಗಳಿಂದ ಬಂದ ಹಣವನ್ನೆಲ್ಲಾ ಕುಷ್ಟ ರೋಗಿಗಳಿಗೆ ದಾನ ಮಾಡುತ್ತಾನೆ.

ದವೆ ತನ್ನ ಈ ಅದ್ಭುತ ಸೈಕಲ್ ಸವಾರಿ ಜೀವನ ಪ್ರಾರಂಭಿಸಿದ್ದು ೩ ದಶಕಗಳ ಹಿಂದೆ. ಅಹ್ಮದಾಬಾದಿನ ಬಟ್ಟೆಗಿರಣಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ದವೆ ಒಂದು ಅಪಘಾತಕ್ಕೀಡಾಗಿ ಮೂರು ತಿಂಗಳವರೆಗೆ ಆಸ್ಪತ್ರೆಯಲ್ಲಿರಬೇಕಾಯಿತು. ಬಹಳ ನಿರುತ್ಸಾಹಿಯಾಗಿದ್ದ ದವೆಗೆ ಆತ್ಮಹತ್ಯೆಯ ವಿಚಾರವೂ ಬಂತು. ಆದರೂ ತನ್ನನ್ನು ನಿಯಂತ್ರಿಸಿಕೊಂಡನಲ್ಲದೆ ಏನಾದರೂ ಉಪಯುಕ್ತ ಕೆಲಸ ಮಾಡಬೇಕೆಂದು ನಿರ್ಧರಿಸಿದನು. ತನ್ನ ನೆಚ್ಚಿನ ಹವ್ಯಾಸವಾಗಿದ್ದ ಸೈಕಲ್ ಸವಾರಿಯ ಮೂಲಕವೇ ಜೀವನೋಪಾಯ ಮಾಡಬೇಕೆಂದು ನಿರ್ಧರಿಸಿದನು. ತನ್ನ ಕೆಲಸಕ್ಕೆ ರಾಜಿನಾಮೆ ನೀಡಿ, ಸೈಕಲ್ ಮೇಲೆ ಡೊಂಬರಾಟ ಮಾಡುವದನ್ನು ಅಭ್ಯಸಿಸಿದನಲ್ಲದೆ ತಾಳ್ಮೆಯಿಂದ ಬಹಳ ಸಮಯದವರೆಗೆ ಸೈಕಲ್ ನಡೆಸುವದನ್ನೂ ರೂಢಿಮಾಡಿಕೊಂಡನು. ಕೆಲವೇ ದಿನಗಳಲ್ಲಿ ಅವನು ಸಾರ್ವಜನಿಕ ಪ್ರದರ್ಶನ ನೀಡಹತ್ತಿದನು. ಪ್ರತಿ ಪ್ರದರ್ಶನಕ್ಕೂ ಅವನಿಗೆ ೧೫ ರೂಪಾಯಿ ದೊರೆಯ ಹತ್ತಿತು. ಈ ಬಗ್ಗೆ ಗುಜರಾತಿ ವಾರ್ತಾ ಪತ್ರಿಕೆಯಲ್ಲಿ ವಿಶೇಷ ಲೇಖನ ಬಂದಾಗ, ಆಹ್ವಾನಗಳು ಬರಹತ್ತಿದವು.

ಆನಂತರದ ವರ್ಷಗಳಲ್ಲಿ, ದವೆ ಇಂಥ ಪ್ರದರ್ಶನಗಳಿಂದ ಗಳಿಸಲಾದ ಹಣವನ್ನು ಕೆಲವೊಮ್ಮೆ ಉಪಯುಕ್ತ ಕಾರ್ಯಗಳಿಗಾಗಿ ದಾನವಾಗಿ ಕೊಟ್ಟಿದ್ದುಂಟು. ನಂತರ ೧೯೬೫ರಲ್ಲಿ ಕೇವಲ ಕುಷ್ಟ ರೋಗಿಗಳ ಸಹಾಯಾರ್ಥವಾಗಿ ತಾನು ಪ್ರದರ್ಶನ ನೀಡುವದಾಗಿ ನಿರ್ಧರಿಸಿದನು. ಇತ್ತೀಚೆಗೆ ರಾಜಕೋಟ್ ಮತ್ತು ಅಹ್ಮದಾಬಾದಿನಲ್ಲಿ

ಎರಡು ಪ್ರದರ್ಶನಗಳಿಂದ ಬಂದ ರೂ. ೧.೬೫ ಲಕ್ಷದಷ್ಟು ಹಣವನ್ನು ಅಹ್ಮದಾಬಾದ್ ಮತ್ತು ಬರೋಡಾದ ಕುಷ್ಟರೋಗ ಕೇಂದ್ರಗಳಿಗೆ ದಾನವಾಗಿ ಕೊಟ್ಟನು.

ದವೆ ಈಗ ಹೊಸ ಸಾಹಸವೊಂದಕ್ಕೆ ಕೈಹಾಕಲಿದ್ದಾನೆ. ಬೊಂಬಾಯಿಯ ಎರಡು ಗಗನ ಚುಂಬಿ ಕಟ್ಟಡಗಳ ಮಧ್ಯ ಹಗ್ಗ ಕಟ್ಟಿ ಆದರ ಮೇಲೆ ೧೨೦ ಗಂಟೆಗಳ ನಿರಂತರ ಸೈಕಲ್ ಡೊಂಬರಾಟ ನಡೆಸುವದು. ಅದರಂತೆ ಈಫೆಲ್ ಟವರ್ ಮೇಲೆ ಮತ್ತು ಎಂಪೈರ್ ಎಸ್ಟೇಟ್ ಕಟ್ಟಡದ ಮೇಲೂ ಡೊಂಬರಾಟ ನಡೆಸಬೇಕೆಂಬ ಛಲ ಈ ಸೈಕಲ್ ಸವಾರನಿಗೆ.

(ಗೌತಮುಮೆಹರಾ, ಟೈಮ್ಸ್ ಆಫ್ ಇಂಡಿಯಾ)

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆದಕ್ಕೆ ದುಡಿಯುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ಸತ್ಯ ಒಂದು ದೊಡ್ಡ ಮರ ಇದ್ದಂತೆ. ಅದರ ಸ್ನೇಹ ಮಾಡಿದಷ್ಟು ಫಲಗಳು ಹೆಚ್ಚುತ್ತವೆ.

ಗಾಂಧೀಜಿ

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿಶ್ರ

ಅನು: ಡಿ. ಎನ್. ಶ್ರೀನಾಥ್

ಈ ಕೃತಿಯ ಕುರಿತು

'ಪ್ರೇಮದಲ್ಲಿ ಬಲವಿದೆಯೋ ಸೇಡಿನಲ್ಲಿ ಬಲವಿದೆಯೋ' ಎನ್ನುವುದನ್ನು ನಿರ್ಧರಿಸುವುದೇ ಕಷ್ಟವಾಗುವ ಅತ್ಯಂತ ರೋಚಕ ಬಂಗಾಳಿ ಮಿನಿ ಕಾದಂಬರಿಯ ಮೂಲ ಲೇಖಕರು ಶ್ರೀ ವಿಮಲ್ ಮಿಶ್ರ, ಇದನ್ನು ಕನ್ನಡಕ್ಕೆ ಅನುವಾದಿಸಿದವರು ಶ್ರೀ ಡಿ. ಎನ್. ಶ್ರೀನಾಥ್. ಪ್ರಸ್ತುತ ಶ್ರೀ ಶ್ರೀನಾಥ್‌ರು ಶಿವಮೊಗ್ಗದ ಸರ್ಕಾರಿ ಮಹಿಳಾ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಅನುವಾದಿತ ಈ 'ಎರಡು ಹೆಣ್ಣು ಒಂದು ಗಂಡು' ಕೃತಿಯನ್ನು ಪುಸ್ತಕ ಪ್ರಪಂಚದಲ್ಲಿ ಧಾರವಾಹಿಯಾಗಿ ಪ್ರಕಟಿಸುತ್ತಿದ್ದೇವೆ.

ಸಂಪಾದಕ

ನಾನೀಗ ಯಾರ ಕಥೆಯನ್ನು ಹೇಳಲು ಕೂತಿದ್ದೇನೆ?

ಅಟಲ್ ದಾ ಅವರ ಕಥೆಯೇ? ಇಂದು ಲೇಖಾಳ ಕಥೆಯೇ? ಅಥವಾ ಕುಂತೀದೇವಿಯ ಕಥೆಯೇ? ತಪ್ಪು ಎಲ್ಲರಿಂದಾಗುತ್ತದೆ. ಆದರೆ ತಮ್ಮ ತಪ್ಪಿಗೆ ಇಷ್ಟು ದೊಡ್ಡ ಬೆಲೆಯನ್ನು ಅಟಲ್ ದಾ ಅವರಂತೆ ಜನರು ತೆತ್ತುವರೆ? ಅಟಲ್ ದಾ ಅವರಿಗೆ ಯಾವುದರ ಕೊರತೆ ಯಿತ್ತು? ವಿದ್ಯೆಯಿತ್ತು, ಆರೋಗ್ಯವಿತ್ತು. ಜನ ಸಾಮಾನ್ಯರ ಬಳಿ ಏನೆಲ್ಲಾ ಇರಬೇಕಿತ್ತೋ ಅವೆಲ್ಲವೂ ಅಟಲ್ ದಾ ಅವರಿಗಿತ್ತು. ಆದರೂ ಅದ್ಯಾವ ತಪ್ಪಿನಿಂದಾಗಿ ಅವರ ಬದುಕಿನ ಪರಿಣತಿ ಇಷ್ಟು ಕರುಣಾಜನಕವಾಯಿತು? ಮತ್ತೆ ಇಂದುಲೇಖಾದೇವಿ....?

ಕೆಲವರಿಗೆ ಹೆಂಡತಿಯಿರುವುದಿಲ್ಲ; ಕೆಲವರಿಗೆ ಹೆಂಡತಿಯರಿರುತ್ತಾರೆ. ಆದರೆ ಅಟಲ್ ದಾ ಅವರಿಗಿದ್ದಂಥಾ ಹೆಂಡತಿ ಎಷ್ಟು ಜನರಿಗೆ ಸಿಗಬಲ್ಲರು? ಕೆಲವರು ಗಂಡನ ಪ್ರತಿಭೆಯನ್ನು ಗೌರವಿಸಿದರೆ, ಮತ್ತೆ ಕೆಲವರು ಪತಿಯ ಸುಖ–ಗೃಹಸ್ಥಾಶ್ರಮಕ್ಕೆ ಬೆಂಕಿಯಂಥಾಗಿ

ಬಿಡುತ್ತಾರೆ. ಇನ್ನು ಕೆಲವರು ಪತಿಯ ದೋಷ ಮತ್ತು ತಪ್ಪುಗಳನ್ನು ಕ್ಷಮೆಯ ಹಿಂದೆ ಅಡಗಿಸಿಟ್ಟುಕೊಳ್ಳುತ್ತಾರೆ. ಮತ್ತೆ ಕೆಲವರು ಪತಿಯನ್ನು ಅವಹೇಳನದ ದೃಷ್ಟಿಯಿಂದ ಕಂಡು, ನಿಂದಿಸುತ್ತಿರುತ್ತಾರೆ. ಜಗತ್ತಿನಲ್ಲಿ ಗಂಡ–ಹೆಂಡಿರ ಸಂಬಂಧದ ಬಗ್ಗೆ ರಾಶಿಗಟ್ಟಲೆ ಜಟಿಲ ಕಾದಂಬರಿಗಳು ಬರೆಯಲ್ಪಟ್ಟಿವೆ. ಆದರೆ, ಇಂಥಾ ಕಥೆ ಅದೆಷ್ಟು ಕಾದಂಬರಿಗಳಲ್ಲಿ ಸಿಗುವುದು? ಇಂದುಲೇಖಾದೇವಿಯಂಥಾ ಹೆಂಡತಿ ಅದೆಷ್ಟು ಜನರಿಗೆ ಲಭ್ಯ? ಅಲ್ಲದೆ, ಇಂಥಾ ಹೆಂಡತಿಯ ಅವಹೇಳನವನ್ನು ಅದೆಷ್ಟು ಗಂಡಂದಿರು ಮಾಡಬಲ್ಲರು?

ಹೀಗಿರುವಾಗ ನಾನು ಯಾರ ಕಥೆಯನ್ನು ಹೇಳಲು ಬಯಸುತ್ತಿದ್ದೇನೆ—ಆಟಲ್ ದಾ ಅವರ ಕಥೆಯೇ? ಇಂದುಲೇಖಾಳ ಕಥೆಯೇ? ಅಥವಾ ಕುಂತೀದೇವಿಯ ಕಥೆಯೇ? ಎಂದು ಈ ಮೊದಲೇ ಹೇಳಿದ್ದು!

ವಿವಾಹದ ದಿನದಂದು ಘಟಿಸಿದ ಘಟನೆ ನೆನಪಾಗುತ್ತದೆ: ನಾನು ಡೈರಿ ಬರೆಯಲು ಪ್ರಾರಂಭಿಸಿದಾಗ ನನ್ನ ವಯಸ್ಸು ವೃದ್ಧಾವಸ್ಥೆಯನ್ನು ಸಮೀಪಿಸುತ್ತಿತ್ತು. ಆದರೆ, ಅದಕ್ಕೂ ಮೊದಲು? ಅದಕ್ಕೂ ಮೊದಲಿನ ಬದುಕಿನ ಬಗ್ಗೆ ಯೋಚಿಸಿದಾಗ ಅದೆಷ್ಟೋ ಬಾರಿ ವಿಚಿತ್ರ ದಣಿವಿನ ಅನುಭವವಾಗುತ್ತದೆ. ಈಗಂತೂ, ಯಾರನ್ನಾದರೂ ಭೇಟಿ ಯಾದಾಗ ಕಷ್ಟಕ್ಕೆ ಸಿಲುಕಿಕೊಳ್ಳುತ್ತೇನೆ. ಅವರ ಹೆಸರೇನು? ಅವರ ಪರಿಚಯ ಎಂಥಾದ್ದು? ಈ ಮೊದಲು ಅವರನ್ನು ಎಲ್ಲಿ ನೋಡಿದ್ದೆ? ತುಂಬಾ ಪರಿಚಿತ ಮುಖಾ ಕೃತಿಯಂತಿದೆಯಲ್ಲಾ—ಇಷ್ಟೇ; ಮತ್ತೇನೂ ನೆನಪಾಗುತ್ತಿರಲಿಲ್ಲ.

ಆದರೆ ಆ ಘಟನೆ ವಿವಾಹದ ದಿನದ ರಾತ್ರಿಯಂದೇ ಘಟಿಸಿತ್ತು ಎನ್ನುವುದಂತೂ ನೆನಪಿದೆ.

"ನೀವೆಂದಾದರೂ ಬದಾಮುತಲ್ಲೆ–ಮೊಹಲ್ಲಾದಲ್ಲಿದ್ದಿರಾ?" ಎಂದಷ್ಟೇ ಕೇಳಿದ ನನ್ನ ಪ್ರಶ್ನೆಗೆ ಮಹಿಳೆ ತುಂಬಾ ಸಂಕೋಚಗೊಂಡಿದ್ದಳು.

ಬಾಲಕಿಯರ ವಿದ್ಯಾಲಯದಲ್ಲಿ ಶಿಕ್ಷಕಿಯೊಬ್ಬಳ ನೇಮಕಾತಿಗಾಗಿ ಸಂದರ್ಶನ ನಡೆಯುತ್ತಿತ್ತು. ಒಬ್ಬೊಬ್ಬರೇ ಸಂದರ್ಶನ–ಕೊಠಡಿಯೊಳಗೆ ಬರುತ್ತಿದ್ದರು. ಕೆಲವರು ನನ್ನ ಪ್ರಶ್ನೆಗಳಿಗೆ ಒಳ್ಳೆಯ ಉತ್ತರಗಳನ್ನು ಕೊಡುತ್ತಿದ್ದರು. ಸಂದರ್ಶನಾರ್ಥಿಗಳು ಬಿ.ಎ. ಪದವೀಧರರಾಗಿದ್ದರು. ಸಾಕಷ್ಟು ಅರ್ಜಿಗಳೂ ಬಂದಿದ್ದವು. ಬೇರೆ ಪಾಠಶಾಲೆಗಳಲ್ಲಿ ಪಾಠ ಬೋಧಿಸಿದ ಅನುಭವಿಗಳೂ ಇದ್ದರು. ಸಂದರ್ಶನದ ಕೊನೆಯಲ್ಲಿ ಒಬ್ಬರನ್ನು ಚುನಾಯಿಸುವ ಭಾರವೂ ನನ್ನ ಮೇಲಿತ್ತು. ಖಾಯಂ ಕಾರ್ಯದರ್ಶಿಗಳಾದ ಭುವನ್ ಬಾಬು ರಜದ ಮೇಲಿದ್ದರು. ಅವರು ಹೋಗುವಾಗ, 'ವಿವಾಹಿತ ಮಹಿಳೆಗೆ ಪ್ರಿಫರೆನ್ಸ್ ಕೊಡಿ; ಯಾಕೆಂದರೆ ಅವಿವಾಹಿತ ಹೆಣ್ಣು ಮಕ್ಕಳು ಕೆಲಸ ಕಲಿತು ಕಡೆಗೆ ಮದುವೆ ಯಾದ ಮೇಲೆ ಕೆಲಸಕ್ಕೆ ರಾಜೀನಾಮೆ ಕೊಡ್ತಾರೆ' ಎಂದು ಕಿವಿಮಾತು ಹೇಳಿದ್ದರು. ಶಾಲಾ ಸಮಿತಿಯವರ ಅಭಿಪ್ರಾಯವೂ ಇದೇ ಆಗಿತ್ತು. ಭುವನ್‌ಬಾಬು ನನ್ನ ಹಳೆಯ ಸ್ನೇಹಿತರು. ಈ ಮೊಹಲ್ಲಾದಲ್ಲಿ ಹೊಸಮನೆಯಾದ ಮೇಲೆ ನಾನಿಲ್ಲಿಗೇ ಬಂದಿದ್ದೆ. ಸಮಿತಿಯ ಸದಸ್ಯರು ನನಗೆ ಅರ್ಜಿಗಳ ಫೈಲು ಕೊಡುತ್ತಾ, 'ಹದಿನೈದು ಜನ ಅಭ್ಯರ್ಥಿ ಗಳಿದ್ದಾರೆ. ಇವರಲ್ಲಿ ಒಬ್ಬರನ್ನು ಆರಿಸಿ' ಎಂದಿದ್ದರು. ಶಾಲೆಯನ್ನು ಭುವನ್‌ಬಾಬು ರವರೇ ನಡೆಸುತ್ತಿದ್ದರು. ಈ ಶಾಲೆಗಾಗಿ ಬಹಳಷ್ಟು ಹಣವನ್ನು ವೆಚ್ಚಮಾಡುತ್ತಿದ್ದರು.

ಸರಿ! ನಿರ್ದಿಷ್ಟ ದಿನದಂದು ನಾನು ಸಂದರ್ಶನ ತೆಗೆದುಕೊಳ್ಳುತ್ತಿದ್ದೆ. ಶಾಲೆಗೆ ಭುವನ ಬಾಬುರವರ ದಿವಂಗತ ಪತ್ನಿ ಊರ್ವಿಳಾದೇವಿಯವರ ಹೆಸರನ್ನಿಡಲಾಗಿತ್ತು. ಶಿಕ್ಷಕಿಗೆ ಎಪ್ಪತ್ತೈದು ರೂಪಾಯಿಗಳ ಮಾಸಿಕ ವೇತನ. ವರ್ಷಕ್ಕೆ ಮೂರು ರೂಪಾಯಿಗಳ ಇನ್‌ಕ್ರಿಮೆಂಟ್. ಹತ್ತು ವರ್ಷ ಸೇವೆಸಲ್ಲಿಸಿದ ಮೇಲೆ ವೇತನದಲ್ಲಿ ಹೆಚ್ಚಳವಾಗಿ ನೂರಾಐದು ರೂಪಾಯಿಗಳಾಗುತ್ತಿತ್ತು, ಆದರೆ ಫ್ರೀ-ಕ್ವಾರ್ಟರ್ಸ್, ಟಿಫನ್ ಖರ್ಚಿಗಾಗಿ ಪ್ರತ್ಯೇಕ ಹಣ. ದಸರಾ ಸಮಯದಂದು ಐವತ್ತು ರೂಪಾಯಿಗಳನ್ನು ಪೂಜಾ-ಕಾರ್ಯ ಗಳಿಗೆಂದು ಕೊಡಲಾಗುತ್ತಿತ್ತು. ಊರ್ವಿಳಾ ಬಾಲಕಿಯರ ವಿದ್ಯಾಲಯದಲ್ಲಿ ಇಂಥಾ ಅನೇಕ ಸೌಲಭ್ಯಗಳಿದ್ದವು. ಇಷ್ಟಕ್ಕೆಲ್ಲ ಭುವನಬಾಬುಗಳ ಕೃಪೆಯೇ ಕಾರಣ ವಾಗಿತ್ತು. ಸರ್ಕಾರ ಕೊಡುವ ಗ್ರ್ಯಾಂಟಿನ ಬಗ್ಗೆ ಅವರು ಚಿಂತಿಸುತ್ತಿರಲಿಲ್ಲ. ಶಾಲಾ ಖರ್ಚು-ವೆಚ್ಚಗಳಿಗೆ ಹಣದ ಕೊರತೆಯಾದಾಗ ತಮ್ಮ ಕೈಯಿಂದಲೇ ಭರಿಸು ತ್ತಿದ್ದರು.

"ನಿಮ್ಮ ಹೆಸರು?"

"ಶ್ರೀಮತಿ ಇಂದುಲೇಖಾದೇವಿ"

ಇಂದುಲೇಖಾದೇವಿಗೆ ಮಾತ್ರ ಮದುವೆಯಾಗಿತ್ತು. ಅವಳದು ಗಂಭೀರಮುಖ ಮುದ್ರೆ, ನೋಡಿದರೆ ಶ್ರದ್ಧೆ ಮೂಡುತ್ತಿತ್ತು, ಭಯವೂ ಹುಟ್ಟುತ್ತಿತ್ತು. ಊರ್ವಿಳಾ ಬಾಲಿಕಾ ವಿದ್ಯಾಲಯದ ಬಾಲಕಿಯರು ಈ ಮುಖವನ್ನು ಆದರದ ದೃಷ್ಟಿಯಿಂದ ಕಾಣ ಬಹುದು....ಭುವನಬಾಬುಗಳೂ ಹೊರಡುವಾಗ ವಿವಾಹಿತ ಮಹಿಳೆಯನ್ನೇ ಆರಿಸಲು ಹೇಳಿದ್ದರು.

"ನಿಮಗೆ ಮಕ್ಕಳು?"

"ನನಗೆ ಮಕ್ಕಳಿಲ್ಲ"

"ನಿಮ್ಮ ಯಜಮಾನರು ಏನು ಮಾಡ್ತಾರೆ?"

"ನನಗೆ ಗಂಡ ಇಲ್ಲ"

ನಾನು ಗಾಬರಿಯಿಂದ ಅವಳ ಮುಖವನ್ನೇ ಗಮನಿಸಿದೆ. ನನ್ನ ಯೋಚನೆ ತಪ್ಪಾಗಿತ್ತೆ? ಆದರೆ ಅವಳ ಹಣೆಯಲ್ಲಿ ಕುಂಕುಮವಿತ್ತು. ತಲೆಗೆ ಸೆರಗನ್ನೂ ಹೊದ್ದು ಕೊಂಡಿದ್ದಳು. ಅವಳ ಮುಖದಲ್ಲಿ ವಿವಾಹಿತ ಹೆಣ್ಣಿನ ಲಕ್ಷಣಗಳೆಲ್ಲವೂ ಇತ್ತು. ಮೂರ್ಖ ನಂತೆ ಸ್ವಲ್ಪ ಹೊತ್ತು ಅವಳನ್ನೇ ನೋಡಿದೆ. ಕಡೆಗೆ ಸಂಭಾಳಿಸಿಕೊಂಡೆ. ಊರ್ವಿಳಾ ಬಾಲಕಿಯರ ವಿದ್ಯಾಲಯಕ್ಕೆ ಓರ್ವ ಶಿಕ್ಷಕಿಯನ್ನು ಆರಿಸುವ ಭಾರವಷ್ಟೇ ನನ್ನ ಮೇಲಿತ್ತು. ಯಾರ ವಿವಾಹಕ್ಕೂ ವಧುವನ್ನಾರಿಸಲು ನಾನು ಬಂದಿರಲಿಲ್ಲ. ಹೆಚ್ಚು ಉತ್ಸಾಹ ತೋರ್ಪಡಿಸುವುದು ಉಚಿತವಾಗಿರಲಿಲ್ಲ.

ಶಾಲೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನೂ ಕೇಳಬೇಕಾಗಿತ್ತು ಆದರೆ ಎಲ್ಲವೂ ಅಸ್ತವ್ಯಸ್ತವಾಯಿತು. ಸ್ವಲ್ಪ ಹೊತ್ತು ವಿಚಿತ್ರ ಚಿಂತೆಗೊಳಗಾದೆ. ಒಂದು ಚಿಕ್ಕ ವಿಷಯ ದೊಡ್ಡ ಸಮಸ್ಯೆಗೆ ಕಾರಣವಾಗುತ್ತದೆಂದು ಯಾರಿಗೆ ಗೊತ್ತು? ಕಥೆ-ಕಾದಂಬರಿಗಳನ್ನು ಬರೆದು ಅನೇಕ ಜಟಿಲ ಸಮಸ್ಯೆಗಳನ್ನು ನಾನು ಬಗೆಹರಿಸಿದ್ದೇನೆ. ಕಲ್ಪನೆಯಲ್ಲಿ ಜಟಿಲ ಬದುಕಿನ ಅನೇಕ ಗಂಟುಗಳನ್ನು ಬಿಚ್ಚಿದ್ದೇನೆ. ಆದರೆ ಹೀಗಾಗುವುದೆಂಬ ಕಲ್ಪನೆ ಇರಲಿಲ್ಲ.

ಕೋಣೆಯ ಬಾಗಿಲು ಹಾಕಿ ಸೋಫಾದಲ್ಲಿ ಒರಗಿ ಕೂತು ಕೀರ್ತಿ–ಪ್ರಸಿದ್ಧಿಯನ್ನೂ ಪಡೆದಿದ್ದೇನೆ. ಲೋಕದ ಪರಿಜ್ಞಾನ ನನಗೆ ತಿಳಿದಿದೆ, ವಿಶೇಷವಾಗಿ ಹೆಣ್ಣಿನ ಚರಿತ್ರೆಯನ್ನೂ ಚೆನ್ನಾಗಿ ಅರಿತಿರುವೆ ಎಂದುಕೊಂಡಿದ್ದೆ.

ಆದರೆ ಈ ಹೆಣ್ಣಿಗೆ ಹಣೆಯಲ್ಲಿ ಕುಂಕುಮವಿದೆ. ಗಂಡನಿಲ್ಲವೆನ್ನುತ್ತಿದ್ದಾಳೆ. ಇದೇನು ರಹಸ್ಯ? ಗಂಡ, ತನ್ನ ಹೆಂಡತಿಯನ್ನು ತ್ಯಜಿಸಿರಬಹುದೇ?

"ನೀವು ಕೂತ್ಕೊಳ್ಳಿ" ನಾನು ದೃಷ್ಟಿಯನ್ನು ತಗ್ಗಿಸಿದೆ. ಕಥೆ ಬರೆಯುವಾಗ ಕೆಲವು ಅನುಕೂಲಗಳಿವೆ. ಬರೆಯುವಾಗ, ಲೇಖನಿ ತಡೆದು ಯೋಚಿಸಬಹುದು. ತಪ್ಪಾದ ಶಬ್ದಗಳನ್ನು ಹೊಡೆದು ಸರಿಪಡಿಸಬಹುದು. ಅನುಚಿತ ವಾಕ್ಯಗಳನ್ನು ಮತ್ತೆ ಹೊಸ ಶೈಲಿಯಲ್ಲಿ ಬರೆಯಬಹುದು. ಸಮಯಾಭಾವವೂ ಸತಾಯಿಸುವುದಿಲ್ಲ.

"ನಾನೇ ನನ್ನ ಪತಿಯನ್ನು ತ್ಯಜಿಸಿದ್ದೇನೆ!" ಆ ಮಹಿಳೆಯೇ ಹೇಳಿದಳು.

ಪತಿಯನ್ನು ತ್ಯಜಿಸಿದ್ದಾಳೆ! ಎಂಥಾ ವಿಚಿತ್ರ! ಹೆಂಡತಿಯೇ ಎಲ್ಲಿಯಾದರೂ ಗಂಡನನ್ನು ತ್ಯಜಿಸುವಳೇ? ಗಂಡನೇ, ಹೆಂಡತಿಯನ್ನು ತ್ಯಜಿಸುವ ವಿಷಯ ಕೇಳಿದ್ದೆ. ಆದರೆ ಇಂದುಲೇಖಾದೇವಿಯನ್ನು ನೋಡಿದಾಗ ಈ ಮಹಿಳೆಯನ್ನು ನಾನೆಲ್ಲೋ ನೋಡಿರಬೇಕಲ್ಲ ಎನಿಸಿತು! ಮತ್ತೇನೂ ನೆನಪಾಗಲಿಲ್ಲ.

"ಈ ಹಿಂದೆ ನೀವು ಬದಾಮತಲ್ಲೆಯಲ್ಲಿದ್ದಿರಾ?" ಆ ಮಹಿಳೆಯನ್ನೇ ಗಮನಿಸಿದೆ.

ನನ್ನೆಡೆಗೆ ಒಂದು ಬಾರಿ ದೃಷ್ಟಿ ಹರಿಸಿ ಇಂದುಲೇಖಾದೇವಿ ಏನನ್ನೋ ಹೇಳಲು ಬಯಸಿದಳು, ಆದರೆ ಸಂಕೋಚದಿಂದಾಗಿ ಹೇಳದಾದಳು.

"ಬಾಲ್ಯದಲ್ಲಿ ನಾನೂ ಬದಾಮತಲ್ಲೆಯಲ್ಲೇ ವಾಸಿಸುತ್ತಿದ್ದೆ. ಅದು ನನ್ನ ಜನ್ಮಸ್ಥಳ" ಮತ್ತೆ ಆ ಮಹಿಳೆಯೆಡೆಗೆ ನೋಡಿದೆ.

"ಹಾಗಾದ್ರೆ, ನಿಮಗೆ ಆ ಜನರೂ ಗೊತ್ತಿರಬೇಕಲ್ಲ? ನನ್ನ ಪತಿಯ ಹೆಸರು...." ಇಂದುಲೇಖಾದೇವಿ ನನ್ನನ್ನೇ ನೋಡಿದಳು.

ಅವಳಿಗೆ ಮುಂದಕ್ಕೆ ಮಾತನಾಡುವ ಅಗತ್ಯವುಂಟಾಗಲಿಲ್ಲ. ಕ್ಷಣಮಾತ್ರದಲ್ಲಿ ನಾನು, ಸ್ವರ್ಗ ಮತ್ತು ನರಕಲೋಕಗಳನ್ನು ಸುತ್ತಿ ಬಂದೆ. ಅಟಲ್ ದಾ, ಅವರ ತಂದೆ ಮತ್ತು ಅವರ ತಾಯಿಯನ್ನು ಇಂದೂ ನಾನು ಮರೆತಿಲ್ಲ. ಅಟಲ್ ದಾ ಅವರ ತಾಯಿ ಅಂದು ಅದೆಷ್ಟು ರೋದಿಸಿದ್ದರು. ಮೊಹಲ್ಲಾದ ಜನರೆಲ್ಲಾ ಅಂದು ವಿವಾಹ-ಮಂಟಪದ ಬಳಿ ಕಲೆತಿದ್ದರು. ಶಂಖ-ವಾದ್ಯ ಮೊಳಗುತ್ತಿತ್ತು. ಕೆಲವರು ಹೂ-ಹಾರ ಹಿಡಿದು ನಿಂತಿದ್ದರು. ಇನ್ನು ಕೆಲವರು ಪಾನೀಯವನ್ನು ಸೇವಿಸುತ್ತಿದ್ದರು. ಆದರೆ, ಒಮ್ಮೆಲೆ ಜನಸಂದಣಿ ಶಿಥಿಲಗೊಂಡುಬಿಟ್ಟಿತ್ತು.

ಭುವನಬಾಬುರವರು ರಜ ಪೂರೈಸಿಕೊಂಡು ಮರಳಿ ಬಂದಿದ್ದರು.

"ಯಾರನ್ನು ಆರಿಸಿದಿರಿ?" ಭುವನಬಾಬು ನನ್ನ ಬಳಿ ಬಂದು ವಿಚಾರಿಸಿದರು.

ಇನ್ನೂ ತೀರ್ಮಾನ ಮಾಡಿಲ್ಲ" ಎಂದೆ.

"ಇದರಲ್ಲಿ ಯೋಚನೆಮಾಡುವಂಥಾದ್ದೇನಿದೆ? ನಿಮಗೆ ಸರಿಯೆನಿಸಿದವರಿಗೆ ಅಪಾಯಿಂಟ್‌ಮೆಂಟ್–ಲೆಟರ್ ಕೊಟ್ಟುಬಿಡಿ. ಮುಖ ನೋಡಿಯೇ ಗುಣ ತಿಳಿದುಕೊಳ್ಳುವ ಶಕ್ತಿ ನಿಮಗಿರುವುದರಿಂದ ನಿಮಗೇ ನಾನು ಈ ಕೆಲಸ ವಹಿಸಿದ್ದು."

“ಕ್ಷಮಿಸಿ ಭುವನ್‌ಜಿ. ನಾನು ಸೋತೆ. ನನ್ನ ಅಹಂಕಾರ ಧೂಳೀಪಟವಾಯ್ತು.”

“ಯಾಕೆ? ಏನ್ ಸಮಾಚಾರ?” ಭುಬನ್‌ಬಾಬು ನನ್ನನ್ನೇ ದುರುಗುಟ್ಟಿ ನೋಡಿದರು, “ಯಾಕೆ, ಈ ಸೋಲೋ ವಿಚಾರ ಎಲ್ಲಿಂದ ಬಂತು? ನನಗೆ ನಿಮ್ಮ ಮಾತು ಅರ್ಥವಾಗಲಿಲ್ಲ.”

“ಕಾರಣವಿದೆ ಭುವನ್‌ಜಿ! ಸಾಹಿತಿಗೆ, ಮನುಷ್ಯನನ್ನರಿಯುವುದು ಸುಲಭವೆಂದು ನೀವೆಲ್ಲಾ ತಿಳಿದುಕೊಂಡಿದ್ದೀರಿ. ಆದರೆ ಇದು ತುಂಬಾ ತಪ್ಪು. ನಾವು ಕಲ್ಪನೆ ಕಟ್ಟಿ ಕಥೆ ಬರೆಯುತ್ತೇವೆ....ಈಗ ಅದಿರ್‍ಲಿ, ನಿಮ್ಮ ವಿದ್ಯಾಲಯದ ಶಿಕ್ಷಕಿಯಾಗಲು ನನ್ನ ದೃಷ್ಟಿಯಲ್ಲಿ ಓರ್ವ ಮಹಿಳೆಯಿದ್ದಾಳೆ. ಅವಳಿಗೆ ಬಿ.ಎ. ಆಗಿದೆ. ಮಕ್ಕಳಿಲ್ಲ. ಆದರೆ ಗಂಡನನ್ನು ಬಿಟ್ಟುಬಿಟ್ಟಿದ್ದಾಳೆ—ಇಂಥವಳನ್ನು ನೀವು ಒಪ್ಪಲು ಸಾಧ್ಯವೇ? ಹೇಳಿ!”

“ಗಂಡನನ್ನು ಬಿಟ್ಟಿದ್ದಾಳೆ?” ಭುವನ್ ಬಾಬುಗಳು ವ್ಯಗ್ರರಾದರು. ಅವರು ಅನೇಕ ವರ್ಷಗಳಿಂದ ಶಾಲೆಯನ್ನು ನಡೆಸುತ್ತಿದ್ದರು. ಅವರು ಹಿರಿಯರು, ಬದುಕನ್ನು ಕಂಡವರು.

“ನೀವೂ ಈ ಬಗ್ಗೆ ಯೋಚಿಸಿ, ನಿಮ್ಮ ಸಮಿತಿಯ ಸದಸ್ಯರೊಂದಿಗೂ ಸಮಾಲೋಚಿಸಿ.”

ಭುವನ ಬಾಬುರವರ ತೀರ್ಮಾನವೇ ಅಂತಿಮವೆಂಬುದು ನನಗೆ ಗೊತ್ತಿತ್ತು. ಆದರೂ ಔಪಚಾರಿಕತೆಗಾಗಿ ಸಮಿತಿಯ ಹೆಸರನ್ನು ಹೇಳಿದ್ದೆ.

“ನೀವು ತೀರ್ಮಾನ ಮಾಡಿದಂತೆಯೇ ಆಗಲಿ.”

“ಆದರೆ, ಕಡೆಗೆ ನನ್ನನ್ನು ದೂಷಿಸಬಾರದು.”

“ನೀವು ನಿಶ್ಚಿಂತೆಯಿಂದಿರಿ. ಆದರೆ, ಅವಳು ತನ್ನ ಗಂಡನನ್ನು ಬಿಟ್ಟಿದ್ದೇಕೆ?” ಭುವನ್‌ಬಾಬುಗಳ ಹಣೆಯಲ್ಲಿ ಗೆರೆಗಳು ಮೂಡಿದವು.

“ಖಂಡಿತವಾಗಿಯೂ ಗಂಡನಲ್ಲಿ ಏನೋ ದೋಷವಿರಬೇಕು” ಎಂದೆ.

“ನೀವು ಈ ಬಗ್ಗೆ ವಿಚಾರಿಸಿದಿರಾ?”

“ಇದು ವಿಚಾರಿಸುವಂಥಾ ವಿಷಯವೇ!”

ಆದರೆ ನನಗೆಲ್ಲವೂ ತಿಳಿದಿತ್ತು. ನಾನಾಗ ದಿನಚರಿ ಬರೆಯುತ್ತಿರಲಿಲ್ಲವಾದ್ದರಿಂದ ನಿಶ್ಚಿತ ದಿನವನ್ನು ಹೇಳಲಾರೆ. ಉಳಿದ ವಿಚಾರಗಳು ಮಾತ್ರ ನನಗೆ ನೆನಪಿರದಿರಲು ಸಾಧ್ಯವೇ?

ನೆನಪಾಗುತ್ತಿದೆ....

ಚಳಿಗಾಲದ ರಾತ್ರಿ. ಬಹುಶಃ ಮಾಘಮಾಸವಿರಬೇಕು. ಅಟಲ್ ದಾ ಅವರ ವಿವಾಹದ ಸಿದ್ಧತೆ ನಡೆಯುತ್ತಿತ್ತು. ಅಟಲ್ ಬಿಹಾರಿ ಬಾಸುರವರ ಪರಿಚಯ ಯಾರಿಗೆ ತಾನೇ ಇಲ್ಲ? ಬದಾಮತಲ್ಲಿಯ ಜನ ಅವರೆಡೆಗೆ ಬೆರಳುಮಾಡಿ ತೋರಿಸುತ್ತಾ, “ನೋಡಿ–ನೋಡಿ, ಇವನು ಹುಡುಗ ಅಲ್ಲ, ‘ವಜ್ರ-ವಜ್ರ ಎನ್ನುತ್ತಿದ್ದರು. ಅದೇ ಅಟಲ್ ದಾ ಅವರ ವಿವಾಹದ ರಾತ್ರಿಯಂದು ಆ ಘಟನೆ ಘಟಿಸಿತ್ತು.

ಅಟಲ್ ದಾ ನಮ್ಮ ಕ್ಲಬ್ಬಿನ 'ಹೀರೋ' ಆಗಿದ್ದರು. ಅವರು ಇಡೀ ಮೊಹಲ್ಲಾದ ಆದರ್ಶ ವ್ಯಕ್ತಿಯಾಗಿದ್ದರು. ಅವರ ಕೈಯಲ್ಲಿ ಸದಾ ಇಂಗ್ಲೀಷಿನ ದಪ್ಪ-ದಪ್ಪ ಪುಸ್ತಕಗಳಿರುತ್ತಿದ್ದವು. ಆಗ ನನಗೆ ಆ ಪುಸ್ತಕಗಳ ಹೆಸರೂ ಅರ್ಥವಾಗುತ್ತಿರಲಿಲ್ಲ. ಅಟಲ್ ದಾ ನಾವು ಆಡುತ್ತಿದ್ದ ಬಯಲಿಗೆ ಬಂದು, ಎಲ್ಲರನ್ನೂ ಭೇಟಿಯಾಗಿ ಮತ್ತೆಲ್ಲೋ ಹೋಗಿಬಿಡುತ್ತಿದ್ದರು. ಆಗ, ಬದಾಮತಲ್ಲಾ ಇಷ್ಟೊಂದು ಮುಂದು ವರೆದಿರಲಿಲ್ಲ. ಒಂದು ವೇಳೆ ಯಾರಾದರೂ, 'ಅಟಲ್ ದಾ, ನೀವು ಆಟ ಆಡುವು ದಿಲ್ಲವೇ ?' ಎಂದರೆ, 'ಇಲ್ಲಪ್ಪ, ನಾನೀವತ್ತು ಭವಾನೀಪುರಕ್ಕೆ ಹೋಗ್ಬೇಕು' ಎಂದು ಅಟಲ್ ದಾ ಹೇಳುತ್ತಿದ್ದರು.

ಮುಖ್ಯೋಪಾಧ್ಯಾಯರಾದ ಸುರೇಶ್ ಬಾಬುಗಳು ತುಂಬಾ ಕಠಿಣ ಸ್ವಭಾವದವ ರಾಗಿದ್ದರು. ಸದಾ ಖಾದಿಯನ್ನೇ ಧರಿಸುತ್ತಿದ್ದ ಅವರನ್ನು ಕಂಡರೆ ನಮಗೆ ಭಯ ವಾಗುತ್ತಿತ್ತು. ಆದರೆ, ಅಟಲ್ ದಾ ನಿರ್ಭೀತಿಯಿಂದ ಅವರ ಕೋಣೆಗೆ ಹೋಗು ತ್ತಿದ್ದರು. ಕೋಣೆಯ ಹೊರಗೆ ನಿಂತು ಅವರ ಧ್ವನಿಯನ್ನು ಕೇಳುವಷ್ಟೇ ಧೈರ್ಯ ನಮ್ಮಲ್ಲಿತ್ತು. ಅಟಲ್ ದಾ ಅವರ ಮಾತುಗಳು ಗಂಭೀರವಾಗಿದ್ದು, ಮೃದು ವಾಗಿರುತ್ತಿದ್ದವು. ಅಟಲ್ ದಾ, ಅದ್ಯಾವ ಕೆಲಸಕ್ಕಾಗಿ ಮುಖ್ಯೋಪಾಧ್ಯಾಯರ ಕೋಣೆಗೆ ಹೋಗುತ್ತಿದ್ದರೋ, ನಮಗಂತೂ ತಿಳಿದಿರಲಿಲ್ಲ.

ಬದಾಮತಲ್ಲೆ ಮೊಹಲ್ಲಾದಲ್ಲಿ ಅಟಲ್ ದಾ ಒಂದು 'ಬಡವರ ಸಂಘ'ವನ್ನೂ ತೆರೆದಿದ್ದರು. ಅವರ ಸೂಚನೆ ಮೇರೆಗೆ ನಾವೆಲ್ಲಾ ಮನೆ-ಮನೆಗೆ ಹೋಗಿ ಅಕ್ಕಿ-ಹಿಟ್ಟು, ದಿನಸಿ ಇತ್ಯಾದಿಗಳನ್ನು ಯಾಚಿಸಿ ತಂದು, ಬಡವರ-ಸಂಘದ ಕಚೇರಿಯಲ್ಲಿ ಜಮಾ ಮಾಡುತ್ತಿದ್ದೆವು. ಅಟಲ್ ದಾ ನಮ್ಮೊಂದಿಗೆ ರಣಬಿಸಿಲಲ್ಲಿ, ಧಾರಾಕಾರ ಮಳೆಯಲ್ಲಿ ಅಕ್ಕಿ ಮೂಟೆ ಹೊತ್ತು ತರುತ್ತಿದ್ದರು. ಸಂಗ್ರಹಿಸಲಾದ ವಸ್ತುಗಳನ್ನೆಲ್ಲಾ ಬದಾಮತಲ್ಲೆಯ ಬಡವರಿಗೆ ಹಂಚಲಾಗುತ್ತಿತ್ತು. ಸಂಕೋಚಪಡುವವರ ಮನೆಗೆ ಅಟಲ್ ದಾ ಅವರೇ ಖುದ್ದು ಹೋಗಿ, ಯಾರಿಗೂ ತಿಳಿಯದಂತೆ ಸಹಾಯಮಾಡಿ ಬರುತ್ತಿದ್ದರು.

ಆಗತಾನೇ ಬಿ.ಎ. ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿತ್ತು. ಅಟಲ್ ದಾ ಅವರಿಗೆ ಸ್ಕಾಲರ್‌ಶಿಪ್ ಸಿಕ್ಕಿತ್ತು. ನಾವೆಲ್ಲಾ ಅವರ ಮನೆಗೆ ಧನ್ಯವಾದ ಹೇಳಲು ಹೋದೆವು. ಆದರೆ ಅಟಲ್ ದಾ ಮನೆಯಲ್ಲಿರಲಿಲ್ಲ.

"ಅವನು ನಿನ್ನೆ ರಾತ್ರಿಯಿಂದ ಮನೇಗೆ ಬಂದಿಲ್ಲ." ಅಟಲ್ ದಾ ಅವರ ತಂದೆ ಆಶುಬಾಬುಗಳು ತುಂಬಾ ವ್ಯಗ್ರರಾದವರಂತೆ ಕಂಡರು.

ಆಶುಬಾಬುಗಳ ಮಾತಿನಿಂದ ನಮಗೆಲ್ಲಾ ಆಶ್ಚರ್ಯವಾಯಿತು. ಅಟಲ್ ದಾ ಇಡೀ ರಾತ್ರಿ ಎಲ್ಲಿದ್ದರು ? ಅವರು ಹೀಗೆಯೇ ನಿತ್ಯವೂ ರಾತ್ರಿಯನ್ನು ಮನೆಯಿಂದ ಹೊರಗೇ ಕಳೆಯುತ್ತಿದ್ದರೇ ?"....

ಮಾರನೆಯ ದಿನ ಅಟಲ್ ದಾ ಕ್ಲಬ್‌ಗೆ ಬಂದರು. ಅವರ ಮುಖ ಕಳೆ ಗುಂದಿತ್ತು ; ತಲೆಕೂದಲು ಅಸ್ತವ್ಯಸ್ತವಾಗಿತ್ತು. ಆದರೆ ಅಟಲ್ ದಾ ಆಟವಾಡುವ ಕಾತರಿ ತೋರಿದರು. ನಾವು ಅವರನ್ನು ಸುತ್ತುವರಿದೆವು. ಅಟಲ್ ದಾ ಅವರಿಗೆ

ಸ್ಕಾಲರ್‌ಶಿಪ್ ದೊರೆತದ್ದು ಸಾಮಾನ್ಯವಿಷಯವಾಗಿರಲಿಲ್ಲ. ಬದಾಮತಲ್ಲೆಯ ಚರಿತ್ರೆಯಲ್ಲೇ ಇಂಥಾ ಘಟನೆ ಈ ಮೊದಲು ಘಟಿಸಿರಲಿಲ್ಲ. ನಾನು ಅವರನ್ನೇ ಎವೆಯಿಕ್ಕದೆ ನೋಡುತ್ತಿದ್ದೆ.

"ಯಾಕೋ, ಹೀಗೆ ನೋಡ್ತಿದ್ದೀಯಾ?" ಅಟಲ್ ದಾ ನನ್ನ ಭುಜ ಅಲುಗಾಡಿಸಿದರು.

ಅಟಲ್ ದಾ, ನಿನ್ನೆ ನೀನು ಮನೆಗೆ ಬಂದಿರಲಿಲ್ಲವಲ್ಲ."

"ಹೌದು. ತುಂಬಾ ತಡವಾಯ್ತು. ಮನೆಗೆ ಬರೋದಕ್ಕೆ ಆಗ್ಲಿಲ್ಲ."

"ರಾತ್ರಿ ನೀನೆಲ್ಲಿದ್ದೆ?"

"ಭವಾನೀಪುರದಲ್ಲಿ."

ಅವರ ಈ ಸಂಕ್ಷಿಪ್ತ ಉತ್ತರದಿಂದ ನನ್ನ ಕುತೂಹಲ ಶಾಂತಗೊಳ್ಳಲಿಲ್ಲ. ಆದರೆ, ನೀನೇಕೆ ಭವಾನೀಪುರಕ್ಕೆ ಹೋಗುತ್ತಿದ್ದೆ? ಎಂದು ಕೇಳುವ ಧೈರ್ಯವಾಗಲಿಲ್ಲ. ಭವಾನೀಪುರ, ಕಲ್ಕತ್ತಾದ ಯಾವ ಭಾಗದಲ್ಲಿದೆ? ಅಲ್ಲಿ ಅಟಲ್ ದಾ ಅವರಿಗೇನು ಕೆಲಸ? ರಾತ್ರಿಯಾದರೂ ಅವರೇಕೆ ಮರಳಿ ಬರುವುದಿಲ್ಲ?—ಈ ಪ್ರಶ್ನೆಗಳು ನನ್ನನ್ನು ಕಾಡಿಸುತ್ತಿದ್ದವು. ಆದರೆ ಅಟಲ್ ದಾ ಅವರು ಎಷ್ಟು ಆದರ್ಶದ ವ್ಯಕ್ತಿಗಳಾಗಿದ್ದರೆಂದರೆ, ಅವರ ಬಗ್ಗೆ ಯಾವುದೇ ಸಂದೇಹ ತಾಳುವುದು ದುಷ್ಕರವಾಗುತ್ತಿತ್ತು. ಅಟಲ್ ದಾ ಅವರು ಎಂದೂ ತಪ್ಪುಹಾದಿ ಹಿಡಿಯುವವರಲ್ಲವೆಂಬ ನಂಬಿಕೆ ನಮಗಿತ್ತು.

ಅಟಲ್ ದಾ, ನನಗಿಂತ ಒಂದೆರಡು ವರ್ಷ ದೊಡ್ಡವರಾಗಿದ್ದರು. ಆದರೆ ಅವರ ವ್ಯಕ್ತಿತ್ವ ಅಸಾಧಾರಣವಾಗಿತ್ತು. ತಮ್ಮ ವ್ಯಕ್ತಿತ್ವದಿಂದ ಎಲ್ಲರನ್ನೂ ಹಿಂದಕ್ಕೆ ಹಾಕಿಬಿಡುತ್ತಿದ್ದರು.

ಕೆಲವು ದಿನಗಳಾದ ಮೇಲೆ ಅಟಲ್ ದಾ ಅವರಿಗೆ ಭವಾನೀಪುರದಲ್ಲಿ ಏನು ಕೆಲಸವಿರುತ್ತಿತ್ತೆಂಬ ವಿಷಯ ನಮಗೆ ತಿಳಿಯಿತು. ಅಲ್ಲೂ ಅವರ ಒಂದು ಕ್ಲಬ್ ಇತ್ತು. ಅಲ್ಲಿ ಅವರು ಬಡ-ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. ಒಂದು ಸಂಜೆ ಶಾಲೆಯನ್ನೂ ತೆರೆದಿದ್ದರು. ವಾಂತಿ-ಭೇದಿ ಹಿಡಿದ ಬಾಲಕನೊಬ್ಬನ ಶುಶ್ರೂಷೆಯನ್ನು ಅಟಲ್ ದಾ ಎರಡು ದಿನ ಮಾಡಿದ್ದರೂ ಆ ಬಾಲಕ ಉಳಿಯಲಿಲ್ಲ. ಈ ವಿಷಯ ತಿಳಿದು ಅಂದು ನಾನು ಮುಗ್ಧ–ನೇತ್ರಗಳಿಂದ ಅವರನ್ನೇ ನೋಡುತ್ತಿದ್ದೆ. ಪ್ರಚಾರ, ಪ್ರಶಂಶೆಯ ಹಸಿವಿಲ್ಲದ ಅವರ ಮೌನ ಸೇವೆ....ನನ್ನ ಹಾಗೆಯೇ ಉಳಿದವರೂ ಅಟಲ್ ದಾ ಅವರನ್ನು ಮುಗ್ಧರಾಗಿ ನೋಡುತ್ತಿದ್ದರು.

(ಮುಂದುವರಿಯುವುದು)

ಸೇವೆಯೇ ಜೀವನ

ಗಾಂಧೀಜಿ

ಪುಸ್ತಕ ವಿಮರ್ಶೆ

ಗೆರೆಗಳು—ಲೇಖಕರು: ಕೆ. ನ. ಶಿವತೀರ್ಥನ್, ಪ್ರಕಟಣೆ: ಪವಿತ್ರ; ೧೯, ೪ನೇ ಮುಖ್ಯ ರಸ್ತೆ, ವಿನಾಯಕನಗರ, ಮೈಸೂರು-೫೭೦೦೧೨; ಪುಟ: xv+೬೪, ಬೆಲೆ: ೨೦ ರೂ.

ಸುದೀರ್ಘವಾದ ಕಾವ್ಯ ಪರಂಪರೆಯನ್ನುಳ್ಳ ಕನ್ನಡ ಕಾವ್ಯ ಕ್ಷೇತ್ರ ಹತ್ತು ಹಲವು ಮಜಲುಗಳಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ. ಕಾವ್ಯವಾಹಿನಿ ಸಾಗಿಬಂದ ದಾರಿಯಲ್ಲೆಲ್ಲ ತನ್ನದೇ ಆದ ಪ್ರಭಾವವನ್ನು ಜನಸಮುದಾಯದ ಮೇಲೆ ಛಾಪಿಸುತ್ತ ಬಂದಿದೆ. ಅತಿಯನ್ನು ಕಂಡಿದೆ. ಮಿತಿಯನ್ನು ಒಳಗೊಂಡಿದೆ. ಆ ದೀರ್ಘ ಪರಂಪರೆಯ ಒಂದು ಭಾಗವಾಗಿಯೇ ಮೂಡಿಬಂದಿರುವ ಕವಿ ಕೆ. ನ. ಶಿವತೀರ್ಥನ್ ಕವನ ಸಂಕಲನ 'ಗೆರೆಗಳು' ಇಂದಿನ ಕಾವ್ಯ ಕ್ಷೇತ್ರದ ಪರಿಚಯ ಮಾಡಿಕೊಡುವ ಒಂದು ಪ್ರಯತ್ನವಾಗಿದೆ ಎಂಬುದನ್ನು ಸಂಕಲನ ಗಮನಿಸಿದಾಗ ತಿಳುವಿಗೆ ಬರದೆ ಇರದು.

'ಬೆಸ್ತ' ಕವನ ಸಂಕಲನದ ಮೂಲಕ ತಮ್ಮ ಕಾವ್ಯಶಕ್ತಿಯನ್ನು ಪ್ರಕಟಪಡಿಸಿದ ಶಿವತೀರ್ಥನ್ 'ಗೆರೆಗಳು' ಸಂಕಲನದಲ್ಲಿ ಮುಂದುವರಿಸಿರುವುದನ್ನು ಕಾಣಬಹುದು. ಉಕ್ಕಿ ಬರುವ ಕಾವ್ಯವನ್ನು ಹೆಕ್ಕೆಕ್ಕಿ ತುಂಬಿಕೊಳ್ಳಬೇಕೆಂಬ ಕವಿಯಾಸೆಯಿಂದ ಹೊರಡುವ ಕವಿ ಪ್ರಾರಂಭದಲ್ಲೇ ತಿಳಿಸುತ್ತಾನೆ.

ಎಲ್ಲಿ ಎಲ್ಲಿ ಶೀಘ್ರಲಿಪಿ ಕನ್ಯೆ
ಕಾವ್ಯ ಉಕ್ಕುಕ್ಕಿ
ಚೆಲ್ಲಿಹೋಗುವ ಮುನ್ನ
ತುಂಬಿಕೊ ದೊನ್ನೆಯಲ್ಲಿ
ಹಡೆ ಭಾಷೆಯಲ್ಲಿ

ಹೀಗೆ ಭಾಷೆಯಲ್ಲಿ ಹಡೆದಂಥ 'ಕಾವ್ಯ ಶಿಶು' ಸಂಕಲನದುದ್ದಕ್ಕೂ ತನ್ನ ಶಿಶುತನವನ್ನು ಬಿಟ್ಟು ಪ್ರಬುದ್ಧತನವನ್ನು ಪಡೆದುಕೊಂಡಿರುವುದನ್ನು ಗಮನಿಸದೆ ಮುಂದೆ ಸಾಗಲು ಸಾಧ್ಯವಿಲ್ಲ.

'ಪ್ಲೇಟೊ ಗೋರಿಯಿಂದ' ಎಂಬ ಕವನದಲ್ಲಿ ಕವಿ ಹೇಳುತ್ತಾನೆ—

ಕವಿಗಳನ್ನ ಒದ್ದಟ್ಟಿ ಹೊರಕೆ
ಕಾವ್ಯದಿಂದ ಏನಾಗುತ್ತೆ ಜಗಕೆ

ಗ್ರೀಕ್ ದಾರ್ಶನಿಕ ಪ್ಲೇಟೊವಿನ 'ಆದರ್ಶ ರಾಜ್ಯದಿಂದ ಸಾಹಿತಿಗಳನ್ನು ಉಚ್ಚಾಟಿಸಿ' ಎಂಬ ಅಭಿಪ್ರಾಯಕ್ಕೆ ಈ ಕವಿಯೂ ಪೂರಕವಾಗಿ ನಿಂತಂತೆ ಕವನ ಗೋಚರಿಸುತ್ತದೆ. ಕವಿ ಮುಂದುವರಿದು ಹೇಳುವ—

ಕಾವ್ಯಕ್ಕಿಂತ ಮಿಗಿಲು ಹನಿಸುರಿವ ಮುಗಿಲು
ಕವಿ ಕಾವ್ಯ ಕಥೆಯಿಂದ
ಬಡಪಾಯಿಯ ವ್ಯಥೆ ಕಳಿಯುತ್ತಾ
ಕೊಚ್ಚೇಲಿ ಮೀನು ಹಿಡ್ದಂಗೆ
ಬರೀದೆ ಬಾಯಿ ಬಡ್ದಂಗೆ
ಆಗೊಲ್ಲ ಬದಲು-ಅದಲು ದಂಗೆ

ಈ ಮಾತುಗಳು ಕಾವ್ಯಕ್ಷೇತ್ರದ ಅನಿವಾರ್ಯತೆಗಳನ್ನೆ ಪ್ರಶ್ನಿಸುತ್ತವೆ. ಹೀಗೆ 'ಕಾವ್ಯದಿಂದ ಏನಾಗುತ್ತೆ ಜಗಕೆ' ಎಂಬ ಪ್ರಶ್ನೆಯ ನಡುವೆಯೇ ತನ್ನ ಕಾವ್ಯವನ್ನು ನಿರ್ಮಿಸಿರುವ ಕವಿ ಇಂದಿನ ವಾಸ್ತವಿಕ ಬದುಕಿನ ಆಗುಹೋಗುಗಳಿಗೆ ಉದ್ದಕ್ಕೂ ಪ್ರತಿಸ್ಪಂದಿಸಿರುವು ದನ್ನು ಸಾಕಷ್ಟು ಗುರುತಿಸಬಹುದು. ಅಲ್ಲದೆ, ಕಾವ್ಯದ ಆವಶ್ಯಕತೆ ಏನೆಂದು ಪ್ರಶ್ನಿಸಿಯೂ ಅದರಿಂದ ತಪ್ಪಿಸಿಕೊಳ್ಳಲಾಗದ ಶಿವತೀರ್ಥನ್ ಕವಿ ಹೃದಯ ಮಾನವನ ಸೃಜನಶೀಲತೆಗೆ ಒಂದು ಉತ್ತಮ ನಿದರ್ಶನವಾಗಿದೆ ಎಂಬುದನ್ನೂ ನಾವು ಮರೆಯ ಲಾಗದು.

ಪ್ರಸ್ತುತ ಕವನ ಸಂಕಲನದಲ್ಲಿ ಕಾವ್ಯವಸ್ತುವಿನ ಹರಹು ಅಷ್ಟಾಗಿ ಕಂಡುಬರ ದಿದ್ದರೂ ಕವಿ ಕಂಡಷ್ಟರಲ್ಲಿ ನಾವು ಕಂಡುಕೊಳ್ಳುವುದೆಷ್ಟು? ಕವಿ ಕಂಡದ್ದು ಕಾವ್ಯ ವೆಷ್ಟಾಗಿ ಮೂಡಿಬಂದಿದೆ? ಅವನು ಪಡೆದದ್ದೆಷ್ಟು? ನಮಗೆ ನೀಡುವುದೆಷ್ಟು? ಈ ಎಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಕವನಗಳನ್ನು ತಿರುವಿಹಾಕಿದಾಗ, ಅಲ್ಲಲ್ಲಿ ಕಾವ್ಯ ಸತ್ವವನ್ನು ಕಾಣದೆ ಇರಲಾರೆವು.

'ಸಂತೆಯೊಳಗಿನ ಸಂತ'ನಾದ ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ಹಿಡಿದಿಟ್ಟಿರುವ ಕವಿ—

ನಿನ್ನ ಅರಸುತ್ತ ಇದ್ದಲ್ಲೆ
ಗಿರಿಗಿರೀಗಿರೀ ಬುಗುರಿಸುತ್ತಿ
ಗಿರ್ಕಿ ಹೊಡೆವವರು
ಸತ್ಯ ಸೌಂದ್ಯರದ ತಿಳಿವು ಎಂದಿಗಯ್ಯಾ!

ಎಂದು ವಿವೇಕಾನಂದರನ್ನು ಕುರಿತು ಹಲಬುತ್ತಾನೆ. ಸತ್ವಶಾಲಿಯಾದ ವಿವೇಕಾನಂ ರಂಥವರ ಬದುಕಿನಿಂದ ಚೈತನ್ಯವನ್ನು ಪಡೆಯಲಾರದ ಭಾರತೀಯ ನಿಸ್ಸತ್ವ ಬದುಕಿಗೆ ಕವಿಮನಸ್ಸು ಮರುಗುತ್ತದೆ. ಭಾರತದ ಇಂದಿನ ಹದಗೆಟ್ಟ ಬದುಕಿ ತಪಿಸುತ್ತದೆ.

ಹಾಡ ಹಾಡಿದ ದತ್ತ
ಪಾಡ ಮುಗಿಸಿ ಹೊರಟನೆತ್ತ
ಎತ್ತ!

ಎಂದು ಕವಿ ದ. ರಾ. ಬೇಂದ್ರೆಯವರ ಸಾವಿಗೆ ವಿಷಾದ ಸೂಚಿಸುವ ಕವಿ ಹಾಗೆಯೇ 'ಸ್ಮಿತಾ ಪಾಟೀಲ್' 'ಪಿ. ಟಿ. ಉಷಾ–ಅಂದು' 'ಪಿ. ಟಿ. ಉಷಾ–ಇಂದು' 'ಬೆತೋವನ್' 'ಪರ್ವಿನ್ ಸುಲ್ತಾನ್' 'ನೆಲ್ಸನ್ ಮಂಡೇಲಾ' ಇವರನ್ನು ಕುರಿತು ಕಾವ್ಯರಚನೆ ಮಾಡಿರುವುದಾದರೂ 'ಕಾವ್ಯಮನನ'ಕ್ಕೆ ಅಲ್ಲಿ, ಅಷ್ಟಾಗಿ ಅವಕಾಶವಿಲ್ಲವೆಂದು ಹೇಳದೆ ಗತ್ಯಂತರವಿಲ್ಲ.

ವ್ಯಕ್ತಿಗಳನ್ನು ಕುರಿತಂಥವುಗಳು ಮಾತ್ರವಲ್ಲದೆ ಇತರ ಕವನಗಳನ್ನು ಸಂಕಲನ ದಲ್ಲಿ ಕಾಣಬಹುದಾದರೂ 'ಪಿಂಡದರ್ಶನ' 'ಸಾಮರಸ್ಯದ ನಾಂದಿ' ಈ ಕವನಗಳು ಕಾವ್ಯವಾಗಿ ಅರಳಲು ಪ್ರಯತ್ನಿಸಿರುವುದು ಗಮನಾರ್ಹವಾದುದು. ನಮ್ಮ ಇಂದಿನ ಅವನತ ಬದುಕಿಗೆ ಕಾರಣವಾಗಿರುವುದನ್ನು ಕುರಿತು ಚಿಂತಿಸುವ ಕವಿ 'ಪಿಂಡದರ್ಶನ'ದಲ್ಲಿ

ಕೂಳಾಯ ನಮಃ
ಮೂಳಾಯ ನಮಃ
ದುರ್ಗತಿಗೆ ನಮೋ
ಶಾಂತಿ ಶಾಂತಿ ಶಾಂತಿಃ

ಎಂಬ ವ್ಯಂಗ್ಯ ನಮಸ್ಕಾರದೊಂದಿಗೆ ವಿಷಾದವನ್ನು ಸೂಚಿಸುತ್ತದೆ. ಇಷ್ಟಾದರು ಬದುಕಿನ ಸಾಮರಸ್ಯಕ್ಕೆ ಹಾರೈಸುವ ಕವಿ ಚೇತನ

ಈ ಭೂಮಿ ನಮ್ಮ ಮನೆ
ಗಾಳಿ ನೀರು ನೆಳಲು ಬೆಳಕು ಆಕಾಶನಮ್ಮದು
ಕಿತ್ತು ಹೊಸಕದಿರು ಚಿತ್ತ ಕುಸುಮವು ಅರಳಲಿ

ಎಂಬ ಆಶಯದೊಂದಿಗೆ ಹೊಸತಿಗೆ ಸದಾ ಆಹ್ವಾನವೀಯುತ್ತದೆ. ಶಿವತೀರ್ಥನ್ ತನದ ಚಾಟುಗಳಲ್ಲಿ, ದ್ವಿರುಕ್ತಿಗಳಲ್ಲಿ ಹೊಸ ಉಕ್ತಿಯೊಂದು ಉದಯಿಸುವುದನ್ನು ಅಲ್ಲಲ್ಲಿ ಕಾಣಬಹುದು. 'ಕುಶಲವ ಕುಶಲವಾ' 'ಮೌನ ಓಲ್ಡ್ ಮಾಂಕ್, ಮಾತು ಥಿಂಕ್ ಟ್ಯಾಂಕ್' 'ಮರದ ನೆರಳಲಿ ನಿಂತೆ, ಮರಕೆ ನೆರಳಿನ ಚಿಂತೆ' 'ಸದಾ ಶುದ್ಧಿ ಬಯಸಿ, ಶುದ್ಧಿಯಾಗದೆ, ಸುದ್ದಿಯಾದ, ಹಿಂಸೆ ದಹಿಸುತಿದೆ ಮನ, ಶಾಂತಿ ಇಲ್ಲದೆ ಎಲ್ಲಿ ಸಮಾಧಾನ' ಇತ್ಯಾದಿ.

ಸಂಕಲನದ ದೀರ್ಘ ಕವನ 'ಗೆಂಡಗಯ್ಯ' ಹೆಚ್ಚಾಗಿ ಚಿಕ್ಕ ಚಿಕ್ಕ ಕವನಗಳನ್ನು ಬರೆಯುವ ಕವಿ ನಿಡಿದಾದ ಕವನ ಬರೆಯಲು ಸಮರ್ಥ ಎಂಬುದನ್ನು ತನ್ನೆಲ್ಲ ಇತಿಮಿತಿ ಗಳೊಡನೆ ಸಾಬೀತುಗೊಳಿಸಿದೆ. ಚಿತ್ತರ ಮೂಲ ಪುರುಷನೆನ್ನಲಾದ 'ಗೆಂಡಗಯ್ಯ' ಜೀವನಕ್ಕೆ ತಹತಹಿಸುವ ಎಲ್ಲ ಮನುಷ್ಯರ ಮೂಲ ಪುರುಷನೂ ಹೌದು.

ತಿಪ್ಪೆ ಕಸ ಕೊಚ್ಚೆನೀರು
ಯೆಕ್ಕಿ ಎರೆಉಳ ಗಾಳಕ್ಕೆ

ಎಸೆದು ಗಾಳ ಬೀಸಿ ಬಲೆ
ಕಾಯ್ತಾ ಕುಂತವ್ನೆ ಸಂತ

ಆ 'ಸಂತ' ಮಹಾಭಾರತದ ವ್ಯಾಸರಾದಿಯಾಗಿ ಇಂದಿನವರೆಗೂ ಹರಿದು ಬಂದಿರುವ ಕಾಯಕದ ಶ್ರಮ, ತಾಳ್ಮೆಯ ಪ್ರತೀಕವಾಗುತ್ತಾನೆ. ಈ ಕವನದ ಭಾಷೆಯೂ ಆಡುಮಾತಿನ ಸೊಗಡಿನಿಂದ, ನಮಗೊಂದು ಪೌರಾಣಿಕ ಸ್ಪರ್ಶವನ್ನು ಕೊಡುತ್ತಾ ಓದುಗರ ಮೇಲೆ ತನ್ನ ಪ್ರಭಾವವನ್ನು ಬೀರಲು ಸಮರ್ಥವಾದದ್ದಾಗಿದೆ. ಕವನ ಕವಿ ಶಿವತೀರ್ಥನ್ ಕಾವ್ಯಶಕ್ತಿಗೆ ಒಂದು ಉತ್ತಮ ನಿದರ್ಶನವೂ ಹೌದು.

ಹೀಗೆ, ಚಿಕ್ಕಪುಟ್ಟ ಕವನಗಳೊಂದಿಗೆ ನಿಡುಗವನಗಳವರೆಗೆ ಹರಿದು ಬಂದಿರುವ ಶಿವತೀರ್ಥನ್ ಕಾವ್ಯ ಪ್ರತಿಭೆ ಕಾವ್ಯ ಜೀವಂತಿಕೆಯ ಪ್ರತೀಕವಾಗಿದೆ. ಆದರೆ, 'ಕಾವ್ಯ ಗೆರೆಗಳು, 'ಕಾವ್ಯಮೂರ್ತಿಗಳಾಗಿ' ರೂಪುಗೊಳ್ಳುವತ್ತ ಕವಿ ಇನ್ನೂ ಸಾಗಬೇಕಿದೆ.

ಹೊರೆಯಾಲ ದೊರೆಸ್ವಾಮಿ

ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳು ಶುದ್ಧವಾಗಿರಬೇಕು.

ಪ್ರಜಾ ಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ತೃತೀಯ ಕಾಂಡ

ಅನುವಾದ
ದೇಜಗೌ

ನಲವತ್ತೆರಡು ಮಂದಿ ಆಳುಗಳು ದೊಡ್ಡ ಪ್ರಮಾಣದಲ್ಲಿಯೇ ಕೊಯ್ಲುಗೆಲಸ ಆಗಗೊಳಿಸಿದ್ದರು. ಹಿಂದಿನ ಕಾಲದಲ್ಲಿ ಮೂವತ್ತುಮಂದಿ ಆಳುಗಳು ಎರಡು ದಿನ ತೆಗೆದುಕೊಳ್ಳುತ್ತಿದ್ದ ಇಡೀ ದೊಡ್ಡ ಹುಲ್ಲೊಡ್ಡಿನ ಕೊಯ್ಲು ಹೆಚ್ಚು ಕಡಮೆ ಒಂದೇ ದಿನದಲ್ಲಿ ಮುಗಿದಿತ್ತು. ಮೂಲೆಮೊಡಕುಗಳಲ್ಲಿದ್ದ ತುಂಡು ಸಾಲುಗಳ ಕೆಲಸಮಾತ್ರ ಉಳಿದಿತ್ತು. ಪಡುವಣ ಬಾನಿನಲ್ಲಿ ಸೂರ್ಯ ಬೇಗಬೇಗ ಉರುಳುತ್ತಿದ್ದುದರಿಂದ, ಅಂದೇ ಆದಷ್ಟು ಕೆಲಸವನ್ನು ಮುಗಿಸಬೇಕೆಂದು ತವಕಿಸುತ್ತಿದ್ದ ಲೆವಿನ್ ತುಂಬ ಮುಜುಗರಕ್ಕೊಳಗಾದನು. ಅವನಿಗೆ ಸ್ವಲ್ಪವೂ ಆಯಾಸವಾಗಿರಲಿಲ್ಲ; ಆದಷ್ಟು ಬೇಗ, ಸಾಧ್ಯವಾದಷ್ಟು ಕೆಲಸ ಮುಗಿಸಬೇಕೆಂಬುದೇ ಅವನ ಇಚ್ಛೆಯಾಗಿತ್ತು.

'ಮಾಷ್ಕನ ತಿಟ್ಟನ್ನು ಸಹ ಇಂದೇ ಕೊಯ್ದು ಮುಗಿಸಬಹುದೆ? ನಿನ್ನ ಅಭಿಪ್ರಾಯವೇನು?' ಎಂದವನು ಮುದುಕನನ್ನು ಪ್ರಶ್ನಿಸಿದನು.

'ಭಗವಂತನ ಇಚ್ಛೆಯಿದ್ದಂತಾಗಲಿ. ಸೂರ್ಯ ಎತ್ತರದಲ್ಲಿಲ್ಲ. ಹುಡುಗರಿಗೆ ವೋಡ್ಕ ಸಿಗುತ್ತದೆಯೆ?'

ವಿಶ್ರಾಂತಿಯ ನಂತರ, ಕೊಯ್ಲುಗಾರರು ಕುಳಿತುಕೊಂಡಿದ್ದಾಗ, ಹೊಗೆ ಕುಡುಕರು ಪಟ್ಟಿಗಳನ್ನೆಳೆಯುತ್ತಿದ್ದಾಗ, 'ಹುಡುಗರೆ, ಇಂದೇ ಮಾಷ್ಕನ ತಿಟ್ಟನ್ನು ಕೊಯ್ದು ಮುಗಿಸಿದ್ದಾದರೆ ದಣಿಗಳು ವೋಡ್ಕ ಒದಗಿಸುವುದಾಗಿ ಹೇಳಿದ್ದಾರೆ' ಎಂದು ಮುದುಕ ಘೋಷಿಸಿದನು.

'ಮುಗಿಸದೆ ಏನು? ಪ್ರೊಖಾರ್, ನೀನು ಮುಂದೆ ನಡಿ. ಅದನ್ನೆಲ್ಲ ಒಂದು ಲಾಜದಲ್ಲಿ ಮುಗಿಸುತ್ತೇವೆ. ನೀನು ಮುಂದೆ ಹೋಗು' ಎಂದು ಹಲವು ಧ್ವನಿಗಳು ಕೂಗಿಕೊಂಡುವು. ಉಳಿದ ರೊಟ್ಟಿಯನ್ನು ಗಬಗಬನೆ ಬಾಯಿಗೆಸೆದುಕೊಂಡು ಕೊಯ್ಲುಗಾರರು ಕೆಲಸಕ್ಕೆ ಸಿದ್ಧರಾದರು.

'ಹುಡುಗರೆ, ನೀವೇನು ಮಾಡಬಲ್ಲಿರೆಂಬುದನ್ನೀಗ ತೋರಿಸಿ' ಎಂದು ಪ್ರೊಖಾರ್ ಕರೆ ನೀಡಿ, ತಾನೂ ಕೈಹಾಕಿದನು.

'ಹ್ಣೂ. ಬೇಗ, ಬೇಗ!' ಎಂದು ಮುದಿಯು ಅವನ ಜಾಡು ಹಿಡಿದು, ಅವನಿಗೆ ಸಮುಗೈಯಾದನು. 'ಜೋಕೆ; ನಿನ್ನನ್ನೀಗ ಹಿಂದೆ ಹಾಕುತ್ತೇನೆ.'

ವೇಗದಲ್ಲಿ ಯಾರು ಯಾರನ್ನು ಮೀರಿಸುತ್ತಾರೆನ್ನುವುದನ್ನು ಅವಲೋಕಿಸುವ ಸಲುವಾಗಿ ಎಳೆಯರು ಮುದುಕರೆಲ್ಲರೂ ಪರಸ್ಪರ ಸ್ಪರ್ಧೆಯಲ್ಲಿ ತೊಡಗಿದರು. ಅವಸರವಸರವಾಗಿ ಕೊಯ್ಯುತ್ತಿದ್ದರೂ ಅವರು ಹುಲ್ಲನ್ನು ಹಾಳುಮಾಡಲಿಲ್ಲ; ಹರಿಗಳನ್ನು ಕ್ರಮಬದ್ಧವಾಗಿ, ನೀಟಾಗಿ ಜೋಡಿಸಿದರು. ಐದು ನಿಮಿಷಗಳಲ್ಲಿ ಉಳಿದಿದ್ದ ಮೂಲೆ ಮೊಡಕುಗಳನ್ನೆಲ್ಲ ಮುಗಿಸಿದರು. ಕೊನೆಯಾಳುಗಳು ತಮ್ಮ ಸಾಲುಗಳನ್ನು ಮುಗಿಸುವ ಹೊತ್ತಿಗೆ, ಮುಂದಾಳುಗಳು ತಮ್ಮ ಕೋಟುಗಳನ್ನು ಹೆಗಲ ಮೇಲೆಸೆದುಕೊಂಡು, ಮಾಷ್ಕನ ತಿಟ್ಟಗೆ ಹೋಗುವ ಸಲುವಾಗಿ ರಸ್ತೆಯನ್ನು ದಾಟುತ್ತಿದ್ದರು.

ಸೂರ್ಯ ಮರಗಳ ಹಿಂದೆ ಮರೆಯಾಗುತ್ತಿದ್ದನು. ಉಜ್ಜುಗಲ್ಲು ಪಟ್ಟಿಗೆಗಳ ರಟರಟ ಶಬ್ದದೊಡನೆ ಆಳುಗಳು ಮಾಷ್ಕನ ತಿಟ್ಟಿನ ಮರಗಳಿಡಿದ ಕವಾರಿಯನ್ನು ಪ್ರವೇಶಿಸಿದರು. ತಗ್ಗು ಪ್ರದೇಶದ ಮಧ್ಯದಲ್ಲಿ ಹುಲ್ಲು ಸೊಂಟದುದ್ದ ಬೆಳೆದಿತ್ತು. ಅದು ಕೋಮಲ

ವಾಗಿತ್ತು, ತುರಾಯಿಯಂತಿತ್ತು, ನುಣುಪಾಗಿತ್ತು; ಕಾಡು ಸಸ್ಯಗಳ ನೀಲಿಹಳದಿ ಹೂವುಗಳು ನಡು ನಡುವೆ ಹೆಣೆದುಕೊಂಡಿದ್ದುವು.

ಸಾಲುಗೊಂಟ ಕೊಯ್ಯುವುದೊ, ಮೂಲೆಗೊಂಟ ಕೊಯ್ಯುವುದೋ ಎನ್ನುವುದರ ಬಗ್ಗೆ ತುಸು ಸಮಾಲೋಚನೆ ನಡಸಿದ ತರುವಾಯ ಎರ್ಮಿಲಿನ್ ಮುಂದಾಳುತನ ವಹಿಸಿಕೊಂಡನು. ಅವನೊಬ್ಬ ಕಪ್ಪು ಕಾಂತಿಯ ದಡೂತಿ ದೇಹದ ಹೆಸರಾಂತ ಕೊಯ್ಲುಗಾರ. ಅವನು ಹಂತಿಯುದ್ದಕ್ಕೂ ನಡೆದು, ಹಿಂದಕ್ಕೆ ಬಂದು, ಕೆಲಸ ಶುರು ಮಾಡಿದನು. ಇತರರು ಅವನನ್ನು ಹಿಂಬಾಲಿಸಿದರು. ದಿಣ್ಣೆಯ ತುದಿಯಿಂದ ಕಮರಿಯ ತಳದವರೆಗೆ, ತದನಂತರ ಎದುರಿನ ಬೋರೆಯಿಂದ ಕಾಡಿನಂಚಿನವರೆಗೆ ಅವರು ಕೊಯ್ಲು ಮುಂದುವರಿಸಿದರು. ಅರಣ್ಯದ ಹಿಂದೆ ಸೂರ್ಯ ಜಾರಿದನು. ಇಬ್ಬನಿ ಬೀಳಲಾರಂಭಿಸಿತು. ಗುಡ್ಡದ ಮೇಲಿದ್ದ ಕೊಯ್ಲುಗಾರರ ಮೇಲೆ ಮಾತ್ರ ಬಿಸಿಲು ಬೀಳುತ್ತಿತ್ತು. ತಳದಲ್ಲಿ, ಮಂಜು ಮೇಲೇರುವಲ್ಲಿದ್ದ ಮತ್ತು ಬೇರೆ ಮಗ್ಗುಲಲ್ಲಿದ್ದ ಆಳುಗಳು ಆಹ್ಲಾದಕರ ಮಂಜುನೆರಳಿನ ಕಡೆಗೆ ಚಲಿಸಿದರು. ಕೆಲಸ ಭಾರಿ ವೇಗವಾಗಿ ಮುಂದುವರಿಯಿತು. ಹುಲ್ಲು ಕತ್ತರಿಸುತ್ತಿದ್ದಂತೆ ರಸವೊಸರುವ ಶಬ್ದವೂ, ಕಟುವಾಸನೆಯೂ ಹೊರಹೊಮ್ಮುತ್ತಿದ್ದುವು; ಹರಿಯ ಮೇಲೆ ಹರಿ ಪೇರಿಸಲಾಗಿ ದೊಡ್ಡ ಒಡ್ಡುಗಳಾದುವು. ಸಾಲುಗಳು ತುಂಡು ತುಂಡಾಗಿದ್ದುದರಿಂದ, ಎಲ್ಲ ಕಡೆಯ ಕೊಯ್ಲುಗಾರರು ಹತ್ತಿರವಾದರು; ಉಜ್ಜುಗಲ್ಲು ಪೆಟ್ಟಿಗೆಗಳ ಢಣಢಣ ಶಬ್ದದೊಡನೆ, ಕುಡುಗತ್ತಿಗಳ ಸಂಘಟ್ಟಣೆಯ ನಿನಾದದೊಡನೆ ಮತ್ತು ಕತ್ತಿ ಮಸೆತದ ಗದ್ದಲದೊಡನೆ ಆಳುಗಳ ಉಲ್ಲಾಸಮಯ ಕಾಕುಕೇಕೆಗಳೂ ಸೇರಿಕೊಂಡು ಅವರು ಮುಂದೆ ಮುಂದೆ ಸಾಗುವಿಕೆಗೆ ಪರಸ್ಪರ ಪ್ರಚೋದನೆ ನೀಡುತ್ತಿದ್ದುವು.

ಲೆವಿನ್ ಮತ್ತೆ ಮುದುಕ ಮತ್ತು ತರುಣರ ನಡುವೆ ಕೊಯ್ಲುಗೆಲಸದಲ್ಲಿ ನಿರತನಾಗಿದ್ದನು. ಕುರಿದೊವಲು ಜಾಕೀಟನ್ನು ಧರಿಸಿದ್ದ ಮುದುಕ ಎಂದಿನಂತೆ ಉಲ್ಲಾಸದಿಂದಿದ್ದನು, ಚುರುಕಾಗಿದ್ದನು. ಮರಗಳ ಮಗ್ಗುಲಲ್ಲಿ ಸೊಂಪಾಗಿ ಬೆಳೆದ ಹುಲ್ಲಿನ ಮಧ್ಯೆ ಹೊರವಾಗಿ ಉಬ್ಬಿಕೊಂಡಿದ್ದ ಅಣಬೆಗಳು ಆಳುಗಳ ಬಾಯಲ್ಲಿ ನೀರೂರಿಸುತ್ತಿದ್ದುವು. ಹಲವರು ಅವನ್ನು ತಮ್ಮ ಕುಡುಗೋಲುಗಳಿಂದ ಹುಲ್ಲಿನ ಜತೆಯಲ್ಲಿಯೇ ಕತ್ತರಿಸಿಹಾಕುತ್ತಿದ್ದರು; ಆದರೆ ಮುದುಕ ಅಂಥ ಅಣಬೆಯನ್ನು ಕಂಡೊಡನೆಯೇ ಬಗ್ಗಿ ಅದನ್ನಾರಿಸಿಕೊಂಡು, ತನ್ನ ಷರಟನೊಳಗೆ ಇಳಿಬಿಡುತ್ತಿದ್ದನು; 'ನನ್ನ ಮುದುಕಿಗೆ ಇದೊಂದು ಕಾಣಿಕೆ' ಎಂದವನು ಪ್ರತಿಸಲವೂ ಹೇಳಿಕೊಳ್ಳುತ್ತಿದ್ದನು.

ಮೆತ್ತನೆಯ ಒದ್ದೆ ಹುಲ್ಲನ್ನು ಕತ್ತರಿಸುವುದೆಷ್ಟು ಸುಲಭವಾಗಿತ್ತೊ, ಕಮರಿಯ ಕಡಿದಾದ ಏಣುಗಳನ್ನೇರಿ ಇಳಿಯುವುದೂ ಅಷ್ಟೇ ಕಷ್ಟವಾಗಿತ್ತು. ಆದರೆ ಇದು ಸಹ ಮುದುಕನನ್ನು ಧೈರ್ಯಗುಂದಿಸಲಿಲ್ಲ. ಎಂದಿನಂತೆ ಸಲೀಸಾಗಿ ತನ್ನ ಕತ್ತಿಯನ್ನಲ್ಲಾಡಿಸುತ್ತ ಅವನು ನಿಧಾನವಾಗಿ ಬೆಟ್ಟದೇಣಿನ ಕಡೆಗೆ ಮುಂದುವರಿದನು; ದೊಡ್ಡ ತೊಗಟೆ ಚಪ್ಪಲಿಗಳೊಳಗಿನ ಅವನ ಪಾದಗಳು ದೃಢವಾದ ಮನ ಕ್ರಮದಿಂದ ಕಡಿದಾದ ಮಗ್ಗುಲನ್ನು ಹತ್ತುತ್ತಿದ್ದುವು; ಅವನ ಷರಾಯಿಗಳು ಜುಬ್ಬದ ಕೆಳಗೆ ನೇತಾಡುತ್ತಿದ್ದರೂ, ಪ್ರಯಾಸದ ಪ್ರಯತ್ನದಿಂದಾಗಿ ಅವನ ಇಡೀ ದೇಹ ನಡುಗುತ್ತಿದ್ದರೂ,

ಒಂದು ಹುಲ್ಲೆಸಳಾಗಲಿ, ಒಂದು ಅಣಬೆಯಾಗಲಿ ಅವನಿಂದ ತಪ್ಪಿಸಿಕೊಳ್ಳಲಿಲ್ಲ. ಇಷ್ಟಾದರೂ ಅವನು ಎಂದಿನಂತೆ ಲೆವಿನ್‌ನೊಡನೆಯೋ, ಸಹಕರ್ಮಚಾರಿಗಳೊಡನೆಯೂ ತಮಾಷೆ ಮಾಡುತ್ತಲೇ ಇದ್ದನು. ಲೆವಿನ್ ಅವನ ಹಿಂದೆ ಗಮಿಸುತ್ತಿದ್ದನು; ಕಡಿದಾದ ಓರೆಯಲ್ಲಿ ಕುಡುಗೋಲು ಹಿಡಿದು ಹೋಗುತ್ತಿದ್ದರೆ ತಾನು ಕೆಳಗೆ ಬಿದ್ದು ಬಿಡಬಹುದೆಂಬ, ಕುಡುಗೋಲಿಲ್ಲದಿದ್ದರೂ ಹತ್ತುವುದಸಾಧ್ಯವೆಂಬ ಹೆದರಿಕೆ ಅವನಿಗಿತ್ತು; ಆದರೂ ಅವನು ಭದ್ರವಾಗಿ ಕಾಲೂರಿಕೊಂಡು ಮೇಲೇರಿದನು; ಮಾಡಬೇಕಾದ್ದನ್ನೆಲ್ಲ ಮಾಡಿದನು. ಯಾವುದೋ ಬಾಹ್ಯಶಕ್ತಿ ತನ್ನನ್ನು ಮುಂದೆ ಮುಂದೆ ನೂಕುತ್ತಿರಬೇಕೆಂದು, ತನ್ನ ಕ್ರಿಯೆಯನ್ನು ನಿಯಂತ್ರಿಸುತ್ತಿರಬೇಕೆಂದು ಅವನು ಭಾವಿಸಿದನು.

೬

ಮಾಷ್ಕ ದಿಣ್ಣೆಯ ಕೊನೆಯ ಸಾಲುಗಳ ಕೊಯ್ಲು ಪೂರೈಸಿದ ನಂತರ ಆಳುಗಳು ತಂತಮ್ಮ ಕೋಟುಗಳನ್ನು ತೊಟ್ಟುಕೊಂಡು, ಭಾರವಾಗಿ, ಆದರೆ ಉಲ್ಲಾಸದಿಂದ ಹೆಜ್ಜೆ ಹಾಕುತ್ತ ಮನೆಗಳ ಕಡೆಗೆ ಮುಖಮಾದರು. ಲೆವಿನ್ ಕುದುರೆಯೇರಿ, ಮನಸ್ಸಿಲ್ಲದ ಮನಸ್ಸಿನಿಂದ ರೈತರನ್ನು ಬೀಳ್ಕೊಂಡು ಮನೆಯ ಕಡೆಗೆ ಹೊರಳಿದನು. ಗುಡ್ಡೆಯ ತುದಿಯಿಂದ ಅವನು ಹಿಂದಿರುಗಿ ನೋಡಿದನು. ದಟ್ಟ ಮಂಜು ಕಾರಣವಾಗಿ ಅವನವರನ್ನು ನೋಡಲಾಗಲಿಲ್ಲ; ಆದರವನಿಗೆ ಅವರ ವಿನೋದದ ಒರಟು ದನಿಗಳೂ, ಅವರ ಕಾಕುಕೇಕೆಗಳೂ, ಅವರ ಕುಡುಗತ್ತಿಗಳ ಠಣತ್ಕಾರವೂ ಕೇಳಿಸುತ್ತಿದ್ದುವು.

ಎದೆಬೆನ್ನುಗಳಿಗಂಟಿಕೊಂಡಿದ್ದ ಕೊಳಕು ಷರಟಿನ, ಬೆವರಿಡಿದ ಹಣೆಗೆ ಹತ್ತಿಕೊಂಡಿದ್ದ ಕೆದರುಗೂದಲಿನ ಲೆವಿನ್ ತನ್ನಣ್ಣನ ಕೋಣೆಗೆ ಸಂತೋಷ ಸಂಭ್ರಮಗಳೊಡನೆ ರಭಸದಿಂದ ಪ್ರವೇಶಿಸಿದಾಗ, ಕೊಜ್ನಿಶೆವ್ ಊಟ ಮುಗಿಸಿ, ಶೀತಲ ನಿಂಬೆ ಪಾನಕವನ್ನು ಚಪ್ಪರಿಯುತ್ತ, ಆದೆ ತಾನೆ ಅಂಚೆಯ ಮೂಲಕ ಬಂದಿದ್ದ ಕಾಗದ ಪತ್ರಗಳ ಮತ್ತು ಮಾಸಪತ್ರಿಕೆಗಳ ಮೇಲೆ ಕಣ್ಣಾಡಿಸುತ್ತಿದ್ದನು.

'ಇಡೀ ಹುಲ್ಲೊಡ್ಡನ್ನು ಮುಗಿಸಿದೆವು. ಅದು ನಂಬಲಾಗದ ಅತ್ಯದ್ಭುತ ಸಾಧನೆ. ಇಡೀ ದಿನ ಹೇಗೆ ಕಳೆದೆ?' ಎಂದು ಲೆವಿನ್ ಪ್ರಶ್ನಿಸಿದನು. ಹಿಂದಿನ ದಿನದ ಸಂಜೆಯ ಅಹಿತಕರ ಸಂಭಾಷಣೆಯನ್ನವನು ಸಂಪೂರ್ಣವಾಗಿ ಮರೆತಿದ್ದನು.

'ದೇವರಾಣೆಗೂ, ನೀನೊಬ್ಬ ಪ್ರೇಕ್ಷಣೀಯ ವ್ಯಕ್ತಿಯಾಗಿದ್ದೀಯೆ!' ಎಂದು ತನ್ನ ತಮ್ಮನ ಮೊದಲ ನೋಟದಿಂದ ಅಸಮಾಧಾನಗೊಂಡು ಕೊಜ್ನಿಶೆವ್ ಉದ್ಗಾರ ತೆಗೆದನು. 'ಬಾಗಿಲು! ಬಾಗಿಲು! ಸದ್ಯ ಬಾಗಿಲನ್ನು ಮುಚ್ಚು' ಎಂದವನು ಅಬ್ಬರಿಸಿದನು. 'ಇಷ್ಟು ಹೊತ್ತಿಗಾಗಲೇ ನೀನು ಒಂದು ಡಜನ್ ಒಳಗೆ ಬಿಟ್ಟಿರಬೇಕು.'

ಕೊಜ್ನಿಶೆವ್ ಸೊಳ್ಳೆಗಳನ್ನು ಸಹಿಸುತ್ತಿರಲಿಲ್ಲ. ರಾತ್ರಿಯ ವೇಳೆ ಮಾತ್ರ ಅವನು ಕಿಟಕಿಗಳನ್ನು ತೆರೆಯುತ್ತಿದ್ದನು; ಕವಾಟಗಳನ್ನು ಸದಾ ಮುಚ್ಚಿಡಲು ಶ್ರಮವಹಿಸುತ್ತಿದ್ದನು.

'ದೇವರಾಣೆಗು ಒಂದು ಎಸಳು ಸಹ ಉಳಿಸಿಲ್ಲ. ಏನಾದರೂ ಒಂದು ಕೈಯಿಂದ ಜಾರಿತೋ, ಅದನ್ನು ಕೂಡಲೇ ಹಿಡಿದು, ಮುಗಿಸಿಬಿಡುತ್ತಿದ್ದೆ. ಅದರಿಂದಾಗುವ ಆನಂದವನ್ನು ನೀನು ಊಹಿಸಲಾರೆ! ಅದಿರಲಿ, ನೀನು ದಿನವನ್ನು ಹೇಗೆ ಕಳೆದೆ?'

'ಭರ್ಜರಿಯಾಗಿ. ನೀನು ನಿಜಕ್ಕೂ ದಿನವೆಲ್ಲ ಕೊಯ್ಯುತ್ತಿದ್ದೆಯಾ? ತೋಳದಂತೆ ನೀನು ಹಸಿದಿರಬೇಕು. ಕುಜ್ಮ ನಿನಗಾಗಿ ಎಲ್ಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.'

'ನನಗೆ ಸ್ವಲ್ಪವೂ ಹಸಿವಾಗುತ್ತಿಲ್ಲ. ಅಲ್ಲಿಯೇ ಉಂಡೆ. ಮೊದಲು ಕೈಕಾಲು ಮುಖ ತೊಳೆದು ಬರುತ್ತೇನೆ.'

'ಆಗಲಿ, ಆಗಲಿ. ನಾನೂ ಬಂದು ನಿನ್ನ ಜೊತೆಗೆ ಸೇರಿಕೊಳ್ಳುತ್ತೇನೆ' ಎಂದು ಕೊಜ್ನಿಶೆವ್ ತನ್ನ ತಮ್ಮನ ಕಡೆಗೆ ನೋಡುತ್ತಾ ತಲೆಯಲ್ಲಾಡಿಸಿದನು. 'ಬೇಗ, ಬೇಗ' ಎಂದವನು ನಗುತ್ತ, ಕಾಗದ ಪತ್ರಗಳನ್ನು ಜೋಡಿಸಿಕೊಳ್ಳುತ್ತ ನುಡಿದನು. ಹಠಾತ್ತನೆ ಅವನು ಸಹ ಉಲ್ಲಾಸ ಸಂಭ್ರಮಗಳಿಗೊಳಗಾದನು; ತನ್ನ ತಮ್ಮನಿಂದ ದೂರವಿರಲು ಇಚ್ಛೆಪಡಲಿಲ್ಲ. 'ಮಳೆ ಬೀಳುವಾಗ ನೀನೆಲ್ಲಿದ್ದೆ?'

'ಮಳೆಯೆ? ಕೇವಲ ಒಂದೆರಡು ಹನಿಗಳಷ್ಟೆ. ಅಂತು ನಿನಗೆ ಬೇಸರಿಕೆಯಾಗಲಿಲ್ಲ ತಾನೆ. ಆಗಲಿಲ್ಲವೆಂದೆಯಾ, ನನಗೆ ತುಂಬ ಸಂತೋಷವಾಗಿದೆ. ಈಗಲೇ ಬಂದುಬಿಟ್ಟೆ' ಎಂದು ಲೆವಿನ್ ಬಟ್ಟೆ ಹಾಕಿಕೊಳ್ಳಲು ತ್ವರೆಯಿಂದ ಹೋದನು.

ಐದು ನಿಮಿಷಗಳ ನಂತರ ಸೋದರರು ಭೋಜನ ಶಾಲೆಯಲ್ಲಿ ಸಂಧಿಸಿದರು. ತನಗೆ ಹಸಿವಿಲ್ಲವೆಂದು ಲೆವಿನ್ ಎಣಿಸಿಕೊಂಡಿದ್ದರೂ, ಕುಜ್ಮನಿಗೆ ಸಂತೋಷವಾಗಲೆಂದು ಮೇಜಿನ ಮುಂದೆ ಕುಳಿತುಕೊಂಡರೂ, ಊಟ ಹಿಂದೆಂದೂ ಇಲ್ಲದಷ್ಟು ರುಚಿಕರವಾಗಿ ಕಂಡಿತು. ಅವನನ್ನೆ ನೋಡುತ್ತಿದ್ದ ಕೊಜ್ನಿಶೆವ್‌ನ ಮುಖದಲ್ಲಿ ಮುಗುಳುನಗೆ ಮಿಂಚಿತು.

'ಓ, ಮರೆತಿದ್ದೆ, ನಿನಗೊಂದು ಪತ್ರ ಬಂದಿದೆ. ಕುಜ್ಮ ಅದನ್ನು ತಾ. ಹಾಗೆಯೇ ಕದ ಮುಚ್ಚು' ಎಂದವನು ನುಡಿದನು.

ಅದು ಆಬ್ಲಾನ್‌ಸ್ಕಿಯ ಕಾಗದ. ಲೆವಿನ್ ಅದನ್ನು ಗಟ್ಟಿಯಾಗಿ ಓದಿದನು. ಅಬ್ಲಾನ್‌ಸ್ಕಿ ಅದನ್ನು ಸೇಂಟ್ ಪೀಟರ್ಸ್ ಬರ್ಗ್‌ನಿಂದ ಬರೆದಿದ್ದನು; 'ಡಾಲಿಯಿಂದ ನನಗೊಂದು ಪತ್ರ ಬಂದಿದೆ. ಅವಳೀಗ ಎರ್ಗು ಶೋವೊನಲ್ಲಿದ್ದಾಳೆ. ಅಲ್ಲಿಯ ವ್ಯವಹಾರ ಗಳು ಸುಗಮವಾಗಿದ್ದಂತೆ ತೋರುವುದಿಲ್ಲ. ದಯೆಯಿಟ್ಟು ಅಲ್ಲಿಗೆ ಹೋಗಿ, ಅವಳನ್ನು ಕಂಡು, ಅವಳಿಗೆ ಸಲಹೆ ನೀಡಿ, ಉಪಕಾರ ಮಾಡಿ. ಆ ವ್ಯವಹಾರಗಳೆಲ್ಲ ನಿನಗೆ ತಿಳಿದಿವೆ. ನಿನ್ನನ್ನು ನೋಡಿದರೇನೆ ಅವಳಿಗೆ ಸಂತೋಷವಾಗುತ್ತದೆ. ಪಾಪ, ಆ ಜೆನ್ನೆ ಒಂಟಿಯಾಗಿ ದ್ದಾಳೆ. ನನ್ನತ್ತೆ ಮತ್ತು ಇತರ ಬಂಧುಗಳು ಇನ್ನೂ ವಿದೇಶದಿಂದ ಹಿಂದಿರುಗಿಲ್ಲ.'

'ಭೇಷ್! ನಾನು ಖಂಡಿತ ಅವರನ್ನು ನೋಡಿಕೊಂಡು ಬರುತ್ತೇನೆ' ಎಂದು ಲೆವಿನ್ ನುಡಿದನು. 'ನೀವಿಬ್ಬರೂ ಜತೆಯಾಗಿ ಹೋಗಬಾರದೇಕೆ? ಡಾಲಿ ತುಂಬ ಆಕರ್ಷಕ ಲಾವಣ್ಯವತಿ. ನಿನ್ನದೂ ಅದೇ ಅಭಿಪ್ರಾಯವಲ್ಲವೆ?'

'ಅದು ಇಲ್ಲಿಂದ ತುಂಬ ದೂರವಿದೆಯೆ?'

'ಇಪ್ಪತ್ತು ಮೈಲಿ ಮಾತ್ರ. ಇಪ್ಪತ್ತೈದಿದ್ದರೂ ಇರಬಹುದು. ಆದರೆ ರಸ್ತೆ ಚೆನ್ನಾಗಿದೆ. ಪ್ರಯಾಣ ಸುಖಕರವಾಗಿರುತ್ತದೆ.'

'ಸಂತೋಷದಿಂದ ಬರುತ್ತೇನೆ' ಎಂದು ಕೊಜ್ನಿಶೆವ್ ನುಡಿದನು. ಅವನ ನಗುವಿನ್ನೂ ನಿಂತಿರಲಿಲ್ಲ. ತನ್ನ ತಮ್ಮನ ಹಿಗ್ಗಿನಿಂದಾಗಿ, ಅವನ ರಕ್ತದಲ್ಲಿ ನವ ಚೈತನ್ಯ ಸಂಚರಿಸಿದಂತಾಯಿತು.

‘ನಿನಗೆ ತುಂಬ ಹಸಿವಾಗಿರಬೇಕಲ್ಲವೆ?’ ಎಂದವನು ತಟ್ಟೆಯ ಮೇಲೆ ಬಾಗಿದ್ದ ಲೆವಿನ್‌ನ ಕೆಂಗಂದು ಬಣ್ಣದ, ಬಿಸಿಲು ಮುಚ್ಚಿಯ ಮುಖ ಕಂಠಗಳ ಕಡೆಗೆ ಕಣ್ಣಾಗಿ ಕೇಳಿದನು.

‘ಸೋಜಿಗವೊ ಸೋಜಿಗ! ಎಲ್ಲ ರೋಗಗಳಿಗೆ ಅಂಥ ದುಡಿಮೆಯೇ ಮದ್ದೆಂದರೆ ನೀನು ಪ್ರಾಯಶಃ ನಂಬಲಾರೆ. ದುಡಿಮೆ ಮದ್ದೆಂಬ ಹೊಸ ಪದವನ್ನು ಸೇರಿಸಿ ವೈದ್ಯ ವಿಜ್ಞಾನವನ್ನು ಶ್ರೀಮಂತಗೊಳಿಸಬೇಕೆಂದುಕೊಂಡಿದ್ದೇನೆ.’

‘ಅಂಥ ಚಿಕಿತ್ಸೆಯ ಅಗತ್ಯ ನಿನಗಿರಲಿಲ್ಲ, ಅಲ್ಲವೆ?,

‘ನನಗಲ್ಲ, ನರಸಂಬಂಧವಾದ ವ್ಯಾಧಿಗಳುಳ್ಳವರಿಗೆ.’

‘ಯಾರಾದರೂ ಅದನ್ನು ಪ್ರಯೋಗಿಸಿದರೆ ಮೇಲು. ಮೇವುಕೊಯ್ಲಿನ ಕೆಲಸ ನೋಡಬೇಕೆಂದಿದ್ದೆ. ನಿನ್ನ ಕರಾಮತ್ತನ್ನು ನೋಡುವುದು ನನ್ನ ಮುಖ್ಯೋದ್ದೇಶವಾಗಿತ್ತು; ಆದರೆ ತಡೆಯಲಾಗದಷ್ಟು ಧಗೆಯಿದ್ದದ್ದರಿಂದ ನಾನು ಕಾಡಿನಿಂದಾಚೆಗೆ ಹೋಗುವುದಸಾಧ್ಯವಾಯಿತು. ಅಲ್ಲಿ ತುಸು ಹೊತ್ತು ಕುಳಿತು ವಿಶ್ರಮಿಸಿಕೊಂಡೆ. ಅಲ್ಲಿಂದ ಮುಂದೆ ಕಾಡಿನಂಚಿನಲ್ಲಿದ್ದ ಹಳ್ಳಿಗೆ ಹೋದೆ. ಅಲ್ಲಿ ನಿನ್ನ ಹಿಂದಿನ ದಾದಿಯನ್ನು ಕಂಡು ಮಾತಾಡಿಸಿದೆ. ನಿನ್ನ ವಿಚಿತ್ರ ವರ್ತನೆಯ ಬಗ್ಗೆ ರೈತರ ಅಭಿಪ್ರಾಯವೇನಿರಬಹುದೆಂದು ವಿಚಾರಿಸಿದೆ. ನನ್ನನ್ನು ತಪ್ಪು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ, ಕೇಳು. ನಿನ್ನ ವರ್ತನೆ ಅವರಿಗೆ ಹಿಡಿಸಿಲ್ಲ. “ಅದು ದೊಡ್ಡವರ ಕೆಲಸವಲ್ಲವೆಂದು ಅವಳು ಹೇಳಿದಳು”. ರೈತರ ದೃಷ್ಟಿಯಲ್ಲಿ “ದೊಡ್ಡವರ ಕೆಲಸ”ದ ಕಲ್ಪನೆಯೇ ಬೇರೆ. ಆ ಬಗ್ಗೆ ಅವರದು ನಿಶ್ಚಿತಾಭಿಪ್ರಾಯ. ದೊಡ್ಡವರ ಕರ್ತವ್ಯ ಸೀಮೆಯ ಅತಿಕ್ರಮಣವನ್ನವರು ಸಹಿಸುವುದಿಲ್ಲ.”

‘ಪ್ರಾಯಶಃ ನನ್ನ ಜೀವನದಲ್ಲಿ ಅದಕ್ಕಿಂತ ಮಿಗಿಲಾದ ಸಂತೋಷವನ್ನು ನಾನನುಭವಿಸಿಲ್ಲ. ಅದರಲ್ಲೇನೂ ತಪ್ಪಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ. ಇದೆಯೇನು, ಹೇಳು’ ಎಂದು ಲೆವಿನ್ ಕೇಳಿದನು. ನನ್ನ ಕೆಲಸ ಅವರಿಗೆ ಸೇರದಿದ್ದರೆ ನಾನೇನು ಮಾಡಲಿ? ನಿಜಕ್ಕೂ ಅದರಲ್ಲಿ ಹುರುಳಿಲ್ಲ. ನಿನ್ನ ಅಭಿಪ್ರಾಯವೇನು?’

‘ಒಟ್ಟಿನಲ್ಲಿ ದಿನದ ಕೆಲಸ ನಿನಗೆ ತೃಪ್ತಿ ಕೊಟ್ಟಿದೆಯೆಂದು ತಿಳಿಯುತ್ತೇನೆ.’

‘ನನಗೆ ಅಪಾರ ಸಂತೋಷವಾಗಿದೆ. ಇಡೀ ಹುಲ್ಲೊಡ್ಡನ್ನು ಕೊಯ್ದು ಮುಗಿಸಿದೆವು. ಎಂಥ ಅಸಾಧಾರಣ ವೃದ್ಧನೊಡನೆ ಸ್ನೇಹ ಬೆಳೆಸಿದೆ, ಗೊತ್ತೆ? ಅವನೆಂಥ ಅಮೂಲ್ಯ ನಿಧಿಯೆನ್ನುವುದನ್ನು ನೀನು ಊಹಿಸಿಕೊಳ್ಳಲಾರೆ.’

‘ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಿನ್ನ ಪಾಲಿಗೆ ನಿನ್ನ ವಿಜಯದ ದಿನ. ನನಗೂ ಅಷ್ಟೆ. ಮೊದಲನೆಯದಾಗಿ, ನಾನು ಚದುರಂಗದಾಟದ ಎರಡು ಸಮಸ್ಯೆಗಳನ್ನು ಬಗೆಹರಿಸಿದೆ. ಅವುಗಳಲ್ಲೊಂದು ತೀರ ವಿಚಿತ್ರವಾಗಿದೆ—ಪ್ಯಾದೆಯೊಡನೆ ಪ್ರಾರಂಭಿಸು. ಅದನ್ನು ನಿನಗೆ ತೋರಿಸಿಕೊಡುತ್ತೇನೆ. ಆಮೇಲೆ ಹಿಂದಿನ ಸಂಜೆಯ ಸಂಭಾಷಣೆಯನ್ನು ಕುರಿತು ಮೆಲುಕುಹಾಕಿದೆ.’

‘ನಿನ್ನೆ ಸಾಯಂಕಾಲದ ಸಂಭಾಷಣೆಯೆ?’ ಎಂದು ಲೆವಿನ್ ಆನಂದಯುಕ್ತನಾಗಿ ಕಣ್ಣುಗಳನ್ನು ಸಂಕುಚಿಸುತ್ತ, ಭೋಜನಾನಂತರದ ಸಂತೃಪ್ತಿಯಿಂದ ತೇಗುತ್ತ, ಪುನರುಕ್ತಿಸಿದನು. ಆ ಸಂಭಾಷಣೆ ಸಂಪೂರ್ಣವಾಗಿ ಅವನ ನೆನಪಿಗೆ ಹತ್ತಲಿಲ್ಲ.

'ನಿನ್ನ ಅಭಿಪ್ರಾಯ ಭಾಗಶಃ ಸರಿ. ಸ್ವಂತಾಸಕ್ತಿಯೇ ಸರ್ವಚಾಲಕ ಶಕ್ತಿಯೆಂದು ನೀನು ಪ್ರತಿಪಾದಿಸುತ್ತೀಯೆ; ಉತ್ತಮ ಸಂಸ್ಕಾರದ ಸಿದ್ಧಿಯನ್ನು ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯೂ ಸಕಲ ಜೀವಾವಳಿಯ ಲೇಸಿಗಾಗಿ ಶ್ರಮಿಸಬೇಕೆಂಬುದು ನನ್ನ ವಾದ; ನಮ್ಮಿಬ್ಬರ ಅಭಿಪ್ರಾಯ ಭೇದವೇ ಇಷ್ಟು. ಭೌತಿಕಾಸಕ್ತಿಯನ್ನವಲಂಬಿಸಿದ ಚಟುವಟಿಕೆಗಳೇ ಅಪೇಕ್ಷಣೀಯವೆನ್ನುವ ನಿನ್ನ ಭಾವನೆ ಸಹ ಸರಿಯೆಂದೇ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ, ಫ್ರೆಂಚರು ಹೇಳುವಂತೆ ಸಹಜವಾಗಿಯೆ ನಿನ್ನದು ರಭಸ ಪ್ರವೃತ್ತಿ. ಮನಃಪೂರ್ವಕವಾಗಿ, ಉತ್ಸಾಹದಿಂದ ಜನ ಕಾರ್ಯಪ್ರವೃತ್ತರಾಗಬೇಕೆಂಬುದೂ, ಕ್ರಿಯಾಶೀಲ ಜೀವನಕ್ಕೆ ಪರ್ಯಾಯವಿಲ್ಲವೆನ್ನುವುದೂ ನಿನ್ನ ಮತ.'

ಲೆವಿನ್ ತನ್ನಣ್ಣನ ಮಾತುಗಳನ್ನಾಲಿಸುತ್ತಿದ್ದನೇ ಹೊರತು, ರವೆಯಷ್ಟೂ ಅರ್ಥಮಾಡಿಕೊಳ್ಳಲಿಲ್ಲ; ಅರ್ಥಮಾಡಿಕೊಳ್ಳುವ ಇಚ್ಛೆಯೂ ಅವನಿಗಿರಲಿಲ್ಲ. ತನ್ನಣ್ಣ ಕೇಳಬಹುದಾದ ಪ್ರಶ್ನೆಗೆ ತಾನು ಉತ್ತರ ನೀಡದಿದ್ದಾಗ, ತನ್ನ ಮಾತುಗಳನ್ನು ಕೇಳಿಸಿಕೊಳ್ಳಲಿಲ್ಲವೆಂದವನು ದನಿಯೆತ್ತಬಹುದೆಂದು ಲೆವಿನ್ ಹೆದರಿದನು.

'ನಿನ್ನ ಇರಾದೆ ಇದೇ ಅಲ್ಲವೆ, ತಮ್ಮ?' ಎಂದು ಕೊಜ್ನಿಶೆವ್ ಅವನ ಭುಜ ಚಪ್ಪರಿಸುತ್ತ ಕೇಳಿದನು.

'ಹೌದ್ಹೌದು. ನಿಜಕ್ಕೂ ನಿಜ. ನನ್ನ ವಾದವೇ ಸರಿಯೆಂದು ನಾನು ಹಟ ಹಿಡಿಯುವುದಿಲ್ಲ' ಎಂದು ಲೆವಿನ್ ಮುಗುಳು ನಗುತ್ತ ಉತ್ತರಿಸಿದನು; ಅವನ ಉತ್ತರದಲ್ಲಿ ನಿಷ್ಕಾಪಟ್ಯವಿತ್ತು, ಕ್ಷಮಾ ಯಾಚನೆಯ ಭಾವವಿತ್ತು. 'ನಾವು ಚರ್ಚಿಸುತ್ತಿದ್ದ ವಿಷಯ ಯಾವುದು? ಅವನ ವಾದವೂ ಸರಿ, ನನ್ನ ವಾದವೂ ಸರಿ. ಎಲ್ಲವೂ ಶ್ರೇಷ್ಠವಾದದ್ದೇ. ಆದರೆ ನಾನೀಗ ಲೆಕ್ಕದ ಮನೆಗೆ ಹೋಗಿ, ಕೆಲವು ಸಲಹೆ ಕೊಡಬೇಕಾಗಿದೆ.' ಅವನು ಮೇಲೆದ್ದು, ಮೈ ಕೈ ಮುರಿದು, ನಸುನಕ್ಕನು.

ಕೊಜ್ನಿಶೆವ್ ಸಹ ಮಂದಹಾಸ ಸೂಸಿದನು. 'ವಾಯು ವಿಹಾರ ನಿನಗೆ ಅಗತ್ಯವೆನಿಸಿದರೆ, ಇಬ್ಬರೂ ಒಟ್ಟಿಗೆ ಹೋಗೋಣ' ಎಂದವನು ನವಚೈತನ್ಯ ಮಹದಾನಂದಗಳಲ್ಲಿ ತನ್ನನ್ನು ಮುಳುಗಿಸಿದ ತಮ್ಮನನ್ನು ಬಿಟ್ಟಿರಲಾರದೆ ನುಡಿದನು. 'ಬಾ, ಬಾ; ಲೆಕ್ಕದ ಮನೆಯಲ್ಲಿ ಕೆಲಸವಿರುವುದಾದರೆ, ನಿಂತು ಹೋಗೋಣ.'

'ಅಯ್ಯೋ ದೇವರೆ!' ಎಂದು ಲೆವಿನ್ ಗಟ್ಟಿಯಾಗಿ ಅರಚಿದಾಗ ಕೊಜ್ನಿಶೆವ್ ಬೆಚ್ಚಿಬಿದ್ದನು.

'ಏನು? ಏನಾಯ್ತು?'

'ಅಗಫಿಯಾ ಮಿಖಾಯ್‌ಲೋವ್ನಳ ಮುಂಗೈ ಹೇಗಿದೆಯೋ ಕಾಣೆ' ಎಂದು ಲೆವಿನ್ ತಪ್ಪಾಯಿತೆನ್ನುವಂತೆ ಹಣೆಯ ಮೇಲೆ ಬಡಿದುಕೊಂಡನು. 'ನಾನದನ್ನು ಸಂಪೂರ್ಣವಾಗಿ ಮರೆತೆ'

'ಅದೀಗ ಉತ್ತಮವಾಗಿದೆ.'

'ಆದರೂ ನಾನವಳನ್ನು ನೋಡಲೇಬೇಕು. ನೀನು ಟೋಪಿ ಹಾಕಿಕೊಳ್ಳುವ ಹೊತ್ತಿಗೆ ಬಂದು ಬಿಡುತ್ತೇನೆ.'

ಅವನು ಮಹಡಿಯಿಂದ ದಡದಡನೆ ಕೆಳಗಿಳಿಯುವಾಗ ಹಿಮ್ಮಡಿಗಳು ಗೆಜ್ಜೆಗಳಂತೆ ಝಣಝಣ ಸದ್ದು ಮಾಡಿದುವು.

೭

ಅದೇ ಸಮಯದಲ್ಲಿ ಅಬ್ಲಾನ್‌ಸ್ಕಿ ಅತ್ಯಂತ ಸ್ವಾಭಾವಿಕವೂ ಅನಿವಾರ್ಯವೂ ಆದ ಅಧಿಕಾರೀ ಕರ್ತವ್ಯವನ್ನು ನೆರವೇರಿಸುವ ಸಲುವಾಗಿ ಸೇಂಟ್ ಪೀಟರ್ಸ್‌ಬರ್ಗ್‌ಗೆ ಹೋದನು. ಹೊರಗಡೆಯವರಿಗೆ ಅರ್ಥವಾಗದಿದ್ದರೂ, ಸರ್ಕಾರಿ ಸೇವೆಯಲ್ಲಿದ್ದವರಿಗೆ ಅದು ಸುಪರಿಚಿತವಾಗಿತ್ತು; ಸರ್ಕಾರಿ ಸೇವೆಯಲ್ಲಿರುವ ಜನ ತಮ್ಮ ಅಸ್ತಿತ್ವವನ್ನು ಮಂತ್ರಿಮಂಡಲದ ಗಮನಕ್ಕೆ ತರಬೇಕಾದರೆ ಅಂಥ ಕರ್ತವ್ಯನಿರ್ವಹಣೆ ಅತ್ಯವಶ್ಯ ವಾಗಿತ್ತು. ಈ ಕರ್ತವ್ಯಾಚರಣೆಗಾಗಿ ಅವನು ಮನೆಯಲ್ಲಿದ್ದ ನಗದು ಹಣವನ್ನೆಲ್ಲ ಒಯ್ದು, ಜೂಜುಗಳಲ್ಲಿ ಹಾಗೂ ಬೇಸಗೆಯ ವಿಹಾರ ಕೇಂದ್ರಗಳಲ್ಲಿ ಸಂತೋಷವಾಗಿ ಹಾಗೂ ಸ್ವೇಚ್ಛೆಯಿಂದ ಕಾಲ ಕಳೆಯುತ್ತಿದ್ದನು. ಅದೇ ಸಮಯದಲ್ಲಿ ಮನೆಯ ಖರ್ಚನ್ನು ಕನಿಷ್ಠ ಮಿತಿಗಿಳಿಸುವ ಸಲುವಾಗಿ ಡಾಲಿ ಮತ್ತು ಮಕ್ಕಳು ಹಳ್ಳಿಗಾಡಿನ ಮನೆಗೆ ತೆರಳಿ ದರು. ತನಗೆ ಬಳುವಳಿಯಾಗಿ ಬಂದಿದ್ದ ಎರ್‌ಗ್ಯಶೊವೊ ಆಸ್ತಿಮನೆ ಅವರು ಬೀಡುಬಿಟ್ಟ ತಾಣ; ಲೆವಿನ್‌ನ ಪೊಕ್ರೋವ್‌ಸ್ಕಾಯ್ ಮನೆಯಿಂದ ಅದು ಹತ್ತು ಇಪ್ಪತ್ತು ಮೈಲಿಗಳ ದೂರದಲ್ಲಿತ್ತು; ವಸಂತಮಾಸದಲ್ಲಿ ಅದರಲ್ಲಿದ್ದ ತೇಗದ ಮರಗಳನ್ನು ಮಾರಲಾಗಿತ್ತು. ಅಲ್ಲಿಯ ಜಹಗೀರುದಾರನ ಹಳೆಯ ದೊಡ್ಡ ಮನೆಯನ್ನು ಬಹುಹಿಂದೆಯೇ ಕೆಡವ ಲಾಗಿತ್ತು; ಆದರೆ ರಾಜಕುಮಾರ ಬಿಡದಿಭಾಗವನ್ನು ರಿಪೇರಿ ಮಾಡಿಸಿದ್ದಲ್ಲದೆ, ವಿಸ್ತರಿಸಿ ದ್ದನು. ಇಪ್ಪತ್ತುವರ್ಷಗಳಿಗೆ ಮೊದಲೇ, ಡಾಲಿ ಇನ್ನೂ ಮಗುವಾಗಿದ್ದಾಗಲೇ ಆ ಬಿಡದಿ ವಿಸ್ತಾರವಾಗಿದ್ದು, ಸಾನುಕೂಲವಾಗಿತ್ತು. ಅದು ಎಲ್ಲ ಬಿಡದಿಗಳಂತೆ ಪ್ರವೇಶಮಾರ್ಗಕ್ಕೆ ಎದುರಾಗಿದ್ದು, ಉತ್ತರಮುಖಿಯಾಗಿತ್ತು. ಈಗಂತು ಅದು ಹಳತಾಗಿ, ಜೀರ್ಣಾವಸ್ಥೆ ಯಲ್ಲಿತ್ತು. ಮರ ಮಾರುವ ಸಲುವಾಗಿ ಅಬ್ಲಾನ್‌ಸ್ಕಿ ವಸಂತಮಾಸದಲ್ಲಿ ಅಲ್ಲಿಗೆ ಹೋಗಿ ದ್ದಾಗ, ಮನೆಯನ್ನವಲೋಕಿಸಿ, ಅವಶ್ಯವಾದ ದುರಸ್ತಿಕಾರ್ಯಗಳನ್ನು ನೆರವೇರಿಸು ವಂತೆ ಡಾಲಿ ಅವನಿಗೆ ಹೇಳಿದ್ದಳು. ತಮ್ಮ ಮಡದಿಯರಿಗೆ ಸೌಲಭ್ಯಾನುಕೂಲಗಳ ನ್ನೊದಗಿಸುವಲ್ಲಿ ತಪ್ಪಿತಸ್ಥ ಗಂಡಂದಿರು ಸದಾ ತವಕಿಸುವಂತೆ, ಅಬ್ಲಾನ್‌ಸ್ಕಿ ಖುದ್ದಾಗಿ ಮನೆಯ ಮೂಲೆ ಮೊಡಕುಗಳನ್ನೆಲ್ಲ ಪರೀಕ್ಷಿಸಿ, ಅಗತ್ಯವಾದ ರಿಪೇರಿಗಳನ್ನು ಕೈಗೊಳ್ಳು ವಂತೆ ಸಂಬಂಧಪಟ್ಟವರಿಗೆ ಅಜ್ಞಾಪಿಸಿದ್ದನು. ಎಲ್ಲ ಪೀಠೋಪಕರಣಗಳಿಗೆ ಬಟ್ಟೆ ಹೊದಿಸುವ, ಪರದೆಗಳನ್ನು ಬಿಡುವ, ತೋಟದ ಕಳೆಯನ್ನು ತೆಗೆಯುವ, ಕೊಳಕ್ಕೆ ಸೇರಿ ದಂತೆ ಜಗುಲಿಯೊಂದನ್ನು ನಿರ್ಮಿಸುವ ಅಗತ್ಯವಿದೆಯೆಂದವನಿಗೆ ಮನದಟ್ಟಾಯಿತು. ಹಲವು ಮುಖ್ಯವಿಷಯಗಳ ಬಗ್ಗೆ ಅವನು ನಿರ್ಲಕ್ಷ್ಯದಿಂದಿದ್ದನು. ಅದರಿಂದಾಗಿ ಮುಂದೆ ಡಾಲಿಯ ಕಷ್ಟಗಳಿಗೆ ಕೊನೆಯಿರಲಿಲ್ಲ.

ಆಸಕ್ತನಾದ ಗಂಡನಂತೆ ಮತ್ತು ತಂದೆಯಂತೆ ವರ್ತಿಸಲು ಪ್ರಯತ್ನಿಸಿದರೂ ಅಬ್ಲಾನ್‌ಸ್ಕಿ ತನಗೆ ಮಡದಿಮಕ್ಕಳಿದ್ದಾರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಅವಿವಾಹಿತನ ರುಚಿಗಳಿಗೆ ಅವನು ಶರಣಾಗಿದ್ದನು; ಅವುಗಳ ನಿಯಂತ್ರಣಕ್ಕವನು ಒಳಗಾಗಿದ್ದನು.

ಅಗತ್ಯವಾದ ಕೆಲಸಗಳನ್ನೆಲ್ಲ ಪೂರೈಸಲಾಗಿತ್ತೆಂದೂ, ಆ ಮನೆಯೊಂದು ಮಿನಿ ಸ್ವರ್ಗವಾಗಿತ್ತೆಂದೂ, ಮಾಸ್ಕೋದಿಂದ ಹಿಂದಿರುಗಿದ ಕೂಡಲೇ ಅವನು ತನ್ನ ಮಡದಿಗೆ

ಹೆಮ್ಮೆಯಿಂದ ತಿಳಿಸಿದನು; ಅಲ್ಲಿಗೆ ಹೋಗಿ ಸುಖಜೀವನವನ್ನು ನಡೆಸಬಹುದೆಂದು ಸಹ ಅವನು ಗಂಭೀರವಾಗಿ ಅವಳನ್ನು ಒತ್ತಾಯಿಸಿದನು. ತನ್ನ ಮಡದಿಯು ಗ್ರಾಮಜೀವನ ಸರ್ವದೃಷ್ಟಿಯಿಂದಲೂ ಅವನಿಗೆ ಸರಿಯೆಂದು ತೋರಿತು; ಮಕ್ಕಳ ಆರೋಗ್ಯಕ್ಕೆ ಅದು ಅನುಕೂಲವಾಗಿತ್ತು; ಜೀವನ ವೆಚ್ಚದ ಕಡಿತ ಸಾಧ್ಯವಾಗಿತ್ತು; ಅವನಿಗೆ ಸಾಕಷ್ಟು ಸ್ವಾತಂತ್ರ್ಯವಿರುತ್ತಿತ್ತು. ತನ್ನ ಮಕ್ಕಳ ಆರೋಗ್ಯ ಸುಧಾರಣೆಯ ಸಲುವಾಗಿ, ಅದರ ಲ್ಲಿಯೂ ಕೆಂಬಾರೆ ಜ್ವರ ಬಿಟ್ಟನಂತರ ಸಂಪೂರ್ಣವಾಗಿ ಚೈತನ್ಯ ಪಡೆಯದಿದ್ದ ತನ್ನ ಹೆಂಗೂಸಿನ ಸಲುವಾಗಿ ಡಾಲಿಯೇ ಆ ಸಲಹೆಯನ್ನು ಸ್ವಾಗತಿಸಿದ್ದಳು. ಮೋಚಿಯ, ಬೆಸ್ತನ ಮತ್ತು ಸೌದೆ ಮಾರುವವನ ಸಾಲ ಪಾವತಿಮಾಡಲಾರದ ಮತ್ತು ಅಂಥದೇ ಹಲವು ಸಣ್ಣಪುಟ್ಟ ಅವಮಾನಗಳಿಂದ ಪಾರಾಗುವ ಸಲುವಾಗಿ ಅವಳು ಹಳ್ಳಿ ಮನೆಗೆ ಹೋಗಲು ಆತುರಳಾಗಿದ್ದಳು. ಖನಿಜ ಜಲ ಸ್ನಾನಕ್ಕೆಂದು ವಿದೇಶಕ್ಕೆ ಹೋಗಿದ್ದ ತಂಗಿ ಕಿಟ್ಟಿ ಬೇಸಗೆಯ ಮಧ್ಯಭಾಗದಲ್ಲಿ ತನ್ನಲ್ಲಿಗೆ ಬರುವ ಸಂಭವವಿದ್ದುದರಿಂದ ಅವಳಿಗೆ ಹಳ್ಳಿಯ ವಾಸ ವಿಶೇಷ ಆಕರ್ಷಣೀಯವಾಗಿ ತೋರಿತು. ಶೈಶವದ ಮಧುರಸ್ಮೃತಿ ಗಳನ್ನು ಮೇಲಿಂದ ಮೇಲೆ ಕೆರಳಿಸುತ್ತಿದ್ದ, ತಮ್ಮ ಹೃದಯಕ್ಕೆ ತೀರ ಹತ್ತಿರವಾಗಿದ್ದ ಎರ್ಗುಶೋವೊಗೆ ಬರಲು ತನಗೆ ತುಂಬ ಖುಷಿಯಾಗುವುದಾಗಿ ಕಿಟ್ಟಿ ವಿದೇಶದಲ್ಲಿದ್ದಾಗಲೇ ತನ್ನಕ್ಕನಿಗೆ ಪತ್ರ ಬರೆದಿದ್ದಳು.

ಗ್ರಾಮ ಜೀವನದ ಮೊದಮೊದಲ ದಿನಗಳಲ್ಲಿ ಡಾಲಿಗೆ ತುಂಬ ಕಷ್ಟವಾಯಿತು. ತನ್ನ ಶೈಶವದಲ್ಲಿ ಡಾಲಿ ಹಳ್ಳಿಯಲ್ಲಿ ವಾಸಿಸಿದ್ದಳು. ನಗರದ ಎಲ್ಲ ಬಗೆಯ ಅಸಹ್ಯಗಳಿಂದ ಪಾರುಮಾಡುವ ಆಶ್ರಯವನ್ನು ಹಳ್ಳಿ ಒದಗಿಸುತ್ತದೆಂದೂ, ಅಲ್ಲಿ ನಗರ ಜೀವನದ ವಿಲಾಸ ವಿಭ್ರಮಗಳಿಲ್ಲದಿದ್ದರೂ (ಡಾಲಿ ಇದನ್ನು ಸಲೀಸಾಗಿ ಒಪ್ಪಿಕೊಳ್ಳುತ್ತಿದ್ದಳು), ಜೀವನದವೆಚ್ಚ ಮಿತಿಯಲ್ಲಿದ್ದು, ಸಕಲ ಸೌಲಭ್ಯಗಳು ಲಭಿಸುತ್ತಿದ್ದುವೆಂದೂ, ಶೈಶವ ಸಮಯದ ಜೀವನಾನುಭವದಿಂದ ಅವಳಿಗೆ ವೇದ್ಯವಾಗಿತ್ತು; ಅಲ್ಲಿ ಯಾವ ವಸ್ತು ವಾದರೂ ಸುಲಭಬೆಲೆಗೆ ದೊರಕುವಂತಿತ್ತು; ಮಕ್ಕಳಿಗಂತು ಅದೊಂದು ಆದರ್ಶಕ್ಷೇತ್ರ ವಾಗಿತ್ತು. ಆದರೆ ಮನೆಯೊಡತಿಯಾಗಿ ಹಳ್ಳಿಗೀಗ ಹಿಂದಿರುಗಿರಲಾಗಿ, ವಿದ್ಯಮಾನಗಳು ತಾನು ಯೋಚಿಸಿದಷ್ಟು ಅನುಕೂಲಕರವಾಗಿರಲಿಲ್ಲವೆಂದವಳಿಗೆ ಮನವರಿಕೆಯಾಯಿತು.

ಅವರು ಬಂದ ದಿನ ಭಾರಿ ಮಳೆ ಸುರಿದಿತ್ತು. ಆ ರಾತ್ರಿ ಮಕ್ಕಳ ಕೋಣೆ ಮತ್ತು ಅಂಗಳಗಳಲ್ಲಿ ನೀರು ಸೋರಿತ್ತು; ಹಾಸುಗೆಗಳನ್ನು ದಿವಾನಖಾನೆಗೆ ವರ್ಗಾಯಿಸ ಬೇಕಾಯಿತು. ಅಡುಗೆಯವಳಿರಲಿಲ್ಲ. ಒಂಬತ್ತು ಹಸುಗಳ ಪೈಕಿ ಕೆಲವು ಅದೆ ತಾನೆ ಈದಿದ್ದವೆಂದೂ, ಮತ್ತೆ ಕೆಲವು ಈಯುವುದರಲ್ಲಿದ್ದುವೆಂದೂ, ಕೆಲವು ಮುದಿಯಾಗಿದ್ದು ವೆಂದೂ, ಒಂದೆರಡು ಹಸುಗಳ ಕೆಚ್ಚಲು ಕರ್ಕಶವಾಗಿದ್ದುವೆಂದೂ ಗೋವಳಗಿತ್ತಿ ಹೇಳಿ ದಳು; ಮಕ್ಕಳಿಗೆ ಹಾಲಾಗಲಿ, ಬೆಣ್ಣೆಯಾಗಲಿ ದೊರಕುವಂತಿರಲಿಲ್ಲ. ಮೊಟ್ಟೆ ಮೊದಲೇ ಇಲ್ಲ. ಹದವಾದ ಹೇಂಟೆಗಳಿಲ್ಲದ್ದರಿಂದ, ನೀಲಿಚರ್ಮದ ಬಲಿತ ಹುಂಜಗಳನ್ನೆ ಹುರಿಯ ಬೇಕಾಗಿತ್ತು ಅಥವಾ ಬೇಯಿಸಬೇಕಾಗಿತ್ತು. ನೆಲವುಜ್ಜಿ ತೊಳೆಯುವ ಹೆಂಗಸರಿರಲಿಲ್ಲ; ಅವರೆಲ್ಲರೂ ಆಲೂಗಡ್ಡೆ ನೆಡುವುದರಲ್ಲಿ ತೊಡಗಿಕೊಂಡಿದ್ದರು. ಕುದುರೆಗಳಲ್ಲೊಂದು ಮೊಂಡುಬಿದ್ದು ತಟವಾಡುತ್ತಿದ್ದುದರಿಂದ ಸವಾರಿ ಸಾಧ್ಯವಾಗುತ್ತಿರಲಿಲ್ಲ. ಹಸುಗಳ

ತಳಿತದಿಂದ ದಡ ಕೊಚ್ಚೆಯಾಗಿದ್ದುದರಿಂದ, ಜತೆಗೆ ರಸ್ತೆಯ ಕಡೆಗೆ ತೆರೆದುಕೊಂಡಿದ್ದುದರಿಂದ ನದಿಯಲ್ಲಿ ಸ್ನಾನಮಾಡುವಂತಿರಲಿಲ್ಲ. ಕನ್ನಗಳಿದ್ದ ಬೇಲಿಗಳಲ್ಲಿ ಹಸುಗಳು ತೂರಿ ಬರುತ್ತಿದ್ದುದರಿಂದ, ಭಯಂಕರವಾದೊಂದು ಗೂಳಿ ಅಪಾಯಕಾರಿ ಎನ್ನುವಷ್ಟರ ಮಟ್ಟಿಗೆ ಗುಟುರೆ ಹಾಕುತ್ತಿದ್ದುದರಿಂದ ಅವರು ತೋಟದಲ್ಲಿ ತಿರುಗಾಡುವಂತಿರಲಿಲ್ಲ. ಬಟ್ಟೆಯಿಡಲು ಸಾಕಷ್ಟು ಸ್ಥಳವಿರಲಿಲ್ಲ; ಇದ್ದ ಕೆಲವು ಬಟ್ಟೆ ಕಪಾಟುಗಳ ಬಾಗಿಲು ಮುಚ್ಚಿಕೊಳ್ಳುತ್ತಿರಲಿಲ್ಲ; ಇಲ್ಲವೆ, ಯಾರಾದರೂ ಜೋರಾಗಿ ನಡೆದರೆ ತಾವಾಗಿಯೇ ತೆರೆದುಕೊಳ್ಳುತ್ತಿದ್ದುವು. ಚೆಂಕಿಗೂಡುಗಳಲ್ಲಿ ಸರಳುಗಳಾಗಲಿ, ಸಲಾಕಿಗಳಾಗಲಿ ಇರಲಿಲ್ಲ. ಸಾಕಷ್ಟು ಪಾತ್ರೆ ಪರಡಿಗಳಿರಲಿಲ್ಲ. ದೋಬಿಕೆಲಸಕ್ಕೆ ಉಚ್ಚೆ ಪಾತ್ರೆಗಳಿರಲಿಲ್ಲ. ಸೇವಿಕೆಯರ ಕೋಣೆಯಲ್ಲಿ ಇಸ್ತ್ರಿಪೆಟ್ಟಿಗೆ ಸಹ ಕಾಣೆಯಾಗಿತ್ತು.

ಮೊದಮೊದಲ ದಿನಗಳಲ್ಲಿ ಡಾಲಿ ಶಾಂತಿ ವಿಶ್ರಾಂತಿಗಳನ್ನನುಭವಿಸಲಿಲ್ಲ; ಭಯಾನಕವಾದ ವಿಪತ್ತುಗಳಿಂದಾಗಿ ಅವಳು ನಿರಾಶೆಯನ್ನೆದುರಿಸಬೇಕಾಯಿತು. ಅವುಗಳೊಡನೆ ಹೆಣಗಾಡಲು ಅವಳು ಶಕ್ತಿಮೀರಿ ಶ್ರಮಿಸಿದಳು; ಪರಿಸ್ಥಿತಿ ಆಶಾದಾಯಕವಾಗಿಲ್ಲವೆಂದವಳು ಬಗೆದಳು; ಪ್ರತಿಯೊಂದು ನಿಮಿಷದಲ್ಲಿಯೂ ಒತ್ತಿ ಬರುತ್ತಿದ್ದ ಕಣ್ಣೀರನ್ನು ತಡೆಗಟ್ಟಿಕೊಂಡಳು. ಸಲ್ಲಕ್ಷಣನೂ ಮರ್ಯಾದೆ ಬಲ್ಲವನೂ ಆದ ನಿವೃತ್ತ ಸೈನ್ಯಾಧಿಕಾರಿಯನ್ನು ಅಬ್ಲಾನ್‌ಸ್ಕಿ ದ್ವಾರಪಾಲಕನನ್ನಾಗಿ ನೇಮಿಸಿಕೊಂಡಿದ್ದನು; ಅವನ ಅಂದಚೆಂದಗಳಿಗಾಗಿ ಅವನನ್ನು ಕೆಲವು ದಿನಗಳಲ್ಲಿಯೇ ಪಾರುಪತ್ಯಗಾರನ ಹುದ್ದೆಗೆ ಬಡ್ತಿ ನೀಡಿದ್ದನು. ಆ ಪಾರುಪತ್ಯಗಾರ ಡಾಲಿಯ ಕಷ್ಟಸ್ಥಿತಿಯಲ್ಲಿ ಸಹಾನುಭೂತಿ ತೋರಿಸುತ್ತಿರಲಿಲ್ಲ; 'ಅದು ಸಾಧ್ಯವಿಲ್ಲ. ನಿಮಗೆ ಗೊತ್ತಿರುವಂತೆ ಈ ಹಳ್ಳಿಯ ಜನ ಕಳ್ಳರು' ಎಂದು ಗೌರವದಿಂದಲೇ ಅವಳ ಬಿನ್ನಹಗಳನ್ನು ತಿರಸ್ಕರಿಸುತ್ತಿದ್ದನು. ಒಂದಿನಿತೂ ಅವನಿಂದ ಸಹಾಯ ದೊರಕುತ್ತಿರಲಿಲ್ಲ.

ನಿಜಕ್ಕೂ ಪರಿಸ್ಥಿತಿ ನಿರಾಶಾದಾಯಕವಾಗಿತ್ತು. ಆದರೆ ಎಲ್ಲ ದೊಡ್ಡ ಕುಟುಂಬಗಳಲ್ಲಿರುವಂತೆ ಅಬ್ಲಾನ್‌ಸ್ಕಿಯ ಕುಟುಂಬದಲ್ಲಿಯೂ ಯಾರ ಕಣ್ಣಿಗೂ ಬೀಳದ, ಆದರೆ ಪ್ರಯೋಜನಕಾರಿಯೂ ಪ್ರಮುಖವೂ ಆದ ವ್ಯಕ್ತಿಯೊಬ್ಬಳಿದ್ದಳು. ಅವಳ ಹೆಸರು ಮೆತ್ರೋನ. ಎಲ್ಲವೂ ಕಾಲಕ್ರಮೇಣ ಸರಿಹೋಗುತ್ತದೆಂ (ಅವಳ ಈ ಮಾತುಗಳನ್ನು ಮಾತ್ವೆ ಅನುಕರಿಸುತ್ತಿದ್ದನು) ದು ಭರವಸೆ ನೀಡಿ, ಅವಳು ತನ್ನೊಡತಿಯನ್ನು ಸಮಾಧಾನ ಪಡಿಸಿದಳು. ಅವಸರ ಉದ್ರೇಕಗಳಿಲ್ಲದೆ ತನ್ನ ಕೆಲಸದಲ್ಲವಳು ಮಗ್ನಳಾದಳು. ಅವಳು ಊರಿಗೆ ಬಂದೊಡನೆಯೇ ಪಾರುಪತ್ಯಗಾರನ ಮಡದಿಯೊಡನೆ ಸಖ್ಯ ಬೆಳೆಸಿದಳು; ಮೊದಲದಿನವೇ ಅವಳೊಡನೆ ಹಾಗೂ ಪಾರುಪತ್ಯಗಾರನ ಜತೆಯಲ್ಲಿ ಜಾಲಿಜಾತಿಯ ಮರದ ಕೆಳಗೆ ಟೀ ಕುಡಿದಳು. ಬಹುಬೇಗ ಮೆತ್ರೋನ ಕ್ಲಬ್ಬೊಂದನ್ನು ಆರಂಭಿಸಿದಳು. ಆ ಕ್ಲಬ್ಬು ಆಗಾಗ್ಗೆ ಜಾಲಿಜಾತಿಯ ಮರದ ಕೆಳಗೆ ಸೇರುತ್ತಿತ್ತು. ಪಾರುಪತ್ಯಗಾರನ ಮಡದಿ, ಗ್ರಾಮ ಮುಖಂಡ ಮತ್ತು ಮನೆಯ ಕರಣಿಕರು ಅದರ ಸದಸ್ಯರು. ಈ ಕ್ಲಬ್ಬಿನ ಮೂಲಕ ಜೀವನದ ಕಷ್ಟಕ್ಲೇಶ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರಗಳನ್ನು ಕಂಡುಕೊಳ್ಳುತ್ತಿದ್ದರು. ಹೀಗಾಗಿ ಒಂದು ವಾರದಲ್ಲಿಯೇ ಎಲ್ಲವೂ ಒಂದು ರೂಪಕ್ಕೆ ಬಂದಿತ್ತು. ಚಾವಣಿಯನ್ನು ಸರಿಪಡಿಸಲಾಯಿತು; ಅಡುಗೆಯವಳನ್ನು

(ಗ್ರಾಮಮುಖಂಡನ ಸಂಬಂಧಿಯುವಳು) ನೇಮಿಸಿಕೊಳ್ಳಲಾಯಿತು; ಹೆಂಟಿಗಳನ್ನು ಕೊಳ್ಳಲಾಯಿತು; ಹಸುಗಳು ಹಾಲುಕೊಡಲನುವಾದುವು; ಗೂಟಗಳನ್ನು ನೆಟ್ಟು ಬೇಲಿಯ ಕನ್ನಗಳನ್ನು ಮುಚ್ಚಲಾಯಿತು; ಬಡಗಿ ಗಾಡಿಯನ್ನಣಿಗೊಳಿಸಿದ; ಬಟ್ಟೆ ಕಪಾಟುಗಳಿಗೆ, ಅವು ತಾವಾಗಿಯೇ ತೆರೆದುಕೊಳ್ಳದಂತೆ, ಕೊಕ್ಕೆಗಳನ್ನಳವಡಿಸ ಲಾಯಿತು; ಸೈನಿಕರ ಬಟ್ಟೆಗಳಿಂದ ಮುಚ್ಚಿದ ಕಬ್ಬಿಣದ ಹಲಗೆಯನ್ನು ಕುರ್ಚಿಯ ಬೆನ್ನಿನ ಮತ್ತು ಪೆಟ್ಟಿಗೆಯ ತುದಿಯ ನಡುವೆ ಇಡಲಾಯಿತು; ಸೇವಕರ ವಸತಿಗಳಿಂದ ಇಸ್ತ್ರಿಯ ವಾಸನೆ ತೂರಿ ಬರುತ್ತಿತ್ತು.

'ಇಗೋ ನೋಡಿ, ಅಮ್ಮ ನೀವು ಆಶೆಯನ್ನೆ ಕಳೆದುಕೊಂಡಿದ್ದಿರಿ' ಎಂದು ಮೆತ್ರೋನ ಇಸ್ತ್ರಿಪೆಟ್ಟಿಗೆಯನ್ನು ತೋರಿಸುತ್ತ ನುಡಿದಳು. ಹುಲ್ಲುರಟ್ಟುಗಳಿಂದ ಸ್ನಾನದ ಮನೆಗೆ ಚಾವಣಿಯನ್ನು ಹೊದಿಸಿದರು. ಲಿಲಿ ಹೊಸ ಸ್ನಾನದ ಮನೆಯಲ್ಲಿ ಖುಷಿಯಾಗಿ ವಿಹಾಯುತ್ತಿದ್ದಳು. ಡಾಲಿಯ ಗ್ರಾಮಜೀವನದ ಕನಸು ಭಾಗಶಃ ಸಿದ್ಧಿಸಿದಂತಾಯಿತು. ಸಂಪೂರ್ಣ ನೆಮ್ಮದಿಯನ್ನಲ್ಲದಿದ್ದರೂ, ಅವಳು ತಕ್ಕಮಟ್ಟಿಗೆ ಅನುಕೂಲಗಳನ್ನನುಭವಿಸು ವಂತಾಯಿತು. ಆರು ಮಕ್ಕಳಿರುವಾಗ ಅವಳಿಗೆ ನೆಮ್ಮದಿ ಹೇಗೆ ಸಾಧ್ಯ? ಅವರಲ್ಲೊಬ್ಬ ಖಾಯಿಲೆ ಬಿದ್ದರೆ, ಮತ್ತೊಬ್ಬನಿಗೆ ಖಾಯಿಲೆಯ ಲಕ್ಷಣಗಳಿದ್ದುವು; ಒಬ್ಬಳ ಅಗತ್ಯ ಪೂರೈಕೆಯಾಗದಿದ್ದರೆ, ಮತ್ತೊಬ್ಬಳು ಸಿಡುಕುಗುಳಿಯಾಗುತ್ತಿದ್ದಳು. ಒಂದೆರಡುದಿನ ನೆಮ್ಮದಿ ದೊರೆತದ್ದಾದರೆ ಅದೇ ಹೆಚ್ಚು. ಆ ನೆಮ್ಮದಿ ಸಹ ಅವಳ ಪಾಲಿಗೆ ಅಪರೂಪ ವಾಗಿತ್ತು. ಮಕ್ಕಳ ಪಾಲನೆ ಪೋಷಣೆಗಳು ಮತ್ತು ಅವರ ಬಗೆಗಿನ ಕಾತರತೆಯೇ ಅವಳ ಪಾಲಿಗೊದಗುತ್ತಿದ್ದ ಸುಖವಾಗಿತ್ತು. ಆ ಮಕ್ಕಳಿಲ್ಲದಿದ್ದರೆ, ಅವಳು ಒಂಟಿತನದ ದುಃಖವನ್ನನುಭವಿಸಬೇಕಾಗಿತ್ತು. ತನ್ನನ್ನು ಪ್ರೀತಿಸದ ಗಂಡನ ಚಿಂತೆಯಲ್ಲಿಯೇ ಅವಳು ಯಾತನಾಮಯ ದಿನಗಳನ್ನು ನೂಕಬೇಕಾಗುತ್ತಿತ್ತು. ಮಕ್ಕಳು ಖಾಯಿಲೆ ಬೀಳಬಹುದೆಂಬ, ಹಾಗೂ ಅಡ್ಡದಾರಿ ಹಿಡಿಯಬಹುದೆಂಬ ಚಿಂತೆ ಅವಳನ್ನು ಸದಾ ಕಾಡುತ್ತಿದ್ದರೂ, ಆ ಚಿಂತೆಯಲ್ಲಿಯೇ ಅಸಹನೀಯ ಜೀವನವನ್ನು ನಡಸಬೇಕಾಗಿದ್ದರೂ, ಆ ಮಕ್ಕಳ ಸಂಪರ್ಕ ಸಾನ್ನಿಧ್ಯಗಳೇ ಅವಳ ದುಃಖಕ್ಕೆ ಅಮೃತಾಂಜನಗಳಾಗಿದ್ದುವು. ಆ ಸುಖ ಸಂತೋಷಗಳು ಎಷ್ಟು ಅಲ್ಪವಾಗಿದ್ದುವೆಂದರೆ, ಮರಳೊಳಗಿನ ಚಿನ್ನದಂತೆ ಕಂಡೂ ಕಾಣದಂತೆ ಮರೆಯಾಗುತ್ತಿದ್ದುವು. ಕೆಟ್ಟ ಕ್ಷಣಗಳಲ್ಲಿ ಬರಿಯ ಮರಳು, ಕೇವಲ ಯಾತನೆಯೇ ಅವಳಿಗೆ ಕಾಣಿಸುತ್ತಿದ್ದುವು. ಒಮ್ಮೊಮ್ಮೆ ಚಿನ್ನದಂತೆ, ಸಂತೋಷ ವನ್ನು ಕಾಣುವ ಶುಭಕ್ಷಣಗಳನ್ನು ಸಹ ಅವಳು ಕಂಡದ್ದುಂಟು.

ಗ್ರಾಮ ಜೀವನದ ಏಕಾಕಿತನದಲ್ಲೀಗ ಈ ಸುಖ ಶಾಂತಿಗಳ ಅರಿವು ಅವಳಿಗೆ ದಿನೇ ದಿನೇ ಹೆಚ್ಚು ಮನದಟ್ಟಾಗ ತೊಡಗಿತು. ತನ್ನ ವಿವೇಚನೆ ದೋಷಯುಕ್ತ ವಾಗಿತ್ತೆಂದೂ, ತಾಯಿಯಾಗಿ ತನ್ನ ಮಕ್ಕಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರೀಕ್ಷಿಸ ಲಾಗಲಿಲ್ಲವೆಂದೂ ತನ್ನ ಮಕ್ಕಳ ಕಡೆಗೆ ಗಮನ ಹರಿಸಿದಾಗಲೆಲ್ಲ ಅವಳು ಯೋಚಿಸು ತ್ತಿದ್ದಳು. ಆದರೂ ತನ್ನ ಮಕ್ಕಳಲ್ಲೊಂದು ಸಮ್ಮೋಹಕ ಶಕ್ತಿಯಿದೆ ಎಂಬ ಭಾವನೆಯಂತು ಅವಳ ಮನಸ್ಸಿನಲ್ಲಿ ಬಲವಾಗಿ ಬೇರೂರಿತ್ತು. ಪ್ರತಿಯೊಂದಂಶದಲ್ಲಿಯೂ ಪರಸ್ಪರ ಭಿನ್ನರಾಗಿದ್ದ ಆ ಆರುಮಂದಿ ಮಕ್ಕಳು ಅಪರೂಪದ ಬಗೆಯವರಾಗಿದ್ದರು; ತಮ್ಮ

ತಾಯಿಯ ಸುಖಸಂತೋಷಗಳಿಗೆ ಆಗರವಾಗಿದ್ದರು. ತಾಯಿ ಸಹ ತನ್ನ ಮಕ್ಕಳ ಬಗ್ಗೆ ಹೆಮ್ಮೆಯಿಂದಿದ್ದಳು.

೮

ಮೇ ತಿಂಗಳ ಕೊನೆಯ ಹೊತ್ತಿಗೆ ಡಾಲಿಯ ಗ್ರಾಮ ಜೀವನ ಹೆಚ್ಚುಕಡಮೆ ಸುಸೂತ್ರವಾಗಿ ನಡೆಯುತ್ತಿತ್ತು. ಹಳ್ಳಿಯಲ್ಲಿ ತಾನೆದುರಿಸಬೇಕಾಗಿದ್ದ ಅಸಾನುಕೂಲಗಳನ್ನು ಕುರಿತು ಬರೆದಿದ್ದ ಕಾಗದಕ್ಕೆ ಉತ್ತರವಾಗಿ ತನ್ನ ಗಂಡನಿಂದ ಉತ್ತರವೂ ಬಂತು. ಕೌಟುಂಬಿಕ ವ್ಯವಸ್ಥೆಯ ಕಡೆಗೆ ಗಮನ ಕೊಡಲಾಗದಿದ್ದುದಕ್ಕಾಗಿ ಅವನವಳ ಕ್ಷಮೆಯನ್ನು ಯಾಚಿಸಿ, ಪ್ರಥಮಾವಕಾಶ ದೊರೆತಕೂಡಲೇ ತಾನವಳ ಬಳಿಗೆ ಬಂದುಬಿಡುವುದಾಗಿ ವಾಗ್ದಾನ ಮಾಡಿದ್ದನು. ಈ ಅವಕಾಶ ಒದಗಿ ಬರಲಿಲ್ಲ. ಜೂನ್ ತಿಂಗಳ ಪ್ರಾರಂಭದ ತನಕ ಡಾಲಿ ಎರ್ಗುಶೋವೊನಲ್ಲಿ ಏಕಾಕಿಯಾಗಿದ್ದಳು.

ಮಕ್ಕಳೆಲ್ಲರೂ ಧಾರ್ಮಿಕ ವಿಧಿಗಳನ್ನು ಆಚರಿಸಲೆಂಬ ಉದ್ದೇಶದಿಂದ ಸಂತ ಪೀಟರ್ ಉತ್ಸವದ ಭಾನುವಾರದಂದು ಅವಳು ಚರ್ಚಿಗೆ ಹೋದಳು. ಡಾಲಿಯ ಮಾತುಕತೆ ಆಧ್ಯಾತ್ಮಿಕ ಮತ್ತು ತಾತ್ವಿಕ ವಿಷಯಗಳ ಕಡೆಗೆ ತಿರುಗಿದಾಗ, ಮತೀಯ ಸಂಗತಿಗಳ ಬಗ್ಗೆ ಅವಳು ವ್ಯಕ್ತಪಡಿಸುತ್ತಿದ್ದ ಸ್ವತಂತ್ರ ವಿಚಾರಶಕ್ತಿ ಅನೇಕವೇಳೆ ಅವಳ ತಾಯಿ, ತಂಗಿ ಮತ್ತು ಗೆಳೆಯರನ್ನು ಬೆರಗುಗೊಳಿಸಿತ್ತು. ಸಂಪ್ರದಾಯ ಬದ್ಧವಾದ ನಂಬಿಕೆಗಳೇನೇ ಇರಲಿ, ದೇಹಾಂತರ ಪ್ರವೇಶದ ಬಗ್ಗೆ ಡಾಲಿ ತನ್ನದೇ ಆದ ವಿಚಿತ್ರ ಸಿದ್ಧಾಂತವನ್ನು ರೂಪಿಸಿಕೊಂಡಿದ್ದಳಲ್ಲದೆ, ಅದನ್ನು ದೃಢವಾಗಿ ನಂಬಿಕೊಂಡಿದ್ದಳು. ಆದರೆ ತನ್ನ ಕುಟುಂಬದ ಸಮೇತ ಅವಳು ಕೇವಲ ತೋರ್ಕೆಗೆ ಮಾತ್ರವಲ್ಲ ಹೃತ್ಪೂರ್ವಕವಾಗಿ ಚರ್ಚಿನ ವಿಧಿಪದ್ಧತಿಗಳಿಗೆ ಕಟ್ಟುನಿಟ್ಟಾಗಿ ಬದ್ಧಳಾಗಿದ್ದಳು. ಸುಮಾರು ಒಂದು ವರ್ಷದಿಂದ ತನ್ನ ಮಕ್ಕಳು ಮತೀಯ ಸಂಸ್ಕಾರಗಳಲ್ಲಿ ಭಾಗವಹಿಸಿರಲಿಲ್ಲವಾದ್ದರಿಂದ ಅವಳು ತುಂಬ ಚಿಂತೆಗೀಡಾಗಿದ್ದಳು. ಈ ಬೇಸಗೆ ವೇಳೆಯಲ್ಲಿ ಹಳ್ಳಿಯಲ್ಲಿಯೇ, ಮೆತ್ರೋನಳ ಪೂರ್ಣಾನುಮೋದನೆಯೊಡನೆ ಅವುಗಳನ್ನು ನೆರವೇರಿಸಬೇಕೆಂದು ಡಾಲಿ ನಿಶ್ಚಯಿಸಿಕೊಂಡಳು.

ಆ ಉತ್ಸವಕ್ಕೆ ಮುಂಚೆ ಕೆಲವು ದಿನಗಳ ತನಕ ಅವಳು ಮಕ್ಕಳಿಗೆ ಬಟ್ಟೆ ಬರೆಗಳನ್ನು ಅಣಿಗಟ್ಟುವುದರಲ್ಲಿ ನಿರತಳಾಗಿದ್ದಳು. ಉಡುಪುಗಳನ್ನು ಹೊಲಿಸಿದಳು, ಸರಿಪಡಿಸಿದಳು, ಒಗೆಸಿ ಚೆಲುವೆ ಮಾಡಿಸಿದಳು, ಅಂಚುಗಳ ಹೊಲಿಗೆಯನ್ನು ಬಿಚ್ಚಿ ಉದ್ದಮಾಡಿಸಿದಳು, ನಿರಿಪಟ್ಟಿಗಳನ್ನು ಸೇರಿಸಿದಳು, ಗುಂಡಿಗಳನ್ನು ಹಾಕಿಸಿದಳು, ಅಲಂಕಾರದ ಪಟ್ಟಿಗಳನ್ನು ಸಿದ್ಧಪಡಿಸಿದಳು. ಇಂಗ್ಲಿಷ್ ಉಪಾಧ್ಯಾಯಿನಿ ತನ್ಯಳ ಉಡುಪಿನ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಳು. ಆದರೆ ಆ ಉಡುಪು ಡಾಲಿಗೆ ಬಿಡಿಸಲಾರದ ಸಮಸ್ಯೆಯಾಯಿತು.

ಇಂಗ್ಲಿಷ್ ಮಹಿಳೆ ತಪ್ಪು ತಪ್ಪಾಗಿ ನಿರಿಗಳನ್ನು ಹೊಲಿದಳು; ಅಂಚುಗಳನ್ನು ಯದ್ವಾ ತದ್ವಾ ಹೊಲಿದು, ಇಡೀ ಉಡುಪನ್ನು ಕೆಡಿಸಿಬಿಟ್ಟಳು. ಅದು ತನ್ಯಳ ಭುಜಗಳ ಮೇಲೆ ಎಷ್ಟು ವಿಕಾರವಾಗಿ ಕುಳಿತುಕೊಂಡಿತೆಂದರೆ, ಅದನ್ನು ನೋಡಿದರೇನೇ ಮನಸ್ಸಿಗೆ ನೋವಾಗುತ್ತಿತ್ತು. ಸದ್ಯ ಮೆತ್ರೋನ ಮೂಲೆಪಟ್ಟಿಗಳನ್ನು ಕೊಟ್ಟು ಹೊಲಿದು

ಅಂದಗೊಳಿಸಿದಳು. ಉಡುಪು ಸರಿಹೋದರೂ, ಅದೇ ಕಾರಣವಾಗಿ ಇಂಗ್ಲಿಷ್ ಮಹಿಳೆಯೊಡನೆ ಜಗಳ ಕಾಯಬೇಕಾಯಿತು. ಅಂತು ಬೆಳಗಿನ ಹೊತ್ತಿಗೆ ಎಲ್ಲವೂ ಸಿದ್ಧವಾಯಿತು; ಪ್ರಾರ್ಥನೆ ಪ್ರಾರಂಭಿಸಬೇಕೆಂದು ಪುರೋಹಿತನಿಗೆ ನಿಗದಿಮಾಡಿದ್ದ ವೇಳೆಗೆ, ಅಂದರೆ ಒಂಬತ್ತು ಗಂಟೆಯ ಹೊತ್ತಿಗೆ ಉತ್ಸವದ ಸಡಗರದಲ್ಲಿ ಹೊಳೆಯುತ್ತಿದ್ದ ಮಕ್ಕಳು ತಮ್ಮ ತಾಯಿಗಾಗಿ ಕಾಯುತ್ತ, ವಾಹನದ ಪಕ್ಕದಲ್ಲಿ ಸೋಪಾನಗಳ ಮೇಲೆ ನಿಂತಿದ್ದರು.

ಡಾಲಿಯ ಪ್ರಸಾಧನ ಕಾರ್ಯ ತುಸು ವಿಲಂಬವಾಯಿತು. ಕೊನೆಗವಳು ಬಿಳಿಯ ಮಸ್ಲಿನ್ ಉಡುಪನ್ನು ಧರಿಸಿ, ಹೊರಗೆ ಬಂದು, ಗಾಡಿಯೇರಿದಳು. ಮೆತ್ರೋನಳ ಪ್ರಯತ್ನದಿಂದಾಗಿ, ತಂಟೆಕೋರ ಕುದುರೆ ರಾವೆನ್‌ಗೆ ಬದಲಾಗಿ ಪಾರು ಪತ್ಯಗಾರನ ಬ್ರೌನಿಯನ್ನು ಬಂಡಿಗೆ ಹೂಡಲಾಗಿತ್ತು.

ಸಂಭ್ರಮ ಸಡಗರಗಳಿಂದ ಹಾಗೂ ಜಾಗರೂಕತೆಯಿಂದ ಡಾಲಿ ಉಡುಪು ತೊಟ್ಟು, ತನ್ನ ಕೂದಲನ್ನಲಂಕರಿಸಿಕೊಂಡಿದ್ದಳು. ಹಿಂದೆ ಅವಳು ತನ್ನ ಸಲುವಾಗಿ, ಚೆಂದಾಗಿ ಕಾಣಬೇಕೆಂಬ ತವಕದಿಂದ, ಜನ ಮೆಚ್ಚಲೆಂಬ ದೃಷ್ಟಿಯಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದಳು. ವಯಸ್ಸು ಹೆಚ್ಚಿದಂತೆಲ್ಲ, ಚೆನ್ನಾಗಿ ಕಾಣಬೇಕೆನ್ನುವ ಆಸೆ ಹಿಂಗಿಹೋಯಿತು; ತನ್ನ ಸೌಂದರ್ಯ ಎಷ್ಟುಬೇಗ ಮಾಸಿಹೋಗುತ್ತಿತ್ತೆಂಬುದು ಅವಳಿಗನುಭವವಾಗುತ್ತಿತ್ತು. ಆಕರ್ಷಕವಾಗಿ ಕಾಣಬೇಕೆನ್ನುವ ಆಶೆ ಈ ದಿನ ಮತ್ತೆ ಕುಡಿಯೊಡೆದು, ಸಂತೋಷ ಸಂಭ್ರಮಗಳಿಂದ ಅವಳು ಕೈಗೈದುಕೊಂಡಿದ್ದಳು. ಈ ದಿನ ಅವಳು ಅಲಂಕಾರಮಾಡಿಕೊಂಡಿದ್ದು ತನ್ನ ಸಲುವಾಗಿ ಅಲ್ಲ, ಚೆನ್ನಾಗಿ ಕಾಣುವ ಸಲುವಾಗಿಯೂ ಅಲ್ಲ; ಚೇತೋಹಾರಿ ಮಕ್ಕಳ ತಾಯಿಯಾಗಿ ಒಟ್ಟಂದವನ್ನು ಕೆಡಿಸಬಾರದೆಂಬ ಉದ್ದೇಶದಿಂದ ಕೊಟ್ಟಕೊನೆಯದಾಗಿ ಅವಳು ಸ್ವರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡಾಗ ತುಂಬ ಸಂತುಷ್ಟಳಾದಳು. ಅವಳು ಚಿತ್ತಾಕರ್ಷಕಳಾಗಿದ್ದಳು. ಹಿಂದಿನ ಕಾಲದಲ್ಲಿ ನೃತ್ಯಗೋಷ್ಠಿಗಳಲ್ಲಿ ಪಾಲ್ಗೊಳ್ಳುತ್ತಿದ್ದಾಗ ಎಂಥ ಸೌಂದರ್ಯವತಿಯಾಗಿರಬೇಕೆಂದು ಅವಳು ಹಂಬಲಿಸುತ್ತಿದ್ದಳೋ ಅಂಥ ಸೌಂದರ್ಯವಿರದಿದ್ದರೂ, ಅವಳ ಉದ್ದೇಶ ಸಾಧನೆಗಾಗಿ ಎಷ್ಟು ಬೇಕೋ ಅಷ್ಟಂತು ಈಗ ಇತ್ತು.

ರೈತರು, ಸೇವಕರು, ಅವರ ಜೊಂಗಸರು ಹೊರತಾಗಿ ಚರ್ಚಿನಲ್ಲಿ ಬೇರೆ ಯಾರೂ ಇರಲಿಲ್ಲ. ಆದರೆ ತಾನು ಮತ್ತು ತನ್ನ ಮಕ್ಕಳು ಕಾಣಿಸಿಕೊಂಡ ಕೂಡಲೇ ಅವರ ಮುಖಗಳಲ್ಲಿ ಹರ್ಷ ತುಳುಕುತ್ತಿದ್ದಂತೆ ಡಾಲಿಗೆ ಕಂಡಿತು; ಅಥವಾ ಅದನ್ನು ಕಂಡಂತೆ ಭಾವಿಸಿಕೊಂಡಳು. ರಜೆಯ ಉಡುಪಿನಲ್ಲಿ ಮಕ್ಕಳು ರಮ್ಯವಾಗಿ ಕಾಣುತ್ತಿದ್ದರಲ್ಲದೆ, ಒಳ್ಳೆಯ ರೀತಿಯಿಂದ ವರ್ತಿಸುತ್ತಿದ್ದರು. ಅಲ್ಯೋಷ ನೆಟ್ಟಗೆ ನಿಲ್ಲಲಿಲ್ಲ, ನಿಜ; ಅವನು ಮತ್ತೆ ಮತ್ತೆ ಹಿಂದಕ್ಕೆ ತಿರುಗಿ, ಬೆನ್ನಿನ ಕಡೆಯಿಂದ ತನ್ನ ಸಣ್ಣ ಜಾಕೀಟನ್ನು ನೋಡಲು ಪ್ರಯತ್ನಿಸುತ್ತಿದ್ದನು; ಆದರೂ ಅವನು ತುಂಬ ಪ್ರಿಯವಾಗಿದ್ದನು. ತನ್ಯ ವಯಸ್ಸಾದವಳಂತೆ ವರ್ತಿಸುತ್ತ, ಸಣ್ಣವರನ್ನು ನೋಡಿಕೊಳ್ಳುತ್ತಿದ್ದಳು. ಎಲ್ಲವನ್ನು ಮುಗ್ಧತೆಯಿಂದ ಬೆರಗಿನಿಂದ ನೋಡುತ್ತಿದ್ದ ಲಿಲಿ ಚೇತೋಹಾರಿಯಾಗಿದ್ದಳು. ಧಾರ್ಮಿಕ ವಿಧಿ ಮುಗಿದನಂತರ, 'ಇನ್ನೂ ಒಂದಿಷ್ಟು ಬೇಕು' ಎಂದು ಇಂಗ್ಲಿಷಿನಲ್ಲವಳು ನುಡಿದಾಗ, ಸುತ್ತಲಿದ್ದವರಿಗೆ ನಗೆ ತಡೆಯುವುದೆ ಕಷ್ಟವಾಯಿತು.

ಪವಿತ್ರವಾದ ಘಟನೆಯೊಂದು ನಡೆದಂತೆ ಅನುಭವವಾಗಿ, ಮನೆಗೆ ಮರಳಿದಾಗ ಮಕ್ಕಳು ತುಂಬ ಗಂಭೀರವಾಗಿದ್ದರು.

ಆ ದಿನ ಮನೆಯಲ್ಲೆಲ್ಲವೂ ನಿರ್ವಿಘ್ನವಾಗಿ ಸಾಗುತ್ತಿತ್ತು; ಆದರೆ ಗ್ರಿಷ ಊಟದ ಸಮಯದಲ್ಲಿ ಸಿಳ್ಳೆಹಾಕಿದ್ದಲ್ಲದೆ, ಆಂಗ್ಲ ಉಪಾಧ್ಯಾಯಿನಿಯ ಮುಂದೆ ಅವಿಧೇಯತೆಯಿಂದ ನಡೆದುಕೊಂಡನು. ಅದರಿಂದಾಗಿ ಹಣ್ಣು ಹೂರಣಗಡುಬು ಅವನಿಗೆ ದೊರಕದಂತಾಯಿತು. ಡಾಲಿಯೇನಾದರೂ ಅಲ್ಲಿದ್ದದ್ದೆ ಆದರೆ, ಅಂಥ ಪವಿತ್ರ ದಿನದಂದು ಯಾರಿಗೂ ಶಿಕ್ಷೆಯಾಗದಂತೆ ನೋಡಿಕೊಳ್ಳುತ್ತಿದ್ದಳು. ಆದರೆ ಅವಳು ಉಪಾಧ್ಯಾಯಿನಿಯ ಪಕ್ಷವನ್ನು ವಹಿಸಿಕೊಂಡು, ಅವಳ ನಿರ್ಣಯವನ್ನು ದೃಢೀಕರಿಸಬೇಕಾಗಿತ್ತು. ಇದರಿಂದಾಗಿ ಅಂದಿನ ಆನಂದದ ವಾತಾವರಣಕ್ಕೆ ರಾಹು ಹಿಡಿದಂತಾಯಿತು. ನಿಕೋಲಾಯ್ ಸಿಳ್ಳೆಹಾಕಿದರೂ ಅವನನ್ನು ಶಿಕ್ಷೆಗೆ ಗುರಿಮಾಡಲಿಲ್ಲವೆಂದೂ ಸಿಹಿ ಕಡುಬಿಗಾಗಿ ತಾನು ಅಳುತ್ತಿರಲಿಲ್ಲವೆಂದೂ, ಅದು ತನಗೆ ತೃಣಸಮಾನವೆಂದೂ, ತನಗೆ ಕೊಟ್ಟ ಶಿಕ್ಷೆ ನ್ಯಾಯವಾದುದಲ್ಲವೆಂದೂ ಗ್ರಿಷ ರೋದಿಸಿದನು, ಇದರಿಂದ ವ್ಯಾಕುಲಗೊಂಡ ಡಾಲಿ ಆಂಗ್ಲ ಉಪಾಧ್ಯಾಯಿನಿಯ ಬಳಿಗೆ ಹೋಗಿ, ಅವನನ್ನು ಕ್ಷಮಿಸುವಂತೆ ಕೇಳಿಕೊಳ್ಳುವುದಾಗಿ ನಿಶ್ಚಯಿಸಿಕೊಂಡಳು. ಆದರವಳು ಅಂಗಳದಲ್ಲಿ ಗಮಿಸುತ್ತಿದ್ದಾಗ ಕಂಡ ದೃಶ್ಯದಿಂದಾಗಿ ಅವಳ ಕಣ್ಣುಗಳಲ್ಲಿ ಹರ್ಷಾಶ್ರು ತುಂಬಿತುಳುಕಿತು; ಅವಳೆಯೆ ಆ ಪುಟ್ಟ ತಪ್ಪಿತಸ್ಥನನ್ನು ಮನ್ನಿಸಿದಳು.

ದೊಡ್ಡ ಅಂಗಳದ ಮೂಲೆಯಲ್ಲಿ ಕಿಟಕಿಯ ಬಡುವಿನ ಮೇಲೆ ಅವನು ಕುಳಿತಿದ್ದುದನ್ನು ತಾಯಿ ಗಮನಿಸಿದಳು. ತಟ್ಟೆ ಹಿಡಿದುಕೊಂಡಿದ್ದ ತನ್ಯ ಅವನ ಪಕ್ಕದಲ್ಲಿ ನಿಂತಿದ್ದಳು. ತನ್ನ ಬೊಂಬೆಗಳಿಗೆ ತಿಂಡಿಯೂಡಬೇಕೆಂಬ ನೆವವೊಡ್ಡಿ, ತನ್ಯ ತನ್ನ ಕಡುಬನ್ನು ಶಿಶುಮಂದಿರಕ್ಕೆ ಕೊಂಡೊಯ್ಯಲು ಉಪಾಧ್ಯಾಯಿನಿಯ ಅನುಮತಿ ಪಡೆದುಕೊಂಡಿದ್ದಳು. ಅವನು ಕಡುಬನ್ನು ತಿನ್ನುತ್ತ, ಅನ್ಯಾಯದ ಶಿಕ್ಷೆಯ ಬಗ್ಗೆ ರೋದಿಸುತ್ತಿದ್ದನು. 'ನೀನೂ ತಿನ್ನು. ನಾವು ಒಟ್ಟಿಗೆ ತಿನ್ನೋಣ....ಒಟ್ಟಿಗೆ' ಎಂದವನು ಗದ್ಗದಗಳ ನಡುವೆ ನುಡಿಯುತ್ತಿದ್ದನು.

ಮೊದಮೊದಲು ಗ್ರಿಷನ ಬಗ್ಗೆ ತನ್ಯಳಿಗೆ ಮರುಕ ಮೂಡಿತು; ಅನಂತರ ಉಪಕಾರ ಬುದ್ಧಿ ಮೊಳೆಯಿತು; ಈಗವಳ ಕಣ್ಣುಗಳಲ್ಲಿ ನೀರು ಮುಕ್ಕುಳಿಸುತ್ತಿತ್ತು. ಇದರಿಂದಾಗಿ ಅವಳು ಕಡುಬನ್ನು ಮರೆಯಲಿಲ್ಲ; ತನ್ನ ಪಾಲನ್ನು ಕಬಳಿಸಿದಳು.

ತಮ್ಮ ತಾಯಿಯನ್ನು ಕಂಡೊಡನೆ ಇಬ್ಬರೂ ಭಯಚಕಿತರಾದರು; ತಾನು ಮಾಡುತ್ತಿದ್ದುದು ಸರಿಯೆಂದು ತಾಯಿಯ ಮುಖಭಾವದರ್ಶನದಿಂದ ಗ್ರಹಿಸಿದರು; ಕೂಡಲೇ ನಗುವಿನ ಕಟ್ಟೆಯೊಡೆಯಿತು. ಬಾಯಿಗಳಲ್ಲಿ ತುಂಬಿಕೊಂಡಿದ್ದ ಕಡುಬು ಹೊರಗೆ ಇಣುಕುತ್ತಿತ್ತು; ಅವರು ತಮ್ಮ ಕಿರುಸಗೆದುಟಿಗಳನ್ನು ಮುಂಗೈಯ್ಯಗಳಿಂದೊರಸಿಕೊಂಡರು; ಹಾಗೆ ಒರಸಿಕೊಳ್ಳುವಾಗ ಹೊಳೆಹೊಳೆಯುವ ಅವರ ಮುಖಗಳ ಮೇಲೆ ಹಣ್ಣಿನ ರಸ ಮತ್ತು ಕಣ್ಣೀರು ಅಂಟಿಕೊಂಡುವು.

'ಅಯ್ಯೋ ದೇವರೆ! ಹೊಸ ಬಟ್ಟೆಗಳು ಹೋದುವಲ್ರೊ! ತನ್ಯ, ಗ್ರಿಷ' ಎಂದು ತಾಯಿ ಕೂಗಿಕೊಂಡಳು; ಅವರ ಬಟ್ಟೆಗಳು ಕೊಳೆಯಾಗದಂತೆ ತಡೆಯಲು ಪ್ರಯತ್ನಿಸಿ

ದಳು. ಅವಳ ಕಣ್ಣುಗಳಲ್ಲಿ ಮಂದಹಾಸದ, ಆನಂದ ಪರವಶತೆಯ ಅಶ್ರು ತುಳುಕಿದುವು.

ಹೊಸ ಬಟ್ಟೆಗಳನ್ನು ಕಳಚಿ, ಹುಡುಗಿಯರಿಗೆ ರವಿಕೆಗಳನ್ನೂ ಹುಡುಗರಿಗೆ ಹಳೆಯ ಜಾಕೀಟುಗಳನ್ನೂ ತೊಡಿಸುವಂತೆ ಅಣತಿ ನೀಡಲಾಯಿತು. ಅವರು ಅಣಬೆ ಬೇಟೆಗೆ ಮತ್ತು ವಿಹಾರಕ್ಕೆ ಹೋಗಲೆಂದು ಬಂಡಿಗೆ ಕುದುರೆಗಳನ್ನು (ಬ್ರೌನಿಯನ್ನು ಮೂಕಿಯ ನಡುವೆ ಹೂಡಲಾಗಿ ಪಾರುಪತ್ಯಗಾರನಿಗೆ ಖೇದವಾಯಿತು) ಕಟ್ಟಲಾಯಿತು. ಶಿಶು ಮಂದಿರದಲ್ಲಿದ್ದ ಆನಂದದ ಬೊಬ್ಬೆ ಹೊರಗೆ ಹೋಗುವತನಕ ನಿಲ್ಲಲಿಲ್ಲ.

ಒಂದು ಬುಟ್ಟಿ ಅಣಬೆಯನ್ನವರು ಸಂಗ್ರಹಿಸಿದರು. ಲಿಲಿಗೂ ಒಂದಣಬೆ ಸಿಕ್ಕಿತು. ಅಂದಿನ ತನಕ ಕುಮಾರಿ ಹಲ್‌ಳೇ ಅಣಬೆಗಳನ್ನು ಪತ್ತೆಮಾಡಿ, ಲಿಲಿಗೆ ತೋರಿಸುತ್ತಿದ್ದಳು. ಆದರೆ ಈ ದಿನ ಅವಳು ಮಜಬೂತಾದ ಅಣಬೆಯನ್ನು ಯಾರ ನೆರವೂ ಇಲ್ಲದೆ ಕಂಡುಕೊಂಡಿದ್ದಳು. 'ಲಿಲಿಯೊಂದು ಅಣಬೆ ಸಂಪಾದಿಸಿದಳು' ಎಂಬುದಾಗಿ ಆನಂದೋತ್ಸಾಹದಿಂದ ಘೋಷಿಸಿದರು.

ಅನಂತರ ಅವರು ಹೊಳೆಯ ದಂಡೆಗೆ ಸವಾರಿಸಿದರು; ಭೂರ್ಜವೃಕ್ಷಗಳ ಕೆಳಗೆ ಕುದುರೆಗಳನ್ನು ಬಿಟ್ಟು, ವಿಹರಿಯಲು ಹೋದರು. ಸೊಳ್ಳೆನೊಣಗಳ ಕಾಟಕ್ಕೊಳಗಾದ ಕುದುರೆಗಳನ್ನು ಗಾಡಿಯಾಳು ಟೆರಂಟೆ ಮರಕ್ಕೆ ಕಟ್ಟಿ, ಸಿಗರೇಟನ್ನು ಹಚ್ಚಿ, ಭೂರ್ಜ ವೃಕ್ಷದ ತಳದಲ್ಲಿ ಉದ್ದವಾಗಿ ಬೆಳೆದಿದ್ದ ಹುಲ್ಲಿನ ಮೇಲೆ ಮೈಚಾಚಿದನು. ಹೊಳೆಯ ಕಡೆಯಿಂದ ತನ್ನೆಡೆಗೆ ನಿರಂತರವಾಗಿ ಹರಿದು ಬರುತ್ತಿದ್ದ ಮಕ್ಕಳ ಆನಂದದ ಬೊಬ್ಬೆಗಳನ್ನು ಕೇಳಿಸಿಕೊಳ್ಳುತ್ತ ಅವನು ಬಿದ್ದುಕೊಂಡಿದ್ದನು.

ಅಷ್ಟೊಂದು ಮಕ್ಕಳನ್ನು ನೋಡಿಕೊಳ್ಳಲು ಹಾಗೂ ಅವರ ಚೇಷ್ಟೆಯನ್ನು ನಿಯಂತ್ರಿಸಲು ಶ್ರಮಸಾಧ್ಯವಾಗುತ್ತಿದ್ದರೂ, ಆ ಕಾಲ್ಚೀಲ, ಷರಾಯಿ ಮತ್ತು ಬೂಟುಗಳು ಯಾರು ಯಾರವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಲು, ಅವು ಬೆರಸಿಕೊಳ್ಳದಂತೆ ನೋಡಿಕೊಳ್ಳಲು, ಲೆಕ್ಕವಿಲ್ಲದಷ್ಟು ಗುಂಡಿ ಟೇಪು ಪಟ್ಟೆದಾರಗಳನ್ನು ಬಿಗಿಯಲು ತೆಗೆಯಲು ಬಿಚ್ಚಲು ಕಟ್ಟಲು ಕಷ್ಟವಾಗುತ್ತಿದ್ದರೂ, ನದೀಸ್ನಾನವನ್ನು ಮೆಚ್ಚುತ್ತಿದ್ದ, ಮಕ್ಕಳಿಗದು ತುಂಬ ಒಳ್ಳೆಯದೆಂದು ತಿಳಿದಿದ್ದ ಡಾಲಿ ಅವರನ್ನು ಹೊಳೆಗೆ ಕರೆದುಕೊಂಡು ಹೋಗುವಲ್ಲಿ ಅದ್ವಿತೀಯವಾದ ಆನಂದವನ್ನನುಭವಿಸುತ್ತಿದ್ದಳು.

ಅವರ ದುಂಡನೆಯ ಸಣ್ಣ ಕಾಲುಗಳನ್ನು ಹಿಡಿದು, ಅವರ ಕಾಲ್ಚೀಲಗಳನ್ನೆಳೆಯುವಲ್ಲಿ, ಅವರ ಬೆತ್ತಲೆಯ ಸಣ್ಣ ಮೈಗಳನ್ನು ತನ್ನ ತೋಳುಗಳಲ್ಲಪ್ಪಿಕೊಳ್ಳುವಲ್ಲಿ, ಅವರನ್ನು ನೀರಲ್ಲಿ ಮುಳುಗಿಸಿದಾಗ ಅವರ ಭಯದ ಅಥವಾ ಸಂತೋಷದ ಕಿರಿಚುಗಳನ್ನು ಕೇಳಿಸಿಕೊಳ್ಳುವಲ್ಲಿ, ಒಮ್ಮೆ ಹರ್ಷಿಸುವ, ಮತ್ತೊಮ್ಮೆ ಹೆದರುವ, ಆವೇಶದಿಂದ ಹಾರಾಡುವ ಒದರಾಡುವ ಬಟ್ಟೆಗಣ್ಣಿನ ಮುಖಗಳ, ಹೊಳೆಹೊಕ್ಕೆಯುವ ತನ್ನ ಕೂಸುಗಳನ್ನು ನೋಡುವಲ್ಲಿ ಅವಳು ಆನಂದಪರವಶಳಾಗಿ ಜಗವನ್ನೆ ಮರೆಯುತ್ತಿದ್ದಳು.

ಮಕ್ಕಳಲ್ಲಿ ಕೆಲವರು ತಂತಮ್ಮ ಬಟ್ಟೆಗಳನ್ನು ಹಾಕಿಕೊಳ್ಳುವಷ್ಟರಲ್ಲಿ ಗಿಡ ಮೂಲಿಕೆಗಳನ್ನು ಸಂಗ್ರಹಿಸುತ್ತಿದ್ದ, ಭಾನುವಾರದ ಉಡುಪನ್ನು ಧರಿಸಿದ್ದ, ಕೆಲವು ಮಂದಿ ರೈತ ಸ್ತ್ರೀಯರು ಸ್ನಾನಘಟ್ಟಕ್ಕೆ ಬಂದು, ಲಜ್ಜಾನ್ವಿತೆಯರಾಗಿ ಅವರನ್ನೆ

ನೋಡುತ್ತ ನಿಂತಿದ್ದರು. ಮಾತ್ರೋನ ಅವರಲ್ಲೊಬ್ಬಳನ್ನು ಕರೆದು ನೀರಿಗೆ ಬಿದ್ದು ಒದ್ದೆಯಾಗಿದ್ದ ಹಚ್ಚಡವನ್ನೂ ಷರಟನ್ನೂ ಒಣಗಲು ಹರಡುವಂತೆ ಹೇಳಿದಳು. ಡಾಲಿ ಆ ಹೆಂಗಸರೊಡನೆ ಮಾತಾಡತೊಡಗಿದಳು. ಮೊದಮೊದಲು ಆ ಹೆಂಗಸರು ಬಾಯಿಗೆ ಕೈ ಮರೆಮಾಡಿಕೊಂಡು ವ್ಯಂಗ್ಯವಾಗಿ ನಕ್ಕರು; ಡಾಲಿಯ ಮಾತು ಅವರಿಗರ್ಥವಾಗಲಿಲ್ಲ. ಆದರವರು ಬಹುಬೇಗ ಧೈರ್ಯ ತೆಗೆದುಕೊಂಡು ನಿಸ್ಸಂಕೋಚವಾಗಿ ಮಾತಾಡತೊಡಗಿದರು. ಡಾಲಿಯ ಮಕ್ಕಳನ್ನು ಹೃತ್ಪೂರ್ವಕವಾಗಿ ಪ್ರಶಂಸಿಸುವ ಮೂಲಕ ಆ ಹೆಂಗಸರು ಅವಳ ಮನಸ್ಸನ್ನು ಗೆದ್ದುಕೊಂಡರು.

'ಆಹ; ಎಂಥ ಚೆಲುವು! ಸಕ್ಕರೆಯಂತೆ ಬಿಳುಪು' ಎಂದವರಲ್ಲೊಬ್ಬಳು ತನ್ಯಳನ್ನೆ ಆಶ್ಚರ್ಯ ಕುತೂಹಲಗಳಿಂದ ನೋಡುತ್ತ, ತಲೆಯೊಲೆಯುತ್ತ ನುಡಿದಳು. 'ಆದರೆ ಇವಳೆಷ್ಟು ಸಪುರವಾಗಿದ್ದಾಳೆ!'

'ನಿಜ, ಅವಳು ಖಾಯಿಲೆಯಿಂದ ಮಲಗಿದ್ದಳು.'

'ಅವನೊ? ಅವನಿಗೂ ಸ್ನಾನ ಮಾಡಿಸಿದಿರೇನು?' ಎಂದು ಮತ್ತೊಬ್ಬಾಕೆ ಕೂಸಿನ ಕಡೆಗೆ ತೋರಿಸುತ್ತ ಕೇಳಿದಳು.

'ಇಲ್ಲ, ಇಲ್ಲ. ಅವನಿಗಿನ್ನೂ ಮೂರುತಿಂಗಳು' ಎಂದು ಡಾಲಿ ಹೆಮ್ಮೆಯಿಂದ ನುಡಿದಳು.

'ಹೌದೆ?'

'ನಿನಗೆ ಮಕ್ಕಳಿದ್ದಾರೆಯೆ?'

'ನಾಲ್ವರಿದ್ದರು. ಇಬ್ಬರು ಅಗಲಿ ಹೋದರು. ಇಬ್ಬರುಳಿದಿದ್ದಾರೆ: ಒಬ್ಬ ಹುಡುಗ, ಒಂದು ಹುಡುಗಿ. ವಸಂತಮಾಸದಲ್ಲವಳನ್ನು ಹಾಲು ಬಿಡಿಸಿದೆ'.

'ಅವಳಿಗೆಷ್ಟು ವಯಸ್ಸು?'

'ಇಪ್ಪತ್ತರಲ್ಲಿ ಎರಡು ತುಂಬುತ್ತದೆ.'

'ಅಷ್ಟು ದಿನವೇಕೆ ಅವಳಿಗೆ ಮೊಲೆಯೂಡಿದೆ?'

'ಇದು ನಮ್ಮ ಪದ್ಧತಿ—ಪೂರುಲೆಂಟ್ ಹಬ್ಬ ಬಂದು ಹೋಗುವತನಕ ಆ ಶುಶ್ರೂಷೆ ನಡೆಯಲೇಬೇಕು.'

ಡಾಲಿಗೆ ಪ್ರಿಯವಾದ ವಿಷಯದ ಕಡೆಗೆ ಸಂಭಾಷಣೆ ತಿರುಗಿತು: ನಿನ್ನ ಬಾಣಂತಿತನ ಹೇಗೆ ನಡೆಯಿತು? ಮಗುವಿಗೇನಾದರೂ ಖಾಯಿಲೆಯಾಯಿತೆ? ನಿನ್ನ ಗಂಡ ಎಲ್ಲಿದ್ದಾನೆ? ಅವನು ಆಗಾಗ್ಗೆ ಹೊರಗೆ ಹೋಗುತ್ತಾನೆಯೆ?'

ಆ ಹೆಂಗಸರನ್ನು ಬಿಟ್ಟು ಹೋಗಲು ಡಾಲಿಗೆ ಮನಸ್ಸಾಗಲಿಲ್ಲ. ಅವರೊಡನೆಯ ಮಾತುಕತೆಗಳಲ್ಲಿ ತುಂಬ ಆಸಕ್ತಿ ವಹಿಸಿದಳು; ಅವರ ಆಸಕ್ತಿಗಳು ಸಮಾನಾಗಿದ್ದುವು. ಡಾಲಿಗೆ ಅಷ್ಟೊಂದು ಮಂದಿ ಚುರುಕು ಮಕ್ಕಳಿದ್ದುದೇ ಅವಳ ಬಗೆಗೆ ಆ ಹೆಂಗಸರಲ್ಲಿ ಮೂಡಿದ ಗೌರವಕ್ಕೆ ಕಾರಣವಾಗಿತ್ತು. ಒಂದು ಸಂದರ್ಭದಲ್ಲಿ ರೈತಸ್ತ್ರೀಯರು ಡಾಲಿಯನ್ನು ನಗಿಸಿದರು; ಆಂಗ್ಲ ಉಪಾಧ್ಯಾಯಿನಿಯ ಮನಸ್ಸನ್ನು ನೋಯಿಸಿದರು. ತಾನೇ ಅವರ ನಗುವಿನ ಗುರಿಯೆಂದು ಉಪಾಧ್ಯಾಯಿನಿಗೆ ಗೊತ್ತಾಯಿತು; ಆದರೆ ಕಾರಣ ತಿಳಿಯಲಿಲ್ಲ. ಅವಳು ಬಟ್ಟೆ ತೊಟ್ಟುಕೊಳ್ಳುವುದನ್ನೆ ರೈತ ತರುಣಿಯೊಬ್ಬಳು ಬಿಟ್ಟ

ಕಣ್ಣಾಗಿ ನೋಡುತ್ತಿದ್ದಳು. ಅವಳು ಮೂರನೆಯ ಒಳಪಾವಡೆಯನ್ನು ಧರಿಸಿಕೊಳ್ಳು ವಾಗ 'ಅಬ್ಬ! ಒಂದರ ಮೇಲೊಂದು, ಮತ್ತೊಂದು, ಅದೆಷ್ಟು ಲಂಗಗಳನ್ನು ಸುತ್ತಿ ಕೊಳ್ಳುತ್ತಾಳೊ ಕಾಣೆ!' ಎಂದು ಆ ತರುಣಿ ನಗೆಯ ಕೋಲಾಹಲ ಎಬ್ಬಿಸಿದಳು ಎಲ್ಲರೂ ಗೊಳ್ಳೆಂದು ನಕ್ಕರು.

೯

ಈಜಾಟದ ತರುವಾಯ ಇನ್ನೂ ಕೂದಲು ಆರದಿದ್ದ ಮಕ್ಕಳ ನಡುವೆ, ಕೈಚೌಕ ದೊಳಗೆ ಕೂದಲು ಸೇರಿಸಿ ಕಟ್ಟಿಕೊಂಡು ಡಾಲಿ ಕುಳಿತಿದ್ದ ಗಾಡಿ ಮನೆಯನ್ನು ಸಮೀಪಿಸುತ್ತಿದ್ದಾಗ, ಗಾಡಿಯಾಳು 'ಯಾರೊ ಬರುತ್ತಿದ್ದಾರಮ್ಮ; ಪೊಕ್ರೊವ್ ಸ್ಕ್ಯಾಯ್ ಊರಿನವರೆಂದು ತೋರುತ್ತದೆ' ಎಂದು ನುಡಿದನು.

ಡಾಲಿ ಮುಂದುಗಡೆ ಇಣುಕಿ ನೋಡಿದಳು. ಬೂದುಬಣ್ಣದ ಟೊಪ್ಪಿಗೆಯನ್ನೂ, ಕೋಟನ್ನೂ ಧರಿಸಿದ, ತನ್ನ ಕಡೆಗೆ ಬರುತ್ತಿದ್ದ ಲೆವಿನ್‌ನ—ಪರಿಚಿತಾಕೃತಿಯ ಲೆವಿನ್—ನನ್ನು ಗುರುತಿಸಿದಾಗ ಅವಳಿಗೆ ತುಂಬ ಸಂತೋಷವಾಯಿತು. ಅವನು ಯಾವಾಗ ಬಂದರೂ ಅವಳಿಗೆ ಸಂತೋಷವಾಗುತ್ತಿತ್ತು. ಆದರೆ ತಾನಿಂದು ವೈಭವದ ಮಧ್ಯದಲ್ಲಿರು ವಾಗ ಅವನನ್ನು ಬರಮಾಡಿಕೊಳ್ಳುವಲ್ಲಿ ಅವಳಿಗೆ ಅತಿಶಯವಾದ ಆನಂದವಾಗುತ್ತಿತ್ತು. ಲೆವಿನ್‌ನಂತೆ ಅವಳ ವೈಭವವನ್ನು ಪ್ರಶಂಸಿಸುವವರು ಬೇರೆ ಯಾರೂ ಇರಲಿಲ್ಲ.

ತನ್ನ ಕನಸಿನ ಕೌಟುಂಬಿಕ ಜೀವನದ ಚಿತ್ರವನ್ನವನು ಅವಳಲ್ಲಿ ಕಾಣುತ್ತಿದ್ದನು.

'ಮರಿಗಳೊಡನಿರುವ ಕೋಳಿಯಂತಿದ್ದೀರಿ ನೀವು, ದರಿಯಾ ಅಲೆಕ್ಸಾಂಡ್ರೊವ್ನ.'

'ನಿಮ್ಮನ್ನು ನೋಡಿ ನನಗೆಷ್ಟು ಸಂತೋಷವಾಗಿದೆ ಗೊತ್ತೆ?' ಎಂದವಳು ಅವನ ಕೈಹಿಡಿದುಕೊಂಡು ನುಡಿದಳು.

'ನೀವೇನೋ ಹಾಗೆ ಹೇಳುತ್ತೀರಿ ಸರಿಯೆ. ನೀವಿಲ್ಲಿರುವುದನ್ನು ನನಗೆ ತಿಳಿಸ ಬಾರದಿತ್ತೆ? ನನ್ನ ಮಲಸೋದರ ಸದ್ಯ ನನ್ನೊಡನಿದ್ದಾನೆ. ನೀವಿಲ್ಲಿರುವ ವಿಷಯ ಸ್ಟೀವ್‌ನಿಂದ ಬಂದ ಪತ್ರದಿಂದ ತಿಳಿಯಿತು.'

'ಸ್ಟೀವ್ ಕಡೆಯಿಂದ ತಿಳಿಯಿತೆ?' ಎಂದವಳು ಆಶ್ಚರ್ಯದಿಂದ ಪುನರುಕ್ತಿಸಿದಳು.

'ಹೌದು, ನೀವು ಬಂದಿರುವುದಾಗಿ ಅವನೇ ಬರೆದಿದ್ದು. ಯಾವ ರೀತಿಯಲ್ಲಾದರೂ ನಾನು ನಿಮಗೆ ನೆರವಾಗಲು ಸಾಧ್ಯವೆ ಎಂದವನು ತಿಳಿಸಿದ್ದಾನೆ' ಎಂದು ನುಡಿಯು ತ್ತಿದ್ದಂತೆ ಲೆವಿನ್ ಗೊಂದಲಕ್ಕೀಡಾದನು. ಅಷ್ಟಕ್ಕೇ ಅವನು ಮಾತು ನಿಲ್ಲಿಸಿ, ಸದ್ದಿಲ್ಲದೆ ಗಾಡಿಯ ಬದಿಯಲ್ಲಿ ಹೆಜ್ಜೆ ಹಾಕುತ್ತ, ಲೈಮ್ ಮರದ ಕುಡಿಯನ್ನು ಕಿತ್ತು, ಅಗಿಯು ತ್ತಿದ್ದನು. ತನ್ನ ಗಂಡ ನೆರವು ನೀಡಬೇಕಾದ ಸಂದರ್ಭಗಳಲ್ಲಿ ಹೊರಗಿನ ಜನ ತಲೆ ಹಾಕಿದರೆ ಡಾಲಿಗೆ ಕೋಪ ಬರಬಹುದೆಂಬ ಭಯವೇ ಅವನ ಕಳವಳಕ್ಕೆ ಕಾರಣವಾಗಿತ್ತು. ಕೌಟುಂಬಿಕ ಜವಾಬ್ದಾರಿಯನ್ನು ಇತರರಿಗೆ ವರ್ಗಾಯಿಸಿದ ತನ್ನ ಗಂಡನ ನಡೆವಳಿ ಯಿಂದ ನಿಜಕ್ಕೂ ಅವಳಿಗೆ ಅಸಮಾಧಾನವಾಗಿತ್ತು. ತನ್ನ ಮನಸ್ಸು ಲೆವಿನ್‌ನಿಗೆ ಅರ್ಥ ವಾಯಿತೆಂದವಳು ಕೂಡಲೇ ಅರಿತುಕೊಂಡಳು. ಅವನ ಈ ಸೌಜನ್ಯಕ್ಕಾಗಿ ಹಾಗೂ ಸೂಕ್ಷ್ಮಗ್ರಹಣ ಶಕ್ತಿಗಾಗಿ ಅವಳವನನ್ನು ಪ್ರೀತಿಸುತ್ತಿದ್ದಳು.

'ನಾನು ಬಂದು ನೋಡಿದ್ದರಿಂದ ನಿಮಗೆ ಸಂತೋಷವಾಗುತ್ತದೆಂದು ನಾನು ಬಗೆದೆ. ನಿಮಗೆ ವಂದನೆ.' ಎಂದು ಲೆವಿನ್ ನುಡಿದನು. 'ಪಟ್ಟಣದ ಬದುಕಿಗೆ ಒಗ್ಗಿಕೊಂಡಿರುವ ನಿಮಗೆ ಇಲ್ಲಿಯ ಜೀವನ ತುಂಬ ಪ್ರಾಥಮಿಕ ಸ್ಥಿತಿಯಲ್ಲಿರುವಂತೆ ಕಾಣಬಹುದೆಂದು ನಾನು ಊಹಿಸಿಕೊಂಡಿದ್ದೇನೆ. ಆದ್ದರಿಂದ ನಿಮಗೇನಾದರೂ ಬೇಕೆನಿಸುವುದಾದರೆ, ನಾನು ನಿಮ್ಮ ಸೇವೆಗೆ ಸದಾ ಸಿದ್ಧನಾಗಿದ್ದೇನೆ.'

'ಓ, ನಿಮಗೆ ಧನ್ಯವಾದ. ಏನೂ ಬೇಕಾಗುವುದಿಲ್ಲ' ಎಂದು ಡಾಲಿ ಸೊಲ್ಲಿಸಿದಳು. 'ಮೊದಮೊದಲು ನಾವು ತುಂಬ ಗೊಂದಲದಲ್ಲಿದ್ದೆವು. ನನ್ನ ದಾದಿಯ ಸಹಾಯದಿಂದಾಗಿ ಬರಬರುತ್ತ ಎಲ್ಲವೂ ಸಲೀಸಾಗಿ ಸಾಗುತ್ತಿದೆ' ಎಂದವಳು ಮೆತ್ರ್ಯೋನಳನ್ನು ದೃಷ್ಟಿಯಲ್ಲಿಟ್ಟುಕೊಂಡು ನುಡಿದಳು. ತನ್ನ ಬಗ್ಗೆ ಅವರು ಮಾತಾಡಿಕೊಳ್ಳುತ್ತಿದ್ದರೆಂದು ಅರಿತ ಮೆತ್ರ್ಯೋನ ಲೆವಿನ್‌ನ ಕಡೆಗೆ ಸ್ನೇಹೋಲ್ಲಾಸದ ಮಂದ ಹಾಸ ಬೀರಿದಳು. ಅವಳವನನ್ನು ಬಲ್ಲವಳಾಗಿದ್ದಳು; ತಮ್ಮ ಕನ್ಯೆಗೆ ಅವನು ಅಪೇಕ್ಷಣೀಯ ಜೋಡಿಯಾಗುತ್ತಾನೆಂದು ತಿಳಿದಿದ್ದಳು; ಅವರ ಸಂಬಂಧ ಕುದುರಲೆಂದು ಹಾರೈಸುತ್ತಿದ್ದಳು.

'ಒಳಗೆ ಕುಳಿತುಕೊಳ್ಳಬಹುದಲ್ಲವೆ, ಬುದ್ಧಿ ?' ಎಂದವಳು ಅವನೊಡನೆ ನುಡಿದಳು. 'ಈ ಪಕ್ಕದಲ್ಲಿ ನಿಮಗೆ ಜಾಗಮಾಡಿಕೊಡುತ್ತೇವೆ.'

'ಬೇಡ, ಬೇಡ. ಧನ್ಯವಾದಗಳು. ನಾನು ನಡೆಯುತ್ತೇನೆ. ನಡಗೆಯಲ್ಲಿ ನನ್ನನ್ನು ಮಿರಾರಿಸುವ ಮಕ್ಕಳಿದ್ದರೆ ನನ್ನೊಡನೆ ಬರಲಿ'

ಮಕ್ಕಳಿಗೆ ಲೆವಿನ್‌ನ ವಿಷಯ ಸಾಕಷ್ಟು ತಿಳಿದಿರಲಿಲ್ಲ. ಅವನನ್ನು ನೋಡಿದಾಗ ಅವರಿಗೆ ನೆನಪಾಗಲಿಲ್ಲ. ಮಕ್ಕಳೊಡನೆ ಕೃತ್ರಿಮತೆಯಿಂದ ವರ್ತಿಸುವ ಹಿರಿಯರ ಬಗ್ಗೆ ಅವರು ಸಾಮಾನ್ಯವಾಗಿ ತಾಳುವ ವಿಚಿತ್ರ ಸಂಕೋಚ ಮತ್ತು ದ್ವೇಷಗಳನ್ನು ಲೆವಿನ್‌ನ ಮುಂದೆ ಪ್ರದರ್ಶಿಸಲಿಲ್ಲ. ಅಂಥ ಭಾವಗಳನ್ನು ಪ್ರದರ್ಶಿಸಿದಾಗ ಹಿರಿಯರು ಮಕ್ಕಳನ್ನು ಕೆಲವೊಮ್ಮೆ ಕ್ರೂರವಾಗಿ ದಂಡಿಸುವುದೂ ಉಂಟು. ಯಾವ ಕ್ಷೇತ್ರದಲ್ಲಾದರೂ ಕೃತ್ರಿಮತೆ ಅತ್ಯಂತ ಚತುರನೂ ಸೂಕ್ಷ್ಮಗ್ರಾಹಿಯೂ ಆದ ಮನುಷ್ಯನನ್ನು ವಂಚಿಸಬಹುದು; ಆದರೆ ಅದನ್ನೆಷ್ಟೇ ಬುದ್ಧಿವಂತಿಕೆಯಿಂದ ಮುಚ್ಚಿಕೊಂಡರೂ, ಅತ್ಯಂತ ದಡ್ಡ ಮಗುವೂ ಅದನ್ನು ಗುರುತಿಸಿ, ಅಸಹ್ಯ ಪಟ್ಟುಕೊಳ್ಳುತ್ತದೆ. ಲೆವಿನ್‌ನ ದೋಷಗಳೇನಿದ್ದರೂ, ಕೃತ್ರಿಮತೆಗೆ ಅವನು ಹೊರಗಾಗಿದ್ದನು. ಆದ್ದರಿಂದ ತಮ್ಮ ತಾಯಿಯ ಮುಖದಲ್ಲಿ ಕಂಡ ಸ್ನೇಹ ಭಾವವನ್ನೆ ಮಕ್ಕಳು ಸಹ ತಮ್ಮ ನಡೆನುಡಿಗಳಲ್ಲಿ ವ್ಯಕ್ತಪಡಿಸಿದುವು. ಲೆವಿನ್ ಕರೆದಕೂಡಲೇ ಹಿರಿಯ ಹುಡುಗರಿಬ್ಬರೂ ಗಾಡಿಯಿಂದ ಧುಮುಕಿ, ತಮ್ಮ ತಾಯಿ ಅಥವಾ ದಾದಿ ಅಥವಾ ಕುಮಾರಿ ಹಲ್‌ರೊಡನೆ ಸಲೀಸಾಗಿ ಕುಪ್ಪಳಿಸುವಂತೆ, ಅವನ ಪಕ್ಕದಲ್ಲಿ ಕುಪ್ಪಳಿಸುತ್ತಿದ್ದರು. ತಾನೂ ಅವರೊಡನೆ ಹೋಗುವುದಾಗಿ ಲಿಲಿ ಹಲ್ಲು ಗಿಂಜಿದಳು. ತಾಯಿ ಅವಳನ್ನವನ ಕೈಗೆ ಶಟಾಯಿಸಿದಳು. ಲೆವಿನ್ ಅವಳನ್ನು ತನ್ನ ಹೆಗಲ ಮೇಲೇರಿಸಿಕೊಂಡು, ಕುಕ್ಕುಲೋಟದಲ್ಲಿ ಓಡಿದನು.

'ಭಯಪಡಬೇಡಿ, ದರಿಯಾ ಅಲೆಕ್ಸಾಂಡ್ರೊವ್ನ ಅವರೆ!' ಎಂದವನು ನಗುತ್ತ ಅವಳೊಡನೆ ನುಡಿದನು. 'ನಾಸಿವಳನ್ನು ನೋಯಿಸುವ ಅಥವಾ ಬೀಳಿಸುವ ಸಾಧ್ಯತೆಯಿಲ್ಲ.'

ಅವನು ಕಸುವುಳ್ಳ ಚುರುಕಿನ ಮನುಷ್ಯ; ಜತೆಗೆ ಕಟ್ಟೆಚ್ಚರಿಕೆಯುಳ್ಳವನು. ಅವನ ಚಲನೆಯನ್ನು ವೀಕ್ಷಿಸಿದ ತಾಯಿಯ ಅನುಮಾನ ಪರಿಹಾರವಾಯಿತು; ಅವಳು ಸಮ್ಮತಿ ಸೂಚಕ ಸಂತೋಷದಿಂದ ಮಂದಹಾಸ ಸೂಸಿದಳು.

ಹಳ್ಳಿಗಾಡಿನ ಪರಿಸರದಲ್ಲಿ, ತಾನು ಹೃತ್ಪೂರ್ವಕವಾಗಿ ಮೆಚ್ಚಿದ ಈ ಮಕ್ಕಳೊಡನೆ ಹಾಗೂ ಡಾಲಿಯೊಡನೆ ಲೆವಿನ್ ಮಗುವಾದನು; ಅವನ ಗೆಲವು ಮತ್ತು ಲವಲವಿಕೆಗಳು ಡಾಲಿಗೆ ಮೆಚ್ಚುಗೆಯಾದುವು. ಮಕ್ಕಳೊಡನೆ ಕುಣಿದಾಡುವಾಗ ಅವನವರಿಗೆ ಅಂಗ ಸಾಧನೆಯ ವಿಧಾನಗಳನ್ನು ಕಲಿಸಿದನು; ತನ್ನ ಹರುಕುಮುರುಕು ಇಂಗ್ಲಿಷ್ ಭಾಷೆಯಿಂದ ಕುಮಾರಿ ಹುಲ್‌ಳನ್ನು ನಗಿಸಿದನು; ತನ್ನ ಕೃಷಿ ವ್ಯವಹಾರಗಳ ಬಗ್ಗೆ ಡಾಲಿಯೊಡನೆ ಸಂಭಾಷಿಸಿದನು.

ಊಟವಾದ ನಂತರ, ವರಾಂಡದಲ್ಲಿ ಅವನೊಡನೆ ತಾನೊಬ್ಬಳೇ ಇದ್ದಾಗ ಡಾಲಿ ಕಿಟ್ಟಿಯ ವಿಚಾರವೆತ್ತಿಕೊಂಡಳು. 'ಬೇಸಗೆಯ ದಿನಗಳನ್ನು ಕಳೆಯುವ ಸಲುವಾಗಿ ಕಿಟ್ಟಿ ಇಲ್ಲಿಗೆ ಬರುತ್ತಾಳೆಂಬುದು ನಿಮಗೆ ತಿಳಿದಿದೆಯೆ?'

'ಓ, ಹೌದೆ?' ಎಂದವನು ನುಡಿಯುವಾಗ ಅವನ ಮುಖ ಕೆಂಪೇರಿತು. ವಿಷಯವನ್ನು ಬದಲಾಯಿಸುವ ಸಲುವಾಗಿ ಅವನು 'ಸರಿ. ಹಾಗಾದರೆ, ಆ ಎರಡು ಹಸುಗಳನ್ನಿಲ್ಲಿಗೆ ಅಟ್ಟಲೆ? ಹಣ ಕೊಡಲೇಬೇಕೆಂದು ನೀವು ಒತ್ತಾಯಿಸುವುದಾದರೆ, ನಿಮಗೆ ಸಂಕೋಚವಾಗದಿದ್ದರೆ ಮಾಹೆಯಾನ ಐದು ರೂಬಲ್ ಕಳಿಸಬಹುದು.'

'ನಿಮಗೆ ಧನ್ಯವಾದ. ನಮ್ಮ ಹಸುಗಳು ಸರಿಯಾಗಿ ಹಾಲು ಕೊಡುತ್ತಿರುವುದರಿಂದ, ನೀವು ಅಟ್ಟಬೇಕಾಗಿಲ್ಲ.'

'ನಿಮ್ಮ ಹಸುಗಳನ್ನು ನಾನು ನೋಡಬಹುದಷ್ಟೆ. ನೀವು ಅನುಮತಿ ನೀಡುವುದಾದರೆ, ಅವುಗಳ ಮೇವಿನ ಬಗ್ಗೆ ತಿಳಿವಳಿಕೆ ನೀಡುತ್ತೇನೆ. ಕರಾವು ಮೇವನ್ನವಲಂಬಿಸುತ್ತದೆ.'

ನಿಷಿದ್ಧ ವಿಷಯದ ಕಡೆಗೆ ಸಂಭಾಷಣೆ ತಿರುಗದಿರಲೆಂದು, ಅವನು ಕ್ಷೀರೋತ್ಪಾದನಾ ವಿಧಾನವನ್ನು ವಿವರಿಸತೊಡಗಿದನು. ಅವನ ಕಲ್ಪನೆಯ ಪ್ರಕಾರ, ಹಸು ಮುಖ್ಯವಾಗಿ ಮೇವನ್ನು ಹಾಲನ್ನಾಗಿ ಪರಿವರ್ತಿಸುವ ಯಂತ್ರ. ಅವರ ಸಂಭಾಷಣೆ ಅದೇ ಜಾಡಿನಲ್ಲಿ ಹರಿಯಿತು.

ಕಿಟ್ಟಿಯ ವಿಷಯ ಕೇಳಲು ಭಯವಾದರೂ, ಕೇಳಬೇಕೆಂಬ ಇಚ್ಛೆ ಮಾತ್ರ, ಮಾತಾಡುವಾಗ ಅವನನ್ನು ಕಾಡುತ್ತಿತ್ತು. ಬಹಳಷ್ಟು ಶ್ರಮದಿಂದ ಸಂಪಾದಿಸಿದ ಮನಶ್ಶಾಂತಿ ತಪ್ಪಿಹೋಗಬಹುದೆಂದು ಅವನು ಹೆದರಿದನು.

'ನೀವು ಹೇಳುತ್ತಿರುವುದೇನೋ ಸರಿ. ಆದರೆ ಈ ವಿವರಗಳನ್ನೆಲ್ಲ ನೆನಪಿನಲ್ಲಿಟ್ಟುಕೊಂಡು, ಅದನ್ನು ಕಾರ್ಯಗತಗೊಳಿಸುವವರು ಯಾರಿದ್ದಾರೆ?' ಎಂದು ಡಾಲಿ ವಿಷಾದ ವ್ಯಕ್ತಪಡಿಸಿದಳು.

ಮೆತ್ರೋನಳ ಸಹಾಯದಿಂದ ಅವಳು ಎಲ್ಲ ವ್ಯವಹಾರಗಳನ್ನು ಸುಸೂತ್ರವಾಗಿ ನಡೆಸುತ್ತಿದ್ದಳು; ಆದ್ದರಿಂದ ಬದಲಾವಣೆ ಅವಳಿಗೆ ಹಿಡಿಸಲಿಲ್ಲ: ಮೇಲಾಗಿ ಲೆವಿನ್‌ನ ಕೃಷಿಜ್ಞಾನದಲ್ಲಿ ಅವಳಿಗೆ ನಂಬಿಕೆಯಿರಲಿಲ್ಲ. ಹಸು ಕ್ಷೀರೋತ್ಪಾದನೆಗಾಗಿ ನಿಮಿತ್ತ

ವಾದ ಯಂತ್ರವೆನ್ನುವ ಕಲ್ಪನೆಯೇ ಅವಳ ಮಟ್ಟಿಗೆ ಸಂದೇಹಾಸ್ಪದವಾಗಿತ್ತು. ಅಂಥ ಕಲ್ಪನೆಯಿಂದ ತೊಂದರೆ ಸಂಭವಿಸಬಹುದೆಂದು ಅವಳು ಭಾವಿಸಿದಳು. ಮೆತ್ರೋನಳ ಪ್ರಕಾರ, ಬಣ್ಣಬಣ್ಣದ ಪಟ್ಟೆಗಳುಳ್ಳ ಹಸುವಿಗೂ, ಬಿಳಿಕಬ್ಬರಿಯ ಹಸುವಿಗೂ ಸಾಕಷ್ಟು ಮೇವು ನೀರುಗಳನ್ನೊದಗಿಸಿದರೆ, ಅಡುಗೆಯಾಳು ಅಡುಗೆಮನೆಯ ತೊಳಸಿದ ಕಸ ಮುಸುರೆ ನೀರನ್ನು ಮಡಿವಾಳಗಿತ್ತಿಯ ದನಕ್ಕೆ ಕೊಡದಿದ್ದರೆ, ಕರಾವಿಗೇನೂ ಕೊರತೆಯಾಗುತ್ತಿರಲಿಲ್ಲ. ಸಸಾರಜನಕ ಹಾಗೂ ತರಕಾರಿ ಮೇವುಗಳಿಗೆ ಸಂಬಂಧಿಸಿದ ಮಾತುಕತೆಗಳೆಲ್ಲ ಅನುಮಾನಾಸ್ಪದವಾಗಿ, ಅಸ್ಪಷ್ಟವಾಗಿ ಕಂಡಿತು. ಆದರೆ ಕಿಟ್ಟಿಯ ವಿಷಯ ಮಾತಾಡಬೇಕೆಂಬುದೇ ಅವಳ ಮುಖ್ಯೋದ್ದೇಶವಾಗಿತ್ತು.

೧೦

'ತನಗೆ ಬೇಕಾದ್ದು ಮನಶ್ಶಾಂತಿ ಮತ್ತು ಏಕಾಂತತೆ ಮಾತ್ರವೆಂದು ಕಿಟ್ಟಿ ಬರೆಯುತ್ತಾಳೆ' ಎಂದು ಡಾಲಿ ತಮ್ಮಿಬ್ಬರ ನಡುವಣ ಮೌನವನ್ನು ಮುರಿದಳು.

'ಅವಳ ಆರೋಗ್ಯ ಉತ್ತಮಗೊಂಡಿದೆಯೆ?' ಎಂದು ಲೆವಿನ್ ಗಾಬರಿಯಿಂದ ಪ್ರಶ್ನಿಸಿದನು.

'ಭಗವದನುಗ್ರಹದಿಂದ ಅವಳು ಪೂರ್ಣವಾಗಿ ಗುಣ ಹೊಂದಿದ್ದಾಳೆ. ಅವಳ ಶ್ವಾಸಕೋಶಗಳಿಗೆ ವ್ಯಾಧಿ ತಗುಲುತ್ತದೆಂದು ನಾನು ನಂಬಿಕೊಂಡಿರಲಿಲ್ಲ.'

'ನನಗೆಷ್ಟು ಸಂತೋಷವಾಗಿದೆ ಗೊತ್ತೆ' ಎಂದು ಲೆವಿನ್ ನುಡಿದನು. ಅವನ ಆ ಮಾತಿನ ಧಾಟಿಯಲ್ಲಿ ಹಾಗೂ ಮಾತಾಡದೆ ಅವನು ತನ್ನನ್ನೇ ನೋಡುತ್ತಿದ್ದ ರೀತಿಯಲ್ಲಿ ಮತ್ತು ನಿಸ್ಸಹಾಯಕ ಸ್ಥಿತಿಯಲ್ಲಿ ಮಾತಿಗೆ ನಿಲುಕದ ಯಾವುದೋ ಭಾವನೆಯಿರಬೇಕೆಂದು ಡಾಲಿ ಊಹಿಸಿಕೊಂಡಳು.

ದಯಾಮಯವೂ, ತುಸು ವ್ಯಂಗ್ಯಾತ್ಮಕವೂ ಆದ ಮಂದಹಾಸವನ್ನು ಬೀರುತ್ತ ಅವಳು 'ನಿಮಗೊಂದು ಪ್ರಶ್ನೆಹಾಕಬೇಕೆನಿಸುತ್ತದೆ. ಕಿಟ್ಟಿಯ ಬಗ್ಗೆ ನಿಮಗೆ ಕೋಪವೇಕೆ?' ಎಂದು ಕೇಳಿದಳು.

'ಕೋಪವೆ? ಅವಳ ಮೇಲೆ ನನಗೆ ಕೋಪವೇ ಇಲ್ಲ.' ಎಂದು ಲೆವಿನ್ ನುಡಿದನು.

'ಹೌದು. ನೀವು ಕೋಪಗೊಂಡಿದ್ದೀರಿ. ನೀವು ಮಾಸ್ಕೊದಲ್ಲಿದ್ದಾಗ ನಮ್ಮನ್ನಾಗಲಿ ಅವರನ್ನಾಗಲಿ ನೋಡಲು ಬರಲಿಲ್ಲವೇಕೆ?'

'ದರಿಯಾ ಅಲೆಕ್ಸಾಂದ್ರೊವ್ನ' ಎಂದವನು ಸಂಬೋಧಿಸುತ್ತಿದ್ದಂತೆ ಅವನ ಕೂದಲು ಬುಡ ಸಹ ಕೆಂಪಾದುವು. 'ನಿಮ್ಮ ಹೃದಯ ಕರುಣೆಯ ಮಡುವಾಗಿದ್ದರೂ, ನಿಮಗೆ ನನ್ನ ಸಂಕಟ ಅರ್ಥವಾಗಲಿಲ್ಲವೆಂದು ಸೋಜಿಗವಾಗುತ್ತಿದೆ. ಮತ್ತೇನಿಲ್ಲದಿದ್ದರೂ ನನ್ನ ಬಗ್ಗೆ ನಿಮಗೆ ಕರುಣೆಯಿಲ್ಲವೆ?—ಅದರಲ್ಲಿಯೂ ನಿಮಗೆ.... ಗೊತ್ತಿರುವಾಗ.'

'ನನಗೇನು ಗೊತ್ತಿದೆ?'

'ಕಿಟ್ಟಿಯೊಡನೆ ಮದುವೆಯ ಪ್ರಸ್ತಾಪವೆತ್ತಿದೆ; ತಿರಸ್ಕೃತನಾದೆ. ಇದು ನಿಮಗೆ ಗೊತ್ತಿದೆ' ಎಂದು ಲೆವಿನ್ ನುಡಿದನು. ಒಂದು ಕ್ಷಣದ ಹಿಂದೆ ಕಿಟ್ಟಿಯ ಬಗ್ಗೆ ಅವನ

ಹೃದಯವನ್ನೆಲ್ಲ ಆವರಿಸಿಕೊಂಡಿದ್ದ ಮಾರ್ದವತೆ ಮಾಯವಾಯಿತು; ಅದರ ಜಾಗವನ್ನು ಕಿನಿಸು ಮುನಿಸುಗಳು ಆಕ್ರಮಿಸಿಕೊಂಡುವು.

'ಇದೆಲ್ಲ ನನಗೆ ತಿಳಿದಿದೆಯೆಂದು ನಿಮಗೆ ಹೇಗೆ ಗೊತ್ತು ?'

'ಇದು ಎಲ್ಲರಿಗೂ ಗೊತ್ತಿರುವ ವಿಚಾರ.'

'ನಿಮ್ಮ ಗ್ರಹಿಕೆಯೇ ತಪ್ಪು. ನಾನದನ್ನು ಊಹಿಸಿಕೊಳ್ಳಬಹುದಾಗಿತ್ತು, ನಿಜ. ಆದರೆ ನನಗದು ಗೊತ್ತಿರಲಿಲ್ಲ.'

'ಈಗಲಾದರೂ ಅದು ನಿಮ್ಮ ಗಮನಕ್ಕೆ ಬಂತಲ್ಲ.'

'ಅವಳ ಘೋರ ಯಾತನೆಗೆ ಕಾರಣವಾದೊಂದು ಸಂಗತಿ ನಡೆದಿರಬೇಕೆಂದಷ್ಟೆ ನನಗೆ ಗೊತ್ತಿದ್ದದ್ದು. ಆ ವಿಷಯವನ್ನೆಂದೂ ಎತ್ತಕೂಡದೆಂದು ಅವಳು ನನಗೆ ಹೇಳಿದ್ದಳು. ಅವಳು ನನ್ನೊಂದಿಗೇ ಆ ವಿಷಯವನ್ನು ಹೇಳದಿದ್ದಾಗ, ಬೇರೆ ಯಾರೊಡನೆಯೂ ಹೇಳಿರಲಿಕ್ಕಿಲ್ಲವೆಂಬುದು ಸ್ಪಷ್ಟ. ವಾಸ್ತವವಾಗಿ ನಡೆದದ್ದೇನು, ಹೇಳಿ ?'

'ನಾನು ಮೊದಲೇ ಹೇಳಿದೆ.'

'ಅದು ನಡೆದದ್ದು ಯಾವಾಗ ?'

'ಕಳೆದಸಲ ನಿಮ್ಮ ತವರು ಮನೆಯಲ್ಲಿದ್ದಾಗ.'

'ನಾನು ನಿಮಗೇನು ಹೇಳುತ್ತೇನೆಂಬುದನ್ನು ಬಲ್ಲಿರಾ ? ಅವಳಿಗಾಗಿ ನನ್ನ ಸಂಕಟ ಹೇಳ ತೀರದು; ನನ್ನ ಹೃದಯದಲ್ಲಿ ಘೋರ ಯಾತನೆ ಮನೆಮಾಡಿಕೊಂಡಿದೆ. ಗೌರವ ಹಾನಿಯಿಂದಾಗಿ ನಿಮಗೆ ಸಂಕಟವಾಗಿದೆ, ನಿಜ.' ಎಂದು ಡಾಲಿ ನುಡಿದಳು.

'ಪ್ರಾಯಶಃ' ಎಂದು ಲೆವಿನ್ ಗೊಣಗಿದನು. 'ಆದರೆ—'

ಅವಳು ನಡುವೆ ಬಾಯಿ ಹಾಕಿದಳು. 'ಅವಳಿಗಾಗಿ, ನನ್ನ ಮುದ್ದು ತಂಗಿಗಾಗಿ ನಾನೆಷ್ಟು ಕೊರಗುತ್ತಿದ್ದೇನೆ, ಗೊತ್ತೆ ? ನನಗೀಗ ಎಲ್ಲವೂ ಅರ್ಥವಾಗಿದೆ.'

'ದರಿಯಾ ಅಲೆಕ್ಸಾಂಡ್ರೊವ್ನ, ಕ್ಷಮಿಸಿ. ನಾನೀಗಲೇ ಹೋಗಬೇಕಾಗಿದೆ. ನಮಸ್ಕಾರ' ಎಂದವನು ಮೇಲೆದ್ದನು.

'ಬೇಡಿ, ಬೇಡಿ. ಈಗಲೇ ಬೇಡಿ' ಎಂದವಳು ಅವನ ಅಂಗಿದೋಳನ್ನು ಹಿಡಿದುಕೊಂಡಳು. 'ಕುಳಿತುಕೊಳ್ಳಿ.'

'ನಿಮ್ಮಲ್ಲಿ ನನ್ನದೊಂದು ಯಾಚನೆ. ಮತ್ತೆ ಈ ವಿಷಯವೆತ್ತ ಬೇಡಿರೆಂದು ಪ್ರಾರ್ಥಿಸುತ್ತೇನೆ' ಎಂದವನು ಕುಳಿತುಕೊಳ್ಳುತ್ತ ನುಡಿದನು. ಆಳದಲ್ಲಿ ಹೂತು ಹೋಗಿದ್ದ ಭರವಸೆಯೊಂದು ಮತ್ತೆ ತಲೆಯೆತ್ತಿ ಕೆರಳುತ್ತಿತ್ತೆಂಬ ಭಾವನೆ ಅದೇ ಸಮಯದಲ್ಲಿ ಮೊಗದೋರುತ್ತಿತ್ತು.

'ನಿಮ್ಮಲ್ಲಿ ನನಗೆ ಎರಕವಿರದಿದ್ದರೆ' ಎಂದು ಡಾಲಿ ಹನಿಗಣ್ಣಾಗಿ ಮಾತು ಪ್ರಾರಂಭಿಸಿದಳು. 'ಈಗ ನಾನೆಂತು ನಿಮ್ಮನ್ನು ಬಲ್ಲೆನೋ, ಅಂತೆಯೇ ನಿಮ್ಮ ಬಗ್ಗೆ ನನಗೇನೂ ಗೊತ್ತಿರದಿದ್ದರೆ....'

ಸತ್ತುಹೋಗಿತ್ತೆಂದು ತಿಳಿದಿದ್ದ ಭಾವನೆ ಹೆಚ್ಚು ಹೆಚ್ಚು ಚೈತನ್ಯಯುಕ್ತವಾಗಿ ಉಕ್ಕಿ, ಅವನ ಹೃದಯವನ್ನು ವಶಪಡಿಸಿಕೊಂಡಿತು.

'ನಿಜ. ನನಗೀಗ ಎಲ್ಲವೂ ಅರ್ಥವಾಗುತ್ತಿದೆ' ಎಂದು ಡಾಲಿ ಮಾತು ಮುಂದುವರಿಸಿದಳು. 'ನಿಮಗದು ಅರ್ಥವಾಗದು. ನೀವು ಯಾರನ್ನು ಪ್ರೀತಿಸುತ್ತೀರೆಂಬುದು ಆಯ್ಕೆಯ ಸ್ವಾತಂತ್ರ್ಯವಿರುವ ನಿಮ್ಮಂಥ ಗಂಡಸರಿಗೆ ಯಾವಾಗಲೂ ಗೊತ್ತು. ಆದರೆ ಸ್ತ್ರೀ ಸಹಜವಾದ, ಕನ್ಯಾವಸ್ಥೆಗನುಗುಣವಾದ, ಕಾತರತಾಪೂರ್ಣವಾದ ಅನಿಶ್ಚಯತೆಯ ಸ್ಥಿತಿಯಲ್ಲಿರುವ ತರುಣಿಗೆ ನಿಮ್ಮಂಥ ಗಂಡಸರನ್ನು ದೂರದಿಂದಲೇ ನೋಡುವ, ನಿಮ್ಮ ಮಾತನ್ನು ಪೂರ್ಣವಾಗಿ ನಂಬಿಕೊಳ್ಳುವ ಹುಡುಗಿಗೆ ಏನು ಉತ್ತರ ಹೇಳಬೇಕೊ ಗೊತ್ತಾಗುವುದಿಲ್ಲ. ಇಂಥ ವಿಚಾರದಲ್ಲಿ ಅಸಹಜವಾದದ್ದೇನೂ ಇಲ್ಲ.'

'ಹೌದು, ಅವಳ ಹೃದಯ ಮಾತಾಡದಿದ್ದರೆ ಹಾಗಾಗುತ್ತದೆ.'

'ಅವಳ ಹೃದಯ ಮಾತಾಡುತ್ತದೆಯಾದರೂ, ನೀವು ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಗಂಡಸರಾದ ನೀವು ಯಾವುದೋ ಹುಡುಗಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತೀರಿ, ಅವಳ ಮನೆಗೆ ಹೋಗಿ, ಸ್ನೇಹ ಬೆಳೆಸುತ್ತೀರಿ; ಮೇಲಿಂದ ಮೇಲೆ ಅವಳ ಮನೆಗೆ ಹೋಗುತ್ತೀರಿ. ನಿಮಗೆ ಅನುಕೂಲ್ಯವೆಂದು ತೋರುವ ಗುಣಗಳು ಅವಳಲ್ಲಿವೆಯೋ ಎಂದು ಪರೀಕ್ಷಿಸುತ್ತೀರಿ. ಅವಳ ಬಗ್ಗೆ ಪ್ರೇಮವಂಕುರಿಸಿದಾಗ ಮಾತ್ರ ನೀವವಳ ಮುಂದೆ ಮದುವೆಯ ಪ್ರಸ್ತಾಪವೆತ್ತುತ್ತೀರಿ.'

'ಎಲ್ಲವೂ ನೀವು ಹೇಳಿದಂತೆ ನಡೆಯುತ್ತದೆಂದು ತಿಳಿಯಬೇಡಿ.'

'ಅದೇನೇ ಇರಲಿ; ನಿಮ್ಮ ಪ್ರೇಮ ಮಾಗಿದಾಗ ಅಥವಾ ನಿಮ್ಮ ಗಮನದಲ್ಲಿರುವ ಇಬ್ಬರು ಹುಡುಗಿಯರ ಪೈಕಿ ಒಬ್ಬಳ ಕಡೆಗೆ ತಕ್ಕಡಿ ಒರಗಿದಾಗ, ನೀವು ಮದುವೆಯ ಪ್ರಸ್ತಾಪವೆತ್ತುತ್ತೀರಿ. ಆದರೆ ಹುಡುಗಿಯ ಅಭಿಪ್ರಾಯವನ್ನು ಕೇಳುವುದಿಲ್ಲ. ಅವಳು ತನ್ನಷ್ಟಕ್ಕೆ ತಾನೆ ಆಯ್ಕೆ ಮಾಡಿಕೊಳ್ಳುತ್ತಾಳೆಂದು ಭಾವಿಸಲಾಗಿದೆ. ಆದರೆ ವಾಸ್ತವವಾಗಿ ಅವಳು ಆಯ್ಕೆ ಮಾಡಿಕೊಳ್ಳುವುದಿಲ್ಲ; ಉಂಟು–ಇಲ್ಲ ಎಂದಿಷ್ಟೇ ಅವಳು ಹೇಳಬಲ್ಲಳು.'

'ಆದರವಳು ನನ್ನ ಮತ್ತು ವ್ರಾನ್ಸ್ಕಿಯ ವಿಚಾರ ಬಂದಾಗ ಅವನನ್ನು ಆಯ್ಕೆ ಮಾಡಿಕೊಂಡದ್ದುಂಟು' ಎಂದು ಲೆವಿನ್ ತನ್ನೊಳಗೆ ತಾನು ಹೇಳಿಕೊಂಡನು. ಅವನಂತರಂಗದಲ್ಲಿ ಮರುಕಳಿಸಿದ ಭರವಸೆ ಮತ್ತೆ ಸತ್ತುಹೋಯಿತು; ಅದರ ಭಾರ ಅವನ ಹೃದಯದ ಮೇಲೆ ಬೀಳಲಾಗಿ, ಯಾತನೆಗೊಳಗಾದನು.

'ದರಿಯಾ ಅಲೆಕ್ಸಾಂಡ್ರೊವ್ನ, ಹೊಸ ಉಡುಪನ್ನಾಗಲಿ, ಯಾವುದಾದರೂ ಮಾರಾಟದ ವಸ್ತುವನ್ನಾಗಲಿ ಆಯ್ಕೆ ಮಾಡಿಕೊಳ್ಳುವುದೇ ಹಾಗೆ; ಆದರೆ ಪ್ರೇಮವನ್ನಲ್ಲ. ಆಯ್ಕೆ ನಡೆದಿದೆ; ಅದು ಯೋಗ್ಯವೇ ಸರಿ .. ಹಿಂದೇಟು ಸಲ್ಲದು' ಎಂದವನು ನುಡಿದನು.

'ಆಹ, ಸ್ವಾಭಿಮಾನ, ಮತ್ತೆ ಅದೇ ಸ್ವಾಭಿಮಾನ!' ಎಂದು ಡಾಲಿ ಉದ್ಗರಿಸಿದಳು. ಸ್ತ್ರೀಯರಿಗೆ ಗೊತ್ತಿದ್ದ ಏಕಮಾತ್ರ ಭಾವದೊಡನೆ ಹೋಲಿಸಿದಾಗ ಆ ಸ್ವಾಭಿಮಾನ ಕೀಳೆನ್ನುವಂಥ ತಿರಸ್ಕಾರದ ಧಾಟಿ ಅವಳ ಆ ಉದ್ಗಾರದಲ್ಲಿ ನಿಹಿತಗೊಂಡಂತಿತ್ತು. 'ನೀವು ಕಿಟ್ಟಿಯೊಡನೆ ಮದುವೆಯ ಪ್ರಸ್ತಾಪವೆತ್ತಿದಾಗ ಅವಳು ಯಥಾರ್ಥವಾಗಿ ಅಂಥದೇ ಸ್ಥಿತಿಯಲ್ಲಿದ್ದಳು; ಉತ್ತರಕೊಡಲಾರದ ಇಕ್ಕಟ್ಟಿನಲ್ಲಿದ್ದಳು. ಅವಳ ಅನಿಶ್ಚಯ ಸ್ಥಿತಿ

ಯಲ್ಲಿದ್ದಳು, ನೀವೋ, ವ್ರಾನ್ಸ್ಕಿಯೋ ಎಂಬ ಸಂಶಯದ ಇಕ್ಕಳದಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದಳು. ಅವಳು ಪ್ರತಿನಿತ್ಯ ಅವನನ್ನು ನೋಡುತ್ತಿದ್ದಳು; ನಿಮ್ಮನ್ನು ನೋಡಿ ಬಹುದಿನಗಳಾಗಿದ್ದುವು. ಅವಳಿಗೆ ಹೆಚ್ಚು ವಯಸ್ಸಾಗಿದ್ದರೆ... ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ, ನನ್ನ ಆಯ್ಕೆಯ ವಿಷಯದಲ್ಲಿ ಅನಿಶ್ಚಯತೆಯಿರುತ್ತಿರಲಿಲ್ಲ. ನನಗೆ ಯಾವಾಗಲೂ ಅವನು ಸೇರುತ್ತಿರಲಿಲ್ಲ. ಅವನ ಬಗೆಗಿನ ನನ್ನ ನಿಲವು ಸರಿಯೆಂದೇ ನನಗನಿಸಿದೆ.'

ಲೆವಿನ್ ಕಿಟ್ಟಿಯ ಉತ್ತರವನ್ನು ನೆನಪಿಗೆ ತಂದುಕೊಂಡನು. 'ಅದೆಂದೂ ಸಾಧ್ಯವಾಗದ ಸಂಗತಿ' ಎಂದವಳು ನುಡಿದಿದ್ದಳು.

'ದರಿಯಾ ಅಲೆಕ್ಸಾಂಡ್ರೊವ್ನ, ನನ್ನಲ್ಲಿ ನೀವಿಟ್ಟಿರುವ ವಿಶ್ವಾಸಕ್ಕಾಗಿ ನಾನು ಋಣಿ. ನೀವು ತಪ್ಪುಮಾಡುತ್ತಿದ್ದೀರಿ' ಎಂದವನು ನಿರ್ದಯೆಯಿಂದ ನುಡಿದನು. 'ನನ್ನ ನಿಲವು ಸರಿಯೊ ತಪ್ಪೊ, ಅದು ಬೇರೆ ವಿಚಾರ. ನಿಮ್ಮ ತಿರಸ್ಕಾರಕ್ಕೆ ಗುರಿಯಾಗಿರುವ ಸ್ವಾಭಿಮಾನವಿದೆಯಲ್ಲ, ಅದರಿಂದಾಗಿ ನಾನು ಕಿಟ್ಟಿಯ ಬಗ್ಗೆ ಯೋಚಿಸಲು ಸಾಧ್ಯವಿಲ್ಲ; ಖಂಡಿತ ಸಾಧ್ಯವಿಲ್ಲವೆಂಬುದನ್ನು ನೀವರಿಯಿರಿ.'

'ನಾನು ಹೇಳಬೇಕಾದ ವಿಷಯ ಮತ್ತೊಂದಿದೆ: ನನ್ನ ಮಕ್ಕಳಷ್ಟೇ ಮುದ್ದಾಗಿ ಪ್ರೀತಿಸುವ ನನ್ನ ತಂಗಿಯ ಬಗ್ಗೆ ನಾನು ಮಾತಾಡುತ್ತಿದ್ದೇನೆಂಬುದನ್ನು ನೀವು ಮರೆಯದಿರಿ. ಅವಳು ನಿಮ್ಮನ್ನು ಪ್ರೀತಿಸಿದ್ದುಂಟೆಂದು ನಾನು ಹೇಳುತ್ತಿಲ್ಲ. ಆಕ್ಷಣದ ಅವಳ ನಿರಾಕರಣೆಯಿಂದ ಅವಳ ಮನಸ್ಸನ್ನರಿಯಲಾಗದು.'

'ನನಗೆ ಗೊತ್ತಿಲ್ಲ' ಎಂದು ಲೆವಿನ್ ಪುಟಿದೆದ್ದನು. 'ನನ್ನ ಮನಸ್ಸಿಗೆಷ್ಟು ಯಾತನೆಯಾಗುತ್ತಿದೆಯೆಂಬುದು ನಿಮಗೆ ತಿಳಿಯುವಂತಿದ್ದರೆ ಚೆನ್ನಾಗಿರುತ್ತಿತ್ತು. ನೀವೊಂದು ಮಗುವನ್ನು ಕಳೆದುಕೊಂಡಿದ್ದಂತೆ, "ಅಹ, ಅವನು ಹೀಗಿದ್ದ, ಹಾಗಿದ್ದ, ಅವನಿನ್ನೂ ಕೆಲವು ದಿನ ಜೀವಿಸಬಹುದಿತ್ತು, ನಿಮಗೆ ನಲವುಂಟುಮಾಡಬಹುದಿತ್ತು; ಆದರವನು ಸತ್ತು ಹೋಗಿದ್ದಾನೆ, ಸತ್ತಿದ್ದಾನೆ, ಸತ್ತಿದ್ದಾನೆ" ಎಂದು ಸುತ್ತಮುತ್ತಣ ಜನ ನಿಮಗೆ ಬುದ್ಧಿ ಹೇಳುತ್ತಿದ್ದಂತೆ ಇದೆಲ್ಲ ನನಗೆ ಗೋಚರಿಸುತ್ತಿದೆ.'

'ನೀವೆಂಥ ವಿಚಿತ್ರವ್ಯಕ್ತಿ' ಎಂದು ಡಾಲಿ ಲೆವಿನ್‌ನ ಸಂಕಟವನ್ನು ಮರೆತು, ವಿಷಾದಕರ ಮಂದಹಾಸದಿಂದ ನುಡಿದಳು. 'ಹೌದು, ನನಗೆ ಹೆಚ್ಚು ಹೆಚ್ಚು ಅರ್ಥವಾಗುತ್ತಿದೆ' ಎಂದವಳು ಚಿಂತಾಮಗ್ನಳಾದಳು. 'ಅಂದಮೇಲೆ, ಕಿಟ್ಟಿ ಇಲ್ಲಿರುವಾಗ ನೀವು ಬರುವುದಿಲ್ಲವೆಂದಾಯ್ತು.'

'ಇಲ್ಲ, ಇಲ್ಲ; ಬರುವುದಿಲ್ಲ. ಭೇಟಿಯ ಅವಕಾಶದೊರೆತಾಗ ನಾನು ಖಂಡಿತ ಅವಳಿಂದ ದೂರವಿರಲಾರೆ. ಆದರೆ ನನ್ನ ಸಹವಾಸದ ಇರಿಸುಮುರಿಸು ಅವಳಿಗಾಗದಂತೆ ನಾನು ಆದಷ್ಟು ಪ್ರಯತ್ನಿಸುತ್ತೇನೆ.'

'ನೀವೊಬ್ಬರು ವಿಚಿತ್ರ ವ್ಯಕ್ತಿ' ಎಂದವಳು ವಾತ್ಸಲ್ಯದಿಂದ ಅವನ ಮುಖವನ್ನು ನಿಟ್ಟಿಸುತ್ತ, ಪುನರುಕ್ತಿಸಿದಳು. 'ಸರಿ, ಸರಿ. ಈ ವಿಷಯ ಕುರಿತು ಮಾತಾಡಲಿಲ್ಲವೆನ್ನುವಷ್ಟರ ಮಟ್ಟಿಗೆ ಮರೆತುಬಿಡೋಣ. ನೀನು ಬಂದದ್ದೇಕೆ ತನ್ಯ?' ಎಂದವಳು ಅದೆತಾನೆ ಮುಖ ತೋರಿಸಿದ ಸಣ್ಣ ಹುಡುಗಿಯನ್ನು ಫ್ರೆಂಚ್ ಭಾಷೆಯಲ್ಲಿ ಮಾತಾಡಿಸಿದಳು.

'ನನ್ನ ಗುದ್ದಲಿ ಎಲ್ಲಿದೆ, ಅಮ್ಮ?'

'ನಾನು ಫ್ರೆಂಚ್ ಭಾಷೆಯಲ್ಲಿ ಮಾತಾಡಿಸಿದೆ. ನೀನು ಈ ಫ್ರೆಂಚ್ ಭಾಷೆಯಲ್ಲಿಯೇ ಉತ್ತರಿಸಬೇಕು.'

ಪುಟ್ಟಹುಡುಗಿ ಅಂತೆಯೇ ಮಾತಾಡಲು ಪ್ರಯತ್ನಿಸಿದಳು; ಆದರೆ ಗುದ್ದಲಿಗೆ ಸಮನಾದ ಫ್ರೆಂಚ್ ಪದವನ್ನವಳು ಮರೆತು ಬಿಟ್ಟಿದ್ದಳು; ತಾಯಿ ಆ ಪದವನ್ನೊರೆದು, ಅದೆಲ್ಲಿದೆಯೆಂಬುದನ್ನು ಫ್ರೆಂಚ್ ಭಾಷೆಯಲ್ಲಿ ತಿಳಿಸಿದಳು. ಲೆವಿನ್‌ನಿಗೆ ಆ ಸಂಗತಿ ಹಿಡಿಸಲಿಲ್ಲ.

ಡಾಲಿಯ ಮನೆಯಲ್ಲಿ ಹಿಂದಿನಂತವನಿಗೆ ಯಾವುದೂ ಆಕರ್ಷಕವಾಗಿ ಕಾಣಲಿಲ್ಲ.

'ತನ್ನ ಮಕ್ಕಳನ್ನೇಕೆ ಅವಳು ಫ್ರೆಂಚ್ ಭಾಷೆಯಲ್ಲಿ ಮಾತಾಡಿಸಬೇಕು' ಎಂದವನು ಆಲೋಚಿಸಿದನು. 'ಅದೆಂಥ ನಟನೆ! ಅದೆಷ್ಟು ಅಸಹಜ! ಅದರಿಂದ ಮಕ್ಕಳಿಗೂ ಮುಜುಗರ. ಫ್ರೆಂಚ್ ಭಾಷೆಯನ್ನು ಕಲಿಸುತ್ತ, ಜತೆಜತೆಗೆ ಅಪ್ರಾಮಾಣಿಕತೆಯನ್ನು ಸಹ ಕಲಿಸಿದಂತಾಗಿದೆ' ಎಂದವನು ತನ್ನಷ್ಟಕ್ಕೆ ತಾನಂದುಕೊಂಡನು. ಆ ಮೊದಲೇ ಡಾಲಿ ಇಪ್ಪತ್ತು ಸಲ ಅದೇ ಮಾಳ್ಕೆಯಲ್ಲಿ ಆಲೋಚಿಸಿದ್ದಳೆಂಬ, ಪ್ರಾಮಾಣಿಕತೆಗೆ ತುಸುಧಕ್ಕೆಯೊದಗಿದರೂ ಫ್ರೆಂಚ್ ಭಾಷೆಯಲ್ಲಿಯೇ ತನ್ನ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ವಿಷಯದಲ್ಲಿ ಅವಳಿಗೆ ಪೂರ್ಣನಂಬಿಕೆಯಿತ್ತೆಂಬ ಸಂಗತಿ ಲೆವಿನ್‌ನ ಗಮನಕ್ಕೆ ಬಂದಿರಲಿಲ್ಲ.

'ನೀವೇಕೆ ಹೊರಟು ನಿಂತಿದ್ದೀರಿ? ತುಸು ಹೊತ್ತು ನಿಲ್ಲಿ.'

ಲೆವಿನ್ ಚಹಕ್ಕೋಸ್ಕರ ನಿಂತನು. ಆದರೆ ಅವನ ಉಲ್ಲಾಸವೆಲ್ಲ ಉಡುಗಿ ಹೋಗಿತ್ತು. ಅವನ ಮನಸ್ಸಿಗೆ ತುಂಬ ಕಿರಿಕಿರಿ ಯಾಯಿತು.

ಚಹ ಮುಗಿದನಂತರ, ಕುದುರೆಗಳನ್ನು ತರುವಂತೆ ಹೇಳಲು ಅವನು ಅಂಗಳದ ಕಡೆಗೆ ಹೋದನು. ಅವನು ಕೋಣೆಗೆ ಹಿಂದಿರುಗುವ ಹೊತ್ತಿಗೆ ಡಾಲಿ ಉದ್ವೇಗಗೊಂಡಿದ್ದಳು; ಅವಳ ಕಣ್ಣುಗಳಲ್ಲಿ ನೀರು ತುಳುಕುತ್ತಿದ್ದುವು. ಆ ದಿನದ ಆನಂದವನ್ನೆಲ್ಲ ಹಾಳುಗೆಡಿಸಿದ, ತನ್ನ ಮಕ್ಕಳಲ್ಲಿರಿಸಿದ್ದ ಸ್ವಾಭಿಮಾನವನ್ನು ಭಗ್ನಗೊಳಿಸಿದ್ದ ಘಟನೆಯೊಂದು ಅವನಿಲ್ಲದಾಗ ನಡೆಯಿತು. ಚೆಂಡಿಗಾಗಿ ಗ್ರಿಷ ಮತ್ತು ತನ್ಯರಿಬ್ಬರೂ ಜಗಳವಾಡಿದ್ದರು. ಶಿಶು ಮಂದಿರದಿಂದ ಬಂದ ಬೊಬ್ಬೆಯನ್ನು ಕೇಳಿದ ಅವಳು ಅಲ್ಲಿಗೆ ಓಡಿಹೋದಳು; ಅಲ್ಲವಳು ಭಯಂಕರ ದೃಶ್ಯವನ್ನು ಕಂಡಳು. ತನ್ಯ ಗ್ರಿಷನ ಕೂದಲು ಹಿಡಿದುಕೊಂಡಿದ್ದಳು; ಗ್ರಿಷನ ಮುಖ ಕೋಪದಿಂದ ವಿಕಾರವಾಗಿತ್ತು; ತನ್ನ ಮುಷ್ಟಿಯಿಂದ ಅವಳನ್ನವನು ಎಲ್ಲೆಂದರಲ್ಲಿ ಗುದ್ದುತ್ತಿದ್ದನು. ಅವರನ್ನು ನೋಡಿದಾಗ ಡಾಲಿಯ ಹೃದಯ ಲಟಕ್ಕನೆ ಹರಿದುಹೋದಂತಾಯಿತು; ತನ್ನ ಬದುಕಿನಿಂದ ಬೆಳಕೇ ಆರಿಹೋದಂತಾಯಿತು. ಯಾರ ಬಗ್ಗೆ ಹೆಮ್ಮೆಯನ್ನು ತಾಳಿದ್ದಳೋ ಅಂಥ ಮಕ್ಕಳು ಅತ್ಯಂತ ಸಾಮಾನ್ಯರು ಮಾತ್ರವಲ್ಲ, ನಡತೆಗೆಟ್ಟವರೆಂದು, ಮೃಗೀಯಸ್ವಭಾವದ ದುಷ್ಟರೆಂದು ಅವಳು ಭಾವಿಸಿಕೊಂಡಳು.

ಅವಳು ತನ್ನ ದುರವಸ್ಥೆಯನ್ನು ಕುರಿತು ಚಿಂತಿಸುತ್ತಿದ್ದಳು; ಲೆವಿನ್‌ನ ಮುಂದೆ ತನ್ನ ಸಂಕಟವನ್ನು ತೋಡಿಕೊಂಡಳಲ್ಲದೆ ಬೇರೇನೂ ಮಾತಾಡಲಿಲ್ಲ.

ಅವಳನ್ನು ಸಾಂತ್ವನಗೈಯಲು ಅವನು ಯತ್ನಿಸಿದನು. ಎಲ್ಲ ಮಕ್ಕಳು ಜಗಳ ವಾಡುತ್ತವೆಂದೂ, ಅದರಿಂದ ಕೇಡು ಸಂಭವಿಸುವುದಿಲ್ಲವೆಂದೂ ಅವನು ತಿಳಿಸಿದನು. ಆದರೆ ಈ ಮಾತು ಹೇಳುವಾಗ ಅವನ ಅಂತರಂಗದ ಆಲೋಚನೆಯು ಬೇರೆಯಾಗಿತ್ತು: 'ನನ್ನನ್ನು ಕೃತಕತೆ ಮುಟ್ಟದು; ನನ್ನ ಮಕ್ಕಳೊಡನೆ ಫ್ರೆಂಚ್ ಭಾಷೆಯಲ್ಲಿ ಮಾತಾಡು ವುದಿಲ್ಲ. ನನ್ನ ಮಕ್ಕಳು ಇವರಂತಿರುವುದಿಲ್ಲ; ಮಕ್ಕಳನ್ನು ಅತಿಯಾಗಿ ಮುದ್ದುಮಾಡಿ ಕೆಡಿಸದಿದ್ದರೆ, ಅವರ ಸ್ವಭಾವವನ್ನು ವಿಕಾರಗೊಳಿಸದಿದ್ದರೆ, ಅವರು ನಿಜಕ್ಕೂ ಆಹ್ಲಾದ ದಾಯಿಗಳಾಗುತ್ತಾರೆ. ಓ ಇಲ್ಲ; ನನ್ನ ಮಕ್ಕಳು ಇವರಂತಿರುವುದಿಲ್ಲ.'

ಅವನು ನಮಸ್ಕಾರ ಹೇಳಿ, ಗಾಡಿಯೇರಿದನು. ಅವನನ್ನು ತಡೆಯಲು ಡಾಲಿ ಪ್ರಯತ್ನಿಸಲಿಲ್ಲ.

೧೧

ಜುಲೈ ತಿಂಗಳ ಮಧ್ಯಭಾಗದಲ್ಲಿ ಲೆವಿನ್ ಸೋದರಿಯ ಕೃಷಿಕ್ಷೇತ್ರದ ಗ್ರಾಮ ಮುಖಂಡ ಒಣಹುಲ್ಲು ಹದಮಾಡುವ ಬಗ್ಗೆ ವರದಿಮಾಡಲು ಅವನ ಬಳಿಗೆ ಬಂದನು. ಪೊಕ್ರೊವ್‌ಸ್ಕಾಯ್ ಇಂದ ಆ ಕ್ಷೇತ್ರ ಸುಮಾರು ಹದಿನೈದು ಮೈಲಿ ದೂರದಲ್ಲಿತ್ತು. ಹುಲ್ಲುಹೊಲಗಳೇ ಲೆವಿನ್ ಸೋದರಿಯ ಪ್ರಮುಖ ಆದಾಯ ಮೂಲವಾಗಿತ್ತು. ಹಿಂದಿನ ವರ್ಷಗಳಲ್ಲಿ ರೈತರು ಎಕರೆ ಹುಲ್ಲಿಗೆ ಏಳು ರೂಬಲ್‌ನಂತೆ ಬೆಲೆ ಕೊಟ್ಟಿದ್ದರು. ಲೆವಿನ್ ಆ ಕ್ಷೇತ್ರದ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಹೊತ್ತುಕೊಂಡನಂತರ ಹುಲ್ಲು ಗಾವಲನ್ನು ಪರೀಕ್ಷಿಸಿ, ಹುಲ್ಲು ಹೆಚ್ಚು ಬೆಲೆಬಾಳುತ್ತದೆಂದು ನಿಶ್ಚಯಿಸಿ, ಎಕರೆಗೆ ಎಂಟು ರೂಬಲ್ ನಿಗದಿಮಾಡಿದ್ದನು. ಅಷ್ಟು ಬೆಲೆ ಕೊಡಲಾಗದೆಂದು ರೈತರು ಹಟಹಿಡಿದಿದ್ದ ರಲ್ಲದೆ, ಲೆವಿನ್‌ನೇ ಸಂದೇಹಿಸಿದಂತೆ, ಇತರ ಗಿರಾಕಿಗಳು ಆ ಕ್ಷೇತ್ರದ ಹತ್ತಿರ ಸುಳಿಯ ದಂತೆ ಎಚ್ಚರಿಕೆ ವಹಿಸಿದ್ದರು. ಲೆವಿನ್‌ನೇ ಖುದ್ದಾಗಿ ಆ ಸ್ಥಳಕ್ಕೆ ಹೋಗಿ, ಭಾಗಶಃ ಕೊಯ್ಲನ್ನು ಕೂಲಿಕೊಟ್ಟು ಪೂರೈಸತಕ್ಕದ್ದೆಂದೂ, ಉಳಿದದ್ದನ್ನು ಪಾಲಿಗೆ ಕೊಟ್ಟು ಬಿಡತಕ್ಕದ್ದೆಂದೂ ಆಜ್ಞೆ ಮಾಡಿದನು. ರೈತರು ಎಷ್ಟೇ ಅಡ್ಡಿಗಳನ್ನೊಡ್ಡಿದರೂ, ಲೆವಿನ್ ಜಗ್ಗಲಿಲ್ಲ. ಮೊದಲನೆಯ ವರ್ಷ ಹುಲ್ಲಿಗೆ ಎರಡರಷ್ಟು ಕಿಮ್ಮತ್ತು ಪಡೆದನು. ಮೂರನೆಯ ವರ್ಷ (ಅಂದರೆ, ಹಿಂದಿನ ವರ್ಷ)ವೂ ರೈತರು ಎಂದಿನಂತೆ ವಿರೋಧಿಸಿದರು; ಆದರೆ ಲೆವಿನ್‌ನ ಇಚ್ಛೆಯಂತೆ ಹುಲ್ಲು ಕಟಾವಾಯಿತು. ಈ ವರ್ಷ ಮೂರರಲ್ಲೊಂದು ಭಾಗ ದಷ್ಟು ಪಾಲಿಗೆ ಕಟಾವು ಮುಗಿಸುವುದಾಗಿ ರೈತರು ಒಪ್ಪಿಕೊಂಡಿದ್ದರು. ಕಟಾವು ಮುಗಿದಿತ್ತೆಂದೂ, ಮಳೆಯ ಭಯದಿಂದಾಗಿ ಲೆಕ್ಕದ ಮನೆಯ ಗುಮಾಸ್ತನಿಗೆ ಹೇಳಿ ಕಳಿಸಲಾಗಿತ್ತೆಂದೂ, ಅವನ ಸಮ್ಮುಖದಲ್ಲಿ ಹುಲ್ಲನ್ನು ಪಾಲುಮಾಡಿ, ಹನ್ನೊಂದು ಮೆದೆಗಳನ್ನು ಧಣಿಯ ಪಾಲಿಗೆ ಹಂಚಲಾಗಿತ್ತೆಂದೂ ತಿಳಿಸಲು ಗ್ರಾಮಮುಖಂಡ ಬಂದಿದ್ದನು. ದೊಡ್ಡ ಹೊಲದಲ್ಲಿ ಎಷ್ಟು ಹುಲ್ಲು ಕಟಾವಾಗಿತ್ತೆಂಬ ಅವನ ಪ್ರಶ್ನೆಗೆ ಮುಖಂಡನ ಜಾರಿಕೆಯ ಉತ್ತರಗಳಿಂದಾಗಿ, ತನಗೆ ತಿಳಿಸದೆಯೆ ಹುಲ್ಲನ್ನು ಪಾಲು ಮಾಡುವಲ್ಲಿ ಅವನು ತೋರಿಸಿದ ತರಾತುರಿಯಿಂದಾಗಿ ಮತ್ತು ಆ ಮನುಷ್ಯನ ಸಂದೇಹ ಗ್ರಸ್ತ ನಡೆವಳಿಯಿಂದಾಗಿ ಏನೋ ಮೋಸ ನಡೆಯುತ್ತಿರಬೇಕೆಂದು ಲೆವಿನ್‌ನಿಗೆ ಮನವರಿಕೆ

ಯಾಯಿತು; ತಾನೇ ಆ ಸ್ಥಳಕ್ಕೆ ಹೋಗಿ, ಎಲ್ಲವನ್ನು ಅಜಮಾಯಿಸಿ ಮಾಡಬೇಕೆಂದವನು ನಿಶ್ಚಯಿಸಿಕೊಂಡನು.

ಅವನು ಊಟದ ಹೊತ್ತಿಗೆ ಹಳ್ಳಿ ಸೇರಿದನು. ತನ್ನ ಗೆಳೆಯ, ಮುದುಕನೊಬ್ಬನ ಲಾಯದಲ್ಲಿ ಕುದುರೆಯನ್ನು ಬಿಟ್ಟನು. ಆ ಮುದುಕನ ಮಡದಿ ತನ್ನಣ್ಣನಿಗೆ ಹಾಲೂಡುವ ದಾದಿಯಾಗಿದ್ದಳು. ಲೆವಿನ್ ಅವನನ್ನು ಹುಡುಕಾಡಿ, ಜೇನು ಸಾಕಣೆಕೇಂದ್ರದಲ್ಲಿ ಸಂಧಿಸಿದನು. ಆ ಮುದುಕನಿಂದ ಹುಲ್ಲುಬಣಬೆಯ ವಿಷಯವನ್ನರಿತುಕೊಳ್ಳುವುದೇ ಅವನ ಉದ್ದೇಶವಾಗಿತ್ತು. ಪಾರ್‌ಮೆನ್ ಎಂಬ ಹೆಸರಿನ ಆ ಸುಂದರ ಹರಟೆಮಲ್ಲ ಮುದುಕ ಲೆವಿನ್‌ನನ್ನು ಪ್ರೀತಿಯಿಂದ ಬರಮಾಡಿಕೊಂಡು, ತನ್ನ ಜೇನುಗೂಡುಗಳನ್ನವನಿಗೆ ತೋರಿಸಿ, ಜೇನುಹುಳುಗಳಿಗೆ ಸಂಬಂಧಿಸಿದ ಸಮಸ್ತ ವಿಷಯವನ್ನು, ಆ ವರ್ಷದ ಜೇನು ಹಿಂಡುಗಳ ಧಾಳಿಯನ್ನು ವಿವರಿಸಿದನು. ಆದರೆ ಲೆವಿನ್ ಕೊಯ್ಲಿನ ವಿಷಯವೆತ್ತಿಕೊಂಡಾಗ, ಅವನು ಅಸ್ಪಷ್ಟವಾಗಿ, ವಿಮನಸ್ಕನಾಗಿ ನುಡಿದನು. ಅವನ ಮಾತುಕತೆಗಳಿಂದ ಲೆವಿನ್‌ನ ಶಂಕೆ ದೃಢವಾಯಿತು. ಅವನು ಹುಲ್ಲುಗಾವಲಿಗೆ ಹೋಗಿ, ಹುಲ್ಲು ಮೆದೆಗಳನ್ನು ನೋಡಿದನು. ಒಂದೊಂದು ಬಣಬೆಯಲ್ಲಿಯೂ ಐವತ್ತು ಗಾಡಿಗಳಿಗಿಂತ ಹೆಚ್ಚು ಹುಲ್ಲಿರಲಾರದೆಂದು ಅವನಿಗೆ ಮನದಟ್ಟಾಯಿತು. ರೈತರ ವಂಚನೆಯನ್ನು ಬಯಲಿಗೆಳೆಯುವ ಸಲುವಾಗಿ ಅವನೊಂದು ಉಪಾಯ ಹೂಡಿದನು. ಗಾಡಿಗಳನ್ನು ತರಿಸಿ, ಒಂದು ಬಣಬೆಯ ಹುಲ್ಲನ್ನು ಕಣಜದ ಬಳಿಗೆ ಸಾಗಿಸುವಂತೆ ಆಜ್ಞೆಮಾಡಿದನು. ಆ ಬಣಬೆಯಲ್ಲಿ ಮೂವತ್ತೆರಡು ಗಾಡಿಯಷ್ಟು ಮಾತ್ರ ಹುಲ್ಲಿತ್ತೆಂದು ಅವನಿಗೆ ಸ್ಪಷ್ಟವಾಯಿತು. ಹುಲ್ಲನ್ನು ಅಡಕಗೊಳಿಸಲು ಸಾಧ್ಯವೆಂದೂ, ಬಣಬೆಯಲ್ಲಿದ್ದಾಗ ಅದು ಮುದುರಿಕೊಳ್ಳುತ್ತದೆಂದೂ, ಅದನ್ನು ಪ್ರಾಮಾಣಿಕವಾಗಿ ಪಾಲು ಮಾಡಲಾಗಿತ್ತೆಂದೂ ಮುಖಂಡ ಮೇಲಿಂದ ಮೇಲೆ ಆಣೆ ಭಾಷೆ ಇಟ್ಟುಕೊಂಡರೂ, ತನ್ನ ಅನುಮತಿಯಿಲ್ಲದೆ ಹುಲ್ಲನ್ನು ಪಾಲುಮಾಡಲಾಗಿತ್ತೆಂದು ಲೆವಿನ್ ಒತ್ತಾಯಿಸಿದನು; ಆ ಕಾರಣಕ್ಕಾಗಿ, ಐವತ್ತು ಬಂಡಿಗೊಂದು ಬಣಬೆಯೆಂಬ ಆಧಾರದ ಮೇಲೆ, ತನ್ನ ಪಾಲಿಗೆ ನಿಗದಿಸಿರುವ ಹನ್ನೊಂದು ಬಣಬೆಗಳನ್ನು ಒಪ್ಪಿಕೊಳ್ಳಲಾಗದೆಂದವನು ಸ್ಪಷ್ಟಪಡಿಸಿದನು. ಬಣಬೆಗೆ ಐವತ್ತು ಬಂಡಿಗಳ ಲೆಕ್ಕಾಚಾರದಂತೆ ಹನ್ನೊಂದು ಬಣಬೆಗಳನ್ನು ರೈತರೇ ಪಡೆದುಕೊಳ್ಳತಕ್ಕದ್ದೆಂದೂ, ದಣಿಯ ಪಾಲನ್ನು ಹೊಸದಾಗಿ ಹಂಚತಕ್ಕದ್ದೆಂದೂ ಸುದೀರ್ಘ ಸಂವಾದದನಂತರ ತೀರ್ಮಾನವಾಯಿತು. ಸಂಧಾನಗಳೂ ಹುಲ್ಲಿನ ಮರುಹಂಚಿಕೆಯೂ ಅಪರಾಹ್ನ ತುಂಬ ಹೊತ್ತಿನ ತನಕ ಜರುಗಿದುವು. ಕೊಟ್ಟಕೊನೆಯ ಹುಲ್ಲೊಡ್ಡನ್ನು ಪಾಲುಮಾಡಿದನಂತರ, ಉಳಿದ ಕೆಲಸದ ಮೇಲ್ವಿಚಾರಣೆಯನ್ನು ಗುಮಾಸ್ತನಿಗೊಪ್ಪಿಸಿ, ರೈತರಿಂದ ಕಿಕ್ಕಿರಿದಿದ್ದ ಹುಲ್ಲುಗಾವಲಿನ ದೃಶ್ಯಸೌಂದರ್ಯವನ್ನು ಸವಿಯುವ ಸಲುವಾಗಿ, ನೀರಂಜಿ ಕೊಂಬೆ ಬಾಗಿದ್ದ ಹುಲ್ಲು ಬಣಬೆಯ ಮೇಲೆ ಲೆವಿನ್ ಕುಳಿತುಕೊಂಡನು.

ಅವನೆದುರಿಗೆ, ಜೌಗುಪ್ರದೇಶದಾಚೆಗಿನ ಹೊಳೆಮುರಿಯಲ್ಲಿ, ಉಲ್ಲಾಸದಿಂದ ಹರಟುತ್ತಿದ್ದ ರೈತ ಸ್ತ್ರೀಯರ ವರ್ಣರಂಜಿತ ಪಂಕ್ತಿ ಚಲಿಸುತ್ತಿತ್ತು; ಅವರು ಚೆಲ್ಲಾಪಿಲ್ಲಿಯಾಗಿದ್ದ ಹುಲ್ಲನ್ನೊಟ್ಟುಗೂಡಿಸಿ, ಹಸುರು ಕಾಳಿ ಪೈರಿನ ಮೇಲೆ ಬೂದುಬಣ್ಣದ

ಅಲೆಗಳಂತೆ ತೋರುತ್ತಿದ್ದ ಹುಲ್ಲುಗಳಾಗಿ ಬೀಳುತ್ತಿದ್ದುವು. ಹೆಂಗಸರ ಹಿಂದುಗಡೆಯೇ ಕುಂಟೆಗೋಲು ಹಿಡಿದು ಬಂದ ಗಂಡಸರು ಹುಲ್ಲುಗಳನ್ನು ಅಗಲವೂ ಎತ್ತರವೂ ಆದ ಮೆದೆಗಳನ್ನಾಗಿ ಪರಿವರ್ತಿಸುತ್ತಿದ್ದರು. ಕೊಯ್ಲು ಮುಗಿದ ಹೊಲದಲ್ಲಿ ಎಡಗಡೆಗೆ ಬಂಡಿಗಳು ಗಡಗಡಿಸುತ್ತಿದ್ದುವು; ಒಂದಾದ ಮೇಲೊಂದು ಕರಗಿ ಹೋಗುತ್ತಿದ್ದ ಕಂಪುಹುಲ್ಲಿನ ಕಿರುಬಣಬೆಗಳು ಗಾಡಿಗಳ ಮೇಲೆ ಪರ್ವತಾಕಾರವಾಗಿ ಎದ್ದು, ಹಿಂದೆ ಮುಂದೆ ಅಕ್ಕಪಕ್ಕಗಳಲ್ಲಿ ಹಾಗೂ ಕುದುರೆದೊಂಡಿಗಳ ಮೇಲೆ ಜೋಲಾಡುತ್ತಿದ್ದುವು.

'ಹವೆ ಹೀಗೆಯೇ ಚೆನ್ನಾಗಿರುವುದಾದರೆ, ಸೊಗಸಾದ ಮೇವು ಕೈಗೆ ಹತ್ತುತ್ತದೆ' ಎಂದು ಲೆವಿನ್‌ನ ಪಕ್ಕದಲ್ಲಿ ಕುಳಿತಿದ್ದ ಪಾರ್‌ಮೆನ್ ನುಡಿದನು. 'ನಿಮಗೂ ಒಳ್ಳೆಯ ಮೇವಿದೆ' ಜನ ಹೇಗೆ ಕೆಲಸ ಮಾಡುತ್ತಿದ್ದಾರೆ, ನೋಡಿ. ಬಾತುಕೋಳಿಗಳು ಕಾಳು ನುಂಗುವಂತೆ!' ಎಂದವನು ಕಣ್ಮರೆಯಾಗುತ್ತಿದ್ದ ಹುರಿಗಳ ಕಡೆಗೆ ಕೈತೋರಿಸಿದನು. 'ಮಧ್ಯಾಹ್ನದಿಂದೀಚೆಗೆ ಅರ್ಧ ಹೊಲ ಮುಗಿಸಿದ್ದಾರೆ'

'ಜಾಗ್ರತೆ ಬಂದು ಕೊನೆಯ ಬಂಡಿ ತುಂಬಿಕೊಂಡು ಹೋಗುತ್ತೀಯೇನಪ್ಪಾ?' ಎಂದವನು ಖಾಲಿ ಬಂಡಿಯ ತಿಕಡಿಯ ಮೇಲೆ ನಿಂತುಕೊಂಡು, ಹಗ್ಗದ ಲಗಾಮುಗಳ ಕೊನೆಗಳನ್ನು ಚಿಮ್ಮುತ್ತ, ಬೇಗಬೇಗ ಗಾಡಿ ಓಡಿಸುತ್ತಿದ್ದ ಯುವಕನಿಗೆ ಕೂಗಿ ಹೇಳಿದನು.

'ಇದೇ ಕೊನೆಯೇನಪ್ಪ ?' ಎಂದು ಯುವಕ ಕುದುರೆಯನ್ನೆಳೆದು ನಿಲ್ಲಿಸಿ, ಬಂಡಿಯ ಹಿಂಭಾಗದಲ್ಲಿ ಕುಳಿತಿದ್ದ ಕೆಂಪುಗೆನ್ನೆಯ ಹುಡುಗಿಯ ಕಡೆಗೆ ಮುಗುಳುನಗೆ ಚೆಲ್ಲಿ, ಅವಳಿಂದ ಮಂದಹಾಸದ ಪ್ರತ್ಯುತ್ತರವನ್ನು ಪಡೆದು, ತನ್ನ ತಂದೆಯನ್ನು ಕೇಳಿದನು. ಮರುಕ್ಷಣದಲ್ಲಿಯೇ ಯುವಕ ಕುದುರೆಯನ್ನು ಚಾವಟಿಸಿದನು.

'ನಿನ್ನ ಮಗನೇನು ?' ಎಂದು ಲೆವಿನ್ ಕೇಳಿದನು.

'ಕೊನೆಯವನು' ಎಂದು ಮುದುಕ ನಕ್ಕನು.

'ಚಲೋ ಹುಡುಗ'

'ಹೌದು'

'ಮದುವೆಯಾಗಿದೆಯೆ ?'

'ಕಳೆದ ಸಂತಫಿಲಿಪ್ ದಿನಕ್ಕೆರಡು ವರ್ಷವಾಯಿತು.'

'ಮಕ್ಕಳು ?'

'ಮಕ್ಕಳು ! ಅವನು ಮಗುವಿನಷ್ಟೇ ಮುಗ್ಧ. ಒಂದು ವರ್ಷದ ತನಕ ಅದರ ಪರಿಜ್ಞಾನವೇ ಅವನಿಗಿರಲಿಲ್ಲ. ಜತೆಗೆ ಅವನಿಗೆ ನಾಚಿಕೆಬೇರೆ' ಎಂದು ಮುದುಕ ನುಡಿದನು. 'ನಿಮಗೆ ಮೇವು ಚೆಣೆಯಾಗಿದೆ! ಅಂಥ ಮೇವು ಎಂದೂ ಲಭ್ಯವಾಗಿರಲಿಲ್ಲ.' ಎಂದವನು ವಿಷಯಾಂತರ ಮಾಡುವ ಕಾತರತೆಯಿಂದ ಉದ್ಗಾರತೆಗೆದನು.

ಪಾರ್‌ಮೆನ್‌ನ ಮಗ ಐವಾನ್‌ನ ಮತ್ತು ಅವನ ಹೆಂಡತಿಯ ಕಡೆಗೆ ಲೆವಿನ್‌ನ ಗಮನ ಹರಿಯಿತು ಅವರು ಅನತಿ ದೂರದಲ್ಲಿ ಬಂಡಿಯ ಮೇಲೆ ಹುಲ್ಲು ತುಂಬುತ್ತಿದ್ದರು. ಐವಾನ್ ಬಂಡಿಯ ಮೇಲೆ ನಿಂತುಕೊಂಡು, ತನ್ನ ಸುಂದರ ಯುವಪತ್ನಿ ಕೈಕೈಗಟ್ಟಿ, ಮೇಲೆತ್ತಿ, ತನಗೆ ಕೊಡುತ್ತಿದ್ದ ಹುಲ್ಲನ್ನು ತೆಗೆದುಕೊಂಡು, ಹರಡಿ, ತುಳಿತುಳಿದು,

ಪೇರಿಸುತ್ತಿದ್ದನು. ಆವಳು ಸರಾಗವಾಗಿ, ಚುರುಕಾಗಿ ಉತ್ಸಾಹದಿಂದ, ಕೆಲಸಮಾಡು ತ್ತಿದ್ದಳು. ಸ್ವಲ್ಪಕಾಲದಿಂದ ಕೆಳಗೆಬಿದ್ದಿದ್ದ ಹುಲ್ಲು ಮೇಟಿಗೋಲಿಗೆ ಸುಲಭವಾಗಿ ದಕ್ಕು ತ್ತಿರಲಿಲ್ಲ. ಹುಲ್ಲೊಳಗೆ ಮೇಟಿಗೋಲು ತೂರಿಸುವ ಮುನ್ನ ತನ್ನ ಕೈಗಳಿಂದವಳು ಗುಡ್ಡೆ ಯನ್ನು ಅಲುಗಿಸಬೇಕಾಗಿತ್ತು. ತರುವಾಯ ಅವಳು ಸರಾಗ ಚಟುಲ ಚಲನೆಯಿಂದ ತನ್ನ ದೇಹದ ಭಾರವನ್ನೆಲ್ಲ ಕೋಲಿನ ಮೇಲೆ ಬಿಡುತ್ತಿದ್ದಳು. ಮರುಕ್ಷಣದಲ್ಲಿಯೇ ಅವಳು ಕೆಂಪು ಒಡ್ಯಾಣ ಬಳಸಿದ ಬೆನ್ನನ್ನು ನಸಿನಗೊಳಿಸಿ, ಬಿಳಿಯ ರವಿಕೆಯ ಹದರ ದೊಳಗಿನ ತುಂಬಿದೆದೆಯನ್ನುಬ್ಬಿಸಿ, ಕೌಶಲದಿಂದ ಕೋಲಹಿಡಿಯನ್ನು ತೂಗಾಡಿಸಿ, ಹುಲ್ಲನ್ನು ಮೇಲೆತ್ತಿ ಹಿಡಿದಳು. ಒಂದು ಕ್ಷಣವಾದರೂ ಅವಳಿಗೆ ಆಯಾಸವಾಗಬಾರದೆಂಬ ಕಾತರತೆಯಲ್ಲಿದ್ದನೆಂಬಂತೆ ಐವಾನ್ ತಟಕ್ಕನೆ ಅಗಲವಾಗಿ ಚಾಚಿದ ತೋಳುಗಳಿಂದ ಹಿಡಿದುಕೊಂಡು, ಗಾಡಿಯುಲ್ಲದನ್ನು ಹರಡಿದನು. ಕೊಟ್ಟಕೊನೆಯ ಚೂರುಪಾರು ಗಳನ್ನು ಗೋಚಿ ಮೇಲೆಸೆದನಂತರ, ಆ ಹೆಣ್ಣು ತನ್ನ ಕೊರಳಿನ ಮೇಲೆ ಬಿದ್ದಿದ್ದ ಸಣ್ಣ ತುಂಡುಗಳನ್ನು ಕೊಡವಿ, ತನ್ನ ಬಿಳಿ ಹಣೆಗೆ ಬಿಸಿಲುಮುಚ್ಚಿಸೋಕದಂತೆ ತಡೆಯಾಗಿದ್ದು, ಬಿಳಿಯ ಹುಬ್ಬಿನ ಮೇಲೆ ಜೋಲಾಡುತ್ತಿದ್ದ ಕೆಂಪು ಚೌಕವನ್ನು ಸರಿಪಡಿಸಿಕೊಂಡು, ಹೇರನ್ನು ಬಿಗಿಯುವ ಸಲುವಾಗಿ ಗಾಡಿಯ ಕೆಳಗೆ ತೆವಳಿದಳು. ಅಡ್ಡ ಪಟ್ಟಿಗಳಿಗೆ ಹುರಿ ಬಿಗಿಯುವ ಬಗೆಯನ್ನು ಐವಾನ್ ಅವಳಿಗೆ ವಿವರಿಸಿದನು. ಅವಳು ಸೊಲ್ಲಿಸಿದ ಯಾವುದೋ ಮಾತಿಗೆ ಅವನು ಗಹಗಹಿಸಿ ನಕ್ಕನು. ಓಜೋನ್ವಿತವೂ, ತಾರುಣ್ಯ ಪ್ರಜ್ವಲಿತವೂ, ನವಜಾಗ್ರತವೂ ಆದ ಪ್ರೇಮ ಭಾವ ಆ ಇಬ್ಬರ ಮುಖಗಳಲ್ಲಿಯೂ ಮುಕ್ಕುಳಿಸುತ್ತಿತ್ತು.

೧೨

ಹೇರನ್ನು ಬಹುಬೇಗ ಬಿಗಿಗೊಳಿಸಲಾಯಿತು. ಐವಾನ್ ಕೆಳಗೆ ಧುಮುಕಿ, ಮಿಣು ಮಿಣನೆ ಮಿಂಚುವ ತನ್ನ ಕುದುರೆಯ ಲಗಾಮುಹಿಡಿದು, ಗಾಡಿಗೆ ಹೂಡಿದನು. ಅವನ ಮಡದಿ ಮೇಟಿಗೋಲನ್ನು ಹುಲ್ಲು ಬಂಡಿಯ ಮೇಲೆಸೆದು, ದೃಢವಾಗಿ ಹೆಜ್ಜೆ ಇಡುತ್ತ, ತೋಳುಗಳನ್ನು ತೂಗಾಡಿಸುತ್ತ, ಸ್ತ್ರೀಸಮುದಾಯದ ಕಡೆಗೆ ನಡೆದಳು. ಐವಾನ್ ರಸ್ತೆಯನ್ನು ತಲುಪಿದಾಗ, ಅವನು ಸಹ ಬಂಡಿಗಳ ಸಾಲಿನಲ್ಲಿ ಸೇರಿಕೊಂಡನು. ಹೆಗಲು ಗಳ ಮೇಲೆ ಮೇಟಿಗೋಲುಗಳನ್ನು ಹೊತ್ತುಕೊಂಡು, ಥಳಥಳಿಸುವ ಉಡುಪು ತೊಟ್ಟು ಕೊಂಡು, ಗಟ್ಟಿಯಾಗಿ ಹರಟುತ್ತ, ನಗುತ್ತ ಹೆಂಗಸರು ಗಾಡಿಗಳನ್ನನುಸರಿಸುತ್ತಿದ್ದರು. ನಯನಾಜೋಕುಗಳಿಲ್ಲದ, ಹಳಗದ ಸ್ತ್ರೀಧ್ವನಿಯೊಂದು ಹಾಡಾಗಿ ಪರಿವರ್ತನೆಗೊಂಡು, ಪಲ್ಲವಿ ಮುಗಿಯುವ ತನಕ ಒಂಟಿಯಾಗಿಯೇ ಗಾನಗೈದಿತ್ತು; ಅಷ್ಟರಲ್ಲಿ ತಾರ ಮಂದ್ರ ಸ್ಥಾಯಿಗಳ, ಮಧುರಕಠಿನ ಧ್ವನಿಗಳ, ಘಂಟಾಸದೃಶ ಓಜೋನ್ವಿತ ನಿನಾದದ ಹತ್ತು ಹಲವು ಬಗೆಬಗೆಯ ಕಂಠಗಳು ಆ ಪಲ್ಲವಿಯನ್ನು ಪುನರುಕ್ತಿಸಿದುವು.

ಹಾಡುಗಾತಿಯರು ಲೆವಿನ್‌ನನ್ನು ಸಮಿಾಪಿಸಿದರು. ವಿನೋದಹಾಸದ ಗುಡುಗು ಸಿಡಿಲುಗಳು ತನ್ನ ಮೇಲೆರಗಿದಂತೆ ಅವನಿಗೆ ತೋರಿತು. ಆ ಗುಡುಗು ಮೇಲೇರಿದಾಗ ಅವನಿಗೆ ದಿಗ್ಭ್ರಾಂತವಾಯಿತು; ಒಬ್ಬನೆಯೇ ಅವನೇರಿದ್ದ ಹುಲ್ಲಿನ ಮೆದೆ, ಇತರ ಬಣಬೆ

ಗಳು, ಬಂಡಿಗಳು, ಹುಲ್ಲುಗಾವಲು ಮತ್ತು ದೂರದ ಹೊಲಗಳು—ಎಲ್ಲವೂ ಅಲ್ಲಾಡಿದುವು; ಅಡ್ಡೈಸುತ್ತಿದ್ದ ಕಾಕುಕೇಕೆ ಸಿಳ್ಳುಬೊಬ್ಬೆಗಳ ನಡುವೆಯೂ ಅವು ಆ ಸಂಗೀತಕ್ಕೆ ಹೊಳಲುಗೊಡುತ್ತಿದ್ದುವು. ಆ ವಿನೋದಗಾರರನ್ನು ಕಂಡು ಲೆವಿನ್ ಕರುಬುವಂತಾಯಿತು. ಜೀವಾನಂದದ ಆ ಸಂಭ್ರಮದಲ್ಲಿ ಪಾಲ್ಗೊಳ್ಳುವ ಮನಸ್ಸು ಅವನಿಗಾಯಿತು. ಆದರವನು ಅದರಲ್ಲಿ ಪಾಲ್ಗೊಳ್ಳಲಾರದೆ, ಒರಗಿದ್ದೆಡೆಯಿಂದಲೇ ಅವರನ್ನು ನೋಡುವ, ಅವರ ಸಂಗೀತ ಮಾತುಕತೆಗಳನ್ನು ಕೇಳುವ ತವಕದಿಂದಿದ್ದನು. ಹಾಡುಗಾರರ ಆಕೃತಿ ಧ್ವನಿಗಳು ಕಣ್ಮರೆ ಕಿವಿಮರೆಯಾದನಂತರ, ಅವನ ಏಕಾಂತತಾ ಭಾವ, ಅವನ ದೇಹಾಲಸ್ಯ ಹಾಗೂ ಆ ವಿಶಿಷ್ಟ ಜಗತ್ತಿನಲ್ಲಿ ತಾನೊಬ್ಬ ಪರಕೀಯನೆಂಬ ಕಾರಣ ಅವನನ್ನು ನಿರುತ್ಸಾಹಗೊಳಿಸಿದುವು.

ಕೆಲವು ಮಂದಿ ರೈತರು ಹುಲ್ಲಿನ ವಿಷಯದಲ್ಲಿ ಅವನೊಡನೆ ಜೋರಾಗಿ ಜಗಳವಾಡಿದ್ದರು, ಕೆಲವರು ಉದ್ದೇಶಪೂರ್ವಕವಾಗಿ ಅವನನ್ನು ವಂಚಿಸಿದ್ದರು; ಕೆಲವು ರೈತರನ್ನು ಅವನೇ ಅವಮಾನಗೊಳಿಸಿದ್ದನು; ಆದರೂ ಆ ರೈತರೇ ಹೊರಡುವಾಗ ಲವಲವಿಕೆಯಿಂದ ಅವನಿಗೆ ಮಣಿಯುತ್ತಿದ್ದರು. ಅವನ ಬಗ್ಗೆ ಅವರ ಮನಸ್ಸಿನಲ್ಲಿ ಯಾವೊಂದು ಬಗೆಯ ಅಸಮಾಧಾನವೂ ಉಳಿದಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ತಾವೆಸಗಿದ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸುವುದಿರಲಿ, ಅವನನ್ನು ವಂಚಿಸಲು ತಾವು ಪ್ರಯತ್ನಿಸಿದ್ದುಂಟೆಂಬ ನೆನಪು ಸಹ ಅವರ ಮನಸ್ಸಿನಲ್ಲುಳಿದಿರಲಿಲ್ಲ. ಅದೆಲ್ಲವೂ ಸಾಮೂಹಿಕ ಪ್ರಯತ್ನದ ಆನಂದಸಾಗರದಲ್ಲಿ ಮುಳುಗಿಹೋಗಿತ್ತು. ಹಗಲು ಭಗವಂತನ ದಾನ; ಶಕ್ತಿಯೂ ಭಗವಂತನ ದಾನ; ಅವೆರಡೂ ದುಡಿಮೆಗಾಗಿ ಸಮರ್ಪಿತವಾಗಿದ್ದುವು; ದುಡಿಮೆಯ ಪ್ರತಿಫಲವೆಂದರೆ ಅದೇನೆ. ಯಾರಿಗಾಗಿ ಅವರು ದುಡಿದದ್ದು? ಅದರ ಫಲ ಯಾರಿಗೆ? ಅಂಥ ವಿಚಾರಗಳು ಅಲ್ಪ ಮಾತ್ರವಲ್ಲ, ಅನುಚಿತ.

ಲೆವಿನ್ ಈ ಬಗೆಯ ಬದುಕನ್ನು ಬಹುವಾಗಿ ಮೆಚ್ಚಿಕೊಂಡಿದ್ದನು; ಅಂಥ ಬದುಕನ್ನು ನಡೆಸುತ್ತಿದ್ದ ಜನರ ಬಗ್ಗೆ ಅವನು ಹಲವು ಸಲ ಅಸೂಯೆಪಟ್ಟುಕೊಂಡದ್ದೂ ಉಂಟು. ತನಗೆ ಭಾರವಾಗಿ ತೋರುತ್ತಿದ್ದ ವ್ಯರ್ಥ, ನಿಷ್ಕ್ರಿಯವೂ ಕೃತಕವೂ ಆದ ಸೋಮಾರಿತನದ ಬದುಕನ್ನು ತನಗೆ ತುಂಬ ಪ್ರಿಯವಾಗಿದ್ದ ಸರ್ವಸಾಧಾರಣ ಕಾಯಕದ ಶುದ್ಧ ಜೀವನದ ಕಡೆಗೆ ತಿರುಗಿಸಬೇಕೆಂಬ ಆಲೋಚನೆ ಮೊತ್ತ ಮೊದಲ ಬಾರಿಗೆ—ಅದರಲ್ಲಿಯೂ ಐವಾನ್ ಹಾಗೂ ಅವನ ತರುಣಸತಿಯ ಪ್ರೇಮಸಂಬಂಧವನ್ನು ಲಕ್ಷಿಸಿದನಂತರ— ಅವನ ಮುಂದೆ ಸ್ಪಷ್ಟವಾಗಿ ವ್ಯಕ್ತವಾಗಿ ಮೈದೋರಿತು.

ಅವನ ಪಕ್ಕದಲ್ಲಿ ಕುಳಿತಿದ್ದ ಮುದುಕ ಸ್ವಲ್ಪ ಹೊತ್ತಿಗೆ ಮುಂಚೆ ಮನೆಗೆ ಹಿಂದಿರುಗಿದ್ದನು; ರೈತರು ಚೆದರಿಹೋಗಿದ್ದರು; ಹತ್ತಿರ ವಾಸಿಸುತ್ತಿದ್ದವರು ಮನೆಗೆ ಹೋಗಿದ್ದರು; ದೂರದಿಂದ ಬಂದಿದ್ದವರು ಸಂಜೆಯೂಟಕ್ಕಾಗಿ ಮತ್ತು ರಾತ್ರಿ ತಂಗಣೆಗಾಗಿ ಹುಲ್ಲುಗಾವಲಿನಲ್ಲಿ ಸೇರಿದ್ದರು. ಅವರ ಕಣ್ಣಿಗೆ ಬೀಳದ ಲೆವಿನ್ ಬಣಬೆಯ ಮೇಲೊರಗಿಕೊಂಡೇ ಸುತ್ತಮುತ್ತ ನಡೆಯುತ್ತಿದ್ದ ಸಂಗತಿಗಳನ್ನು ವೀಕ್ಷಿಸುತ್ತಿದ್ದನು, ಆಲಿಸುತ್ತಿದ್ದನು, ಆಲೋಚಿಸುತ್ತಿದ್ದನು. ಕಾವಲಲ್ಲಿ ತಂಗಿದ್ದ ಜನರಿಗೆ ಆ ಅಲ್ಪಾವಧಿಯ ಬೇಸಗೆಯಿರುಳಿನಲ್ಲಿ [illegible]ರಿಯಾಗಿ ನಿದ್ದೆ ಹತ್ತಲಿಲ್ಲ. ಮೊದಮೊದಲು ಊಟ ಸಾಗುತ್ತಿದ್ದಂತೆ

ಅವರ ಉಲ್ಲಾಸದ ಮಾತುಕತೆ ನಗುಗಳು, ತದನಂತರ ಮತ್ತೆ ಅವರ ವಿನೋದ ಕೇಳಿ ಸಂಗೀತಗಳು ಅವನ ಕಿವಿಯ ಮೇಲೆ ಬೀಳುತ್ತಿದ್ದುವು.

ಸುಖ ಸಂತೋಷಗಳ ಮನೋಭಾವ ಹೊರತಾಗಿ, ಸುದೀರ್ಘದಿನದ ಕಠಿನ ಶ್ರಮದ ಚಿಹ್ನೆಗಳು ಅವರ ದೇಹದಲ್ಲಾಗಲಿ, ಮಾತುಕತೆಗಳಲ್ಲಾಗಲಿ ಸ್ವಲ್ಪವೂ ಕಾಣುತ್ತಿರಲಿಲ್ಲ. ಉಷಃಕಾಲದ ಹೊತ್ತಿಗೆ ಎಲ್ಲವೂ ನಿಶ್ಶಬ್ದವಾಗಿತ್ತು. ನಿಶಾಶಬ್ದಗಳಲ್ಲದೆ ಬೇರೇನೂ ಕೇಳಿಸುತ್ತಿರಲಿಲ್ಲ; ಜೌಗು ಪ್ರದೇಶದಲ್ಲಿ ಮಂಡೂಕಗಳ ನಿರಂತರ ವಟವಟ; ಮುಂಜಾನೆಯ ಕಾವಲಲ್ಲಿ ಮೇಲೇಳುತ್ತಿದ್ದ ಮಂಜಿನೊಡಲೊಳಗಿದ್ದ ಕುದುರೆಗಳ ಘೂರ್ಣನ. ಲೆವಿನ್ ಹಠಾತ್ತನೆ ಮೇಲೆದ್ದು ಬಣಬೆಯಿಂದಿಳಿದನು. ರಾತ್ರಿಯವಸಾನ ವನ್ನು ನಕ್ಷತ್ರಗಳು ಸಾರುತ್ತಿದ್ದುವು.

'ಈಗ ನಾನೇನು ಮಾಡಲಿ? ಅದನ್ನೆಲ್ಲ ಕಾರ್ಯಗತಗೊಳಿಸುವುದಾದರೂ ಹೇಗೆ?' ಎಂದವನು ತನ್ನೊಳಗೆ ತಾನು ಪ್ರಶ್ನಿಸಿಕೊಂಡನು; ಆ ಅಲ್ಪಾವಧಿಯ ರಾತ್ರಿಯಲ್ಲಿ ತಾನನುಭವಿಸಿದ, ಪರಿಭಾವಿಸಿದ, ಆಲೋಚಿಸಿದ ಭಾವನೆಗಳಿಗೆ ರೂಪು ಕೊಡಲು ಪ್ರಯತ್ನಿಸಿದನು. ಅವನ ಭಾವನಾಲೋಚನೆಗಳಲ್ಲಿ ಮೂರು ಪ್ರತ್ಯೇಕ ಸರಣಿಗಳಿದ್ದುವು. ಹಳೆಯ ಜೀವನ ವಿಧಾನದ ತ್ಯಾಜ್ಯ, ನಿಷ್ಪ್ರಯೋಜಕ ಜ್ಞಾನದ ಮತ್ತು ಅನಾವಶ್ಯಕ ಶಿಕ್ಷಣದ ವರ್ಜ್ಯ ಒಂದು ಸರಣಿಗೆ ಸಂಬಂಧಿಸಿದ್ದುವು. ಅವುಗಳ ತ್ಯಾಜ್ಯದಿಂದ ಅವನಿಗೆ ತೃಪ್ತಿಯಾಯಿತು; ಆ ತ್ಯಾಗ ಸುಲಭವಾಗಿತ್ತು, ಸರಾಗವಾಗಿತ್ತು. ತಾನು ಮುಂದೆ ಬದುಕಬೇಕಾಗಿದ್ದ ಬಗೆಯೇ ಎರಡನೆಯ ಆಲೋಚನಾ ಸರಣಿಗೆ ಸೇರಿದುದಾಗಿತ್ತು. ಆ ಪರಿಯ ಜೀವನದ ಪರಿಶುದ್ಧತೆ, ಸರಳತೆ ಮತ್ತು ನ್ಯಾಯಪರತೆಯ ಬಗ್ಗೆ ಅವನಿಗೆ ಸ್ವಲ್ಪವೂ ಸಂದೇಹವಿರಲಿಲ್ಲ. ಸದ್ಯದ ಜೀವನದಲ್ಲಿ ಕಾಣದ ತೃಪ್ತಿ ಶಾಂತಿ ಮತ್ತು ಮೌಲ್ಯಪ್ರಜ್ಞೆ ಅವರಲ್ಲಿ ಲಭಿಸುತ್ತದೆಂಬ ಭರವಸೆ ಅವನಿಗಿತ್ತು. ವರ್ತಮಾನ ಜೀವನದ ಕೊರತೆಯ ಅರಿವು ಅವನನ್ನು ಆಗಾಗ್ಗೆ ಪೀಡಿಸುತ್ತಿತ್ತು. ಹಳೆಯ ಜೀವನದಿಂದ ಹೊಸ ಜೀವನಕ್ಕೆ ಸಂಕ್ರಮಣಗೊಳ್ಳುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಯ ಸುತ್ತ ಮೂರನೆಯ ಸರಣಿ ಹೆಣೆದುಕೊಂಡಿತ್ತು. ಸುಸ್ಪಷ್ಟವಾದ ಪರಿಹಾರ ಗೋಚರಿಸಲಿಲ್ಲ. 'ನಾನು ಮದುವೆಯಾಗಬೇಕೆ? ನಾನು ದುಡಿಯಬೇಕೆ? ದುಡಿಯಬೇಕಾದ ಅಗತ್ಯ ವಿದೆಯೆ? ನಾನು ಪೊಕ್ರೊವ್‌ಸ್ಕಾಯ್ ತ್ಯಜಿಸಬೇಕೆ? ನಾನು ಭೂಮಿ ಕೊಳ್ಳಬೇಕೆ? ರೈತ ಸಮುದಾಯದ ಸದಸ್ಯನಾಗಬೇಕೆ? ಕೃಷಿಕನ ಮಗಳನ್ನು ಮದುವೆಯಾಗುವುದೆ? ಆ ಬಗ್ಗೆ ಮುಂದುವರಿಯುವ ಬಗೆ ಹೇಗೆ?' ಎಂದವನು ಮತ್ತೆ ಮತ್ತೆ ತನಗೆ ತಾನೆ ಪ್ರಶ್ನಿಸಿಕೊಂಡನು; ಉತ್ತರ ಮಾತ್ರ ಸಿಗಲಿಲ್ಲ. 'ಇಡೀ ರಾತ್ರಿ ನಾನು ಮಲಗಲಿಲ್ಲ. ಆದರಿಂದಾಗಿ ಪ್ರಶ್ನೋತ್ತರವನ್ನು ನಾನು ನಿರೀಕ್ಷಿಸಲಾರೆ' ಎಂದವನು ಸಮಾಧಾನ ತಂದುಕೊಂಡನು. 'ಹಿಂದಿನಿಂದ ಆ ವಿಷಯ ಕುರಿತು ಆಲೋಚಿಸುತ್ತೇನೆ. ಒಂದು ಸಂಗತಿ ಮಾತ್ರ ದಿಟ: ಈ ಇರುಳು ನನ್ನ ಹಣೆಬರಹವನ್ನು ನಿರ್ಧರಿಸಿದೆ. ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದ ನನ್ನ ಹಿಂದಿನ ಕನಸುಗಳೆಲ್ಲ ಸತ್ಯವಲ್ಲ, ಸುಳ್ಳು. ವಾಸ್ತವವಾಗಿ ಎಲ್ಲವೂ ಸುಲಭ, ಎಲ್ಲವೂ ಉತ್ತಮ.'

'ಅಹ, ಅದೆಷ್ಟು ಸುಂದರವಾಗಿದೆ!' ಎಂದವನು ತನ್ನ ತಲೆಯ ಮೇಲೆ ನೇರವಾಗಿ ಆಕಾಶದ ಮಧ್ಯದಲ್ಲಿ ನೆಲೆನಿಂತಿದ್ದ ಮುತ್ತಿನ ಛಾಯೆ ಚಿಪ್ಪುಸಂಪಿಷ್ಟ ಬಿಳಿಮುಗಿಲಿಯ

ಮೋಡಗಳ ಕಡೆಗೆ ನೋಡುತ್ತ ಆಲೋಚಿಸಿದನು. 'ಅತ್ಯಂತ ರಮಣೀಯವಾದ ಈ ರಾತ್ರಿಯಲ್ಲಿ ಪ್ರತಿಯೊಂದೂ ಎಷ್ಟು ಸುಂದರವಾಗಿ ಗೋಚರಿಸುತ್ತಿದೆ! ಆ ಚಿಪ್ಪು ರೂಹುಗೊಂಡದ್ದೆಂದು? ಒಂದೇ ಒಂದು ಕ್ಷಣದ ಹಿಂದೆ ನಾನು ಕಣ್ಣೆತ್ತಿ ನೋಡಿದೆ; ಬೆಳ್ಳಿಮೋಡದ ಎರಡು ಗೆರೆ ಹೊರತಾಗಿ ಬೇರೆ ಕುರುಹೇ ಅಲ್ಲಿರಲಿಲ್ಲ. ಅಂಥದೇ ಅಗೋಚರ ರೀತಿಯಲ್ಲಿ ನನ್ನ ಜೀವನ ದೃಷ್ಟಿಯೂ ಬದಲಾವಣೆಗೊಂಡಿದೆ.'

ಅವನು ಹುಲ್ಲುಗಾವಲನ್ನು ತೊರೆದು, ಹೆದ್ದಾರಿಯ ಮೂಲಕ ಹಳ್ಳಿಯ ಕಡೆಗೆ ನಡೆದನು. ಗಾಳಿ ಯೆದ್ದಿತು; ಬೂದು ಬಣ್ಣದ ಆಕಾಶದಲ್ಲಿ ಮಂಕು ಕವಿಯಿತು. ಕತ್ತಲೆಯಮೇಲೆ ಬೆಳಕಿನ ಗೆಲ್ಲವನ್ನು ಸಾರುವ ಮುನ್ನ, ಸಾಮಾನ್ಯವಾಗಿ ಸೂರ್ಯೋದಯಕ್ಕೆ ಮುಂಚಿತವಾಗಿ ಕಾಣಿಸಿಕೊಳ್ಳುವ ಕಾವಳ ಕ್ಷಣಕಾಲ ತಲೆದೋರಿತು.

ಲೆವಿನ್ ಸರಸರನೆ ನಡೆದನು. ಅವನ ಕಣ್ಣು ನೆಲವನ್ನು ನೋಡುತ್ತಿದ್ದುವು. ಅವನ ಭುಜ ಚಳಿಯಿಂದ ಮುದುರಿಕೊಂಡಿದ್ದುವು. 'ಏನದು ? ಯಾರೊ ಬರುವಂತಿದೆ ?' ಎಂದವನು ಬಂಡಿಯ ಘಂಟಾನಾದವನ್ನಾಲಿಸುತ್ತ, ಮನಸ್ಸಿನಲ್ಲಂದುಕೊಂಡನು. ಅವನು ತಲೆಯೆತ್ತಿದನು. ಸುಮಾರು ನಲವತ್ತು ಹೆಜ್ಜೆ ದೂರದಲ್ಲಿ, ನಾಲ್ಕು ಕುದುರೆ ಹೂಡಿದ ಬಂಡಿಯೊಂದು ಹುಲ್ಲಿಡಿದ ಹೆದ್ದಾರಿಯಲ್ಲಿ ತನ್ನ ಕಡೆಗೆ ಬರುತ್ತಿತ್ತು. ರಸ್ತೆಯ ಕೊರಕಲುಗಳಲ್ಲಿ ಕುದುರೆಗಳು ಮೂಕಿಯ ಕಡೆಗೆ ಒರಗುತ್ತಿದ್ದುವು; ಆದರೆ ಪೆಟ್ಟಿಗೆಯ ಮೇಲೆ ಪಕ್ಕಕ್ಕಾದಂತೆ ಕುಳಿತಿದ್ದ ಕುಶಲ ಸಾರಥಿ, ಕುದುರೆಗಳು ಕೊರಕಲಕಡೆಗೆ ಜಾರದಂತೆ ಬಿಗಿಯಾಗಿ ಹಿಡಿದೆಳೆಯಲು, ಬಂಡಿಯ ಗಾಲಿಗಳು ಹೊರ ಏಣುಗಳ ಮೇಲೆ ಸಾಫಾಗಿ ಸರಿದುವು.

ಲೆವಿನ್ ನಿರ್ಲಿಪ್ತನಾಗಿ ಬಂಡಿಯ ಚಲನೆಯನ್ನು ನೋಡುತ್ತಿದ್ದನು; ಬಂಡಿಯೊಳಗೆ ಯಾರಿರಬಹುದೆಂಬುದರ ಬಗ್ಗೆ ನಿಶ್ಚಿಂತನಾಗಿ ಅವನು ಆ ಕಡೆಗೆ ಕಣ್ಣು ಹಾಯಿಸಿದನು.

ಒಂದು ಮೂಲೆಯಲ್ಲಿ ಮುದುಕಿಯೊಬ್ಬಳು ತೂಕಡಿಸುತ್ತಿದ್ದಳು. ಅದೇ ತಾನೆ ಎಚ್ಚೆತ್ತ ತರುಣಿ ಎರಡು ಕೈಗಳಲ್ಲಿಯೂ ಬಿಳಿಟೊಪ್ಪಿಗೆಯ ಪಟ್ಟಿಗಳನ್ನು ಹಿಡಿದುಕೊಂಡು ಕಿಟಕಿಯ ಬಳಿ ಕುಳಿತಿದ್ದಳು. ಅವಳ ಮುಖದಲ್ಲಿ ಆಲೋಚನಾಯುಕ್ತ ಪ್ರಕಾಶ ತುಂಬಿ ತುಳುಕುತ್ತಿತ್ತು: ಲೆವಿನ್ ಅದೇ ತಾನೆ ತ್ಯಜಿಸಿದ್ದ ಸುಸಂಸ್ಕೃತ ಸಂಕೀರ್ಣ ಚಿಂತನಾಮಯ ಜೀವನದ ಅಪಾರದಂತಿದ್ದ ಅವಳು ಅವನಾಚೆಗೆ ದಿಗಂತದಲ್ಲಿ ಅರಳುತ್ತಿದ್ದ ಸ್ವರ್ಗೀಯ ಸುಂದರ ಸೂರ್ಯೋದಯವನ್ನು ನೋಡುತ್ತಿದ್ದಳು.

ಆ ದೃಶ್ಯ ಮರೆಯಾಗುತ್ತಿದ್ದಂತೆ, ಅವಳ ನಿಷ್ಕಪಟ ದೃಷ್ಟಿ ಅವನ ಕಡೆಗೆ ಹರಿಯಿತು. ಅವಳವನನ್ನು ಗುರುತಿಸಿದಳು; ಆಶ್ಚರ್ಯಕರವಾದ ಆನಂದದಿಂದ ಅವಳ ಮುಖ ಜಾಜ್ವಲ್ಯಮಾನವಾಯಿತು,

ಅವಳಾರೆಂಬುದರ ಬಗ್ಗೆ ಅನುಮಾನ ಉಳಿಯುವಂತಿರಲಿಲ್ಲ. ಅವಳ ಕಣ್ಣುಗಳನ್ನು ಹೋಲುವ ಕಣ್ಣುಗಳನ್ನು ಬೇರೆಲ್ಲಿಯೂ ಕಂಡಿರಲಿಲ್ಲ. ಜಗತ್ತಿನ ಬೇರೆ ಯಾವುದೊಂದು ಜಂತುವೂ ಅವನ ದೃಷ್ಟಿಗೆ ಸಮಸ್ತ ಜ್ಯೋತಿಯ ಆಕರವಾಗಿರಲಿಲ್ಲ, ಸಮಸ್ತ ಜೀವನದ ಚೈತನ್ಯವಾಗಿರಲಿಲ್ಲ. ಅವಳು ಕಿಟಿಯಲ್ಲ, ಕಿಟ್ಟಿ ಬೇರೆಯಲ್ಲ. ರೈಲು

ನಿಲ್ದಾಣದಿಂದ ಎರ್ಗುಷೋವೊಗೆ ಅವಳು ಬರುತ್ತಿದ್ದಳೆಂಬುದು ಒಡನೆಯೇ ಅವನಿಗೆ ಗೊತ್ತಾಯಿತು. ನಿದ್ದೆಯಿಲ್ಲದ ರಾತ್ರಿಯಲ್ಲಿ ಅವನ ಮನಸ್ಸನ್ನು ಕಡಡಿದ್ದ ಆಲೋಚನೆಗಳು ಮತ್ತು ಅವನು ಮಾಡಿಕೊಂಡಿದ್ದ ಸಂಕಲ್ಪಗಳು ಶೂನ್ಯತೆಯಲ್ಲಿ ಕರಗಿ ಹೋದುವು. ರೈತ ಕನ್ಯೆಯನ್ನು ಮದುವೆಯಾಗುವ ಕನಸನ್ನು ನೆನೆದಾಗ ಅವನ ಧಮನಿ ಧಮನಿಗಗಲ್ಲಿ ಭಯದ ಅಲೆ ಸಂಚರಿಸಿತು. ಇತ್ತೀಚೆಗಿನ ತಿಂಗಳುಗಳಲ್ಲಿ ಅವನಿಗೆ ಅಪಾರ ಯಾತನೆಯುಂಟುಮಾಡಿದ್ದ ಸಮಸ್ಯೆಯ ಪರಿಹಾರ ಅಲ್ಲಿ ಮಾತ್ರ–ಬೇಗ ಬೇಗ ಹಿಂದೆ ಸರಿಯುತ್ತಿದ್ದ ಆ ಗಾಡಿಯಲ್ಲಿ ಮಾತ್ರ–ಮೂರ್ತಗೊಂಡಂತಿತ್ತು.

ಅವಳು ಮತ್ತೆ ಹೊರಗೆ ಕಣ್ಣಾಡಿಸಲಿಲ್ಲ. ಬಂಡಿಯ ಕೀಲುಗಳ ಕಿರುಕಲು ಸದ್ದು ನಿಂತುಹೋಗಿತ್ತು; ಗಂಟೆಗಳ ಟಿಂಟಿಣಿ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಹಳ್ಳಿಯ ಮೂಲಕ ಬಂಡಿ ಹಾಯ್ದುಹೋಗುತ್ತಿತ್ತೆಂದು ನಾಯಿಗಳ ಬಗುಳಿಂದ ವ್ಯಕ್ತವಾಗುತ್ತಿತ್ತು. ಸುತ್ತಲಿನ ಖಾಲಿ ಹೊಲಗಳು, ಎದುರುಗಡೆಯಿದ್ದ ಹಳ್ಳಿ, ನಿರ್ಜನ ರಸ್ತೆಯಲ್ಲಿ ಒಬ್ಬೊಂಟಿಗನಾಗಿ ನಡೆಯುತ್ತಿದ್ದ ತಾನು ಹೊರತಾಗಿ. ಇಡೀ ಜಗತ್ತೇ ಶೂನ್ಯವಾಗಿತ್ತು.

ಮೊದಲು ತನ್ನ ಮನಸ್ಸಿಗೆ ಆನಂದವುಂಟುಮಾಡಿದ, ರಾತ್ರಿಯ ಭಾವನಾಲೋಚನೆಗಳಿಗೆ ಸಂಕೇತವಾಗಿದ್ದ ಬೆಳ್ಳಿ ಮೋಡವನ್ನು ನೋಡುವ ಆಸೆಯಿಂದ ಅವನು ಆಗಸದ ಕಡೆಗೆ ತಲೆಯೆತ್ತಿ ನೋಡಿದನು. ಶುಕ್ತಿಕೆಯನ್ನು ಹೋಲುವಂತಿದ್ದ ಯಾವೊಂದು ವಸ್ತುವೂ ಬಾನಲ್ಲಿರಲಿಲ್ಲ. ದುರ್ಗಮವಾದ ಆ ಔನ್ನತ್ಯದಲ್ಲಿ ನಿಗೂಢತಮ ಪರಿವರ್ತನೆಯೊಂದು ನಡೆದಿತ್ತು. ಶುಕ್ತಿಕೆಯ ಕುರುಹು ಲವಲೇಶವಾದರೂ ಉಳಿದಿರಲಿಲ್ಲ. ಅದರ ಬದಲಾಗಿ ಸಣ್ಣ ಸಣ್ಣ ತುಂಡುಗಳಾಗಿ ಛಿದ್ರವಿಚ್ಛಿದ್ರವಾಗುತ್ತಿದ್ದ ಬಿಳಿಯ ಮೋಡಗಳ ಉಣ್ಣೆ ಜಮಖಾನ ಅರ್ಧಾಕಾಶವನ್ನು ಕವಿದುಕೊಂಡಿತ್ತು. ನೀಲಿವರ್ಣದ ಆಕಾಶ ರಗರಗಿಸುತ್ತಿತ್ತು; ಮೊದಲಿನಂತೆ ಅದು ಕೋಮಲ ಭಾವದಿಂದ ಹಾಗೂ ದುರ್ಗಮ ದೂರದಿಂದ ಅವನ ಪ್ರಶ್ನದೃಷ್ಟಿಯನ್ನು ಸಂಧಿಸುತ್ತಿತ್ತು.

'ಇಲ್ಲ. ಆ ಸರಳ ಶ್ರಮಜೀವನ ಎಷ್ಟೇ ಒಳ್ಳೆಯದಾದರೂ, ಅದು ನನಗಲ್ಲ. ನಾನವಳನ್ನು ಪ್ರೀತಿಸುತ್ತೇನೆ' ಎಂದವನು ತನ್ನೊಳಗೆ ತಾನಂದುಕೊಂಡನು.

೧೩

ಅವನ ಸಾಮಾನ್ಯ ಸ್ವಭಾವಕ್ಕೆ ವಿರುದ್ಧವಾದ ದೌರ್ಬಲ್ಯವೊಂದು ಮೇಲೆಮೇಲೆ ಉದಾಸೀನವಾಗಿ ವಿವೇಕಿಯಾಗಿ ಕಾಣುತ್ತಿದ್ದ ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಕರೆನಿನ್‌ನಲ್ಲಿ ಮನೆಮಾಡಿಕೊಂಡಿತ್ತೆಂದು ಹತ್ತಿರದಿಂದ ಅವನನ್ನು ನೋಡಿದವರಿಗೆಲ್ಲ ಗೊತ್ತಿತ್ತು. ಮಕ್ಕಳ ಅಥವಾ ಹೆಂಗಸರ ಅಳುವನ್ನು ನೋಡಿದಾಗ ಅಥವಾ ಕೇಳಿದಾಗ ಅವನ ಹೃದಯ ಹಿರಡಿದಂತಾಗುತ್ತಿತ್ತು; ಕಣ್ಣೀರನ್ನು ಕಂಡೊಡನೆ ಕರುಳು ಕಿತ್ತು ಬಂದಂತಾಗಿ ಅವನ ಆಲೋಚನಾಶಕ್ತಿಯೆಲ್ಲ ಉಡುಗಿಹೋಗುತ್ತಿತ್ತು. ಅವನ ಕಾರ್ಯದರ್ಶಿಗೂ ಕಚೇರಿಯ ಮೇಲ್ವಿಚಾರಕನಿಗೂ ಇದೆಲ್ಲ ಗೊತ್ತಿತ್ತು. ಕಣ್ಣೀರು ಹಾಕಿಕೊಂಡದ್ದಾದರೆ ಎಲ್ಲವನ್ನು ಕಳೆದುಕೊಳ್ಳಬೇಕಾದೀತೆಂದು ಅವನಿಗೆ ಅರ್ಜಿಗುಜರಾಯಿಸುತ್ತಿದ್ದ ಹೆಂಗಸರಿ

ಗವರು ಎಚ್ಚರಿಕೆ ನೀಡುತ್ತಿದ್ದರು. 'ಅವರಿಗೆ ಕೋಪ ಬರುತ್ತದೆ. ನಿಮ್ಮ ಮನವಿಗವರು ಕಿವಿಗೊಡುವುದಿಲ್ಲ' ಎಂದವರು ಹೇಳುತ್ತಿದ್ದರು. ಕಣ್ಣೀರಿನ ದೃಶ್ಯ ಕಂಡಾಗಲೆಲ್ಲ ಕರೆನಿನ್‌ನ ಬಗೆ ಕದಡಿ, ಸಿಡುಕಿನ ಸಿಡಿತದಲ್ಲಿ ಅಭಿವ್ಯಕ್ತಗೊಳ್ಳುತ್ತಿದ್ದುದೂ ನಿಜ. 'ನಾನೇನೂ ಮಾಡಲಾರೆ—ಏನೇನೂ ಸಾಧ್ಯವಿಲ್ಲ! ದಯೆಯಿಟ್ಟು ನನ್ನ ಕಚೇರಿಯಿಂದ ಹೊರಗೆ ಹೋಗು' ಎಂದವನು ಅಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಅಬ್ಬರಿಸುತ್ತಿದ್ದನು.

ಜೂಜಿನಿಂದ ಹಿಂತಿರುಗುವಾಗ, ತನ್ನ ಮತ್ತು ವ್ರಾನ್ಸ್ಕಿಯರ ನಡುವಣ ಸಂಬಂಧ ಗಳನ್ನು ಅವನಿಗರುಹಿ, ತನ್ನ ಕೈಗಳಿಂದ ಮುಖ ಮುಚ್ಚಿಕೊಂಡು ಅಶ್ರುಲೋಚನೆ ಯಾಗಿ ಗೋಳ್ಗರೆದಳು. ಅವಳ ಆ ವರ್ತನೆಗಾಗಿ ಅವನ ಮೈಮನಗಳೆಲ್ಲ ಕೋಪಾಗ್ನಿ ಯಿಂದ ಉರಿಯುತ್ತಿದ್ದರೂ, ತನ್ನ ಭಾವೋದ್ರೇಕ ಕಣ್ಣೀರಿನ ಕೋಡಿಯಾಗಿ ಹರಿಯು ತ್ತಿದ್ದುದರ ಪರಿವೆಯೂ ಅವನಿಗಿತ್ತು. ಆಗಿನ ಪರಿಸ್ಥಿತಿಯಲ್ಲಿ ಭಾವೋದ್ರೇಕ ಪ್ರದರ್ಶನ ತರವಲ್ಲವೆಂದು ಬಗೆದ ಅವನು ಬದುಕಿನ ಚಿಹ್ನೆಗಳನ್ನದುಮಲು ಪ್ರಯತ್ನಿಸಿದನು; ಅವನು ಅಲುಗಾಡಲಿಲ್ಲ; ಅವಳ ಕಡೆಗೆ ನೋಡಲಿಲ್ಲ; ವಿಚಿತ್ರವಾದ ಮೃತ್ಯು ಸದೃಶ ಕಠೋರ ಭಾವ ಅವನ ಮುಖದ ಮೇಲೆ ಸುಳಿದಾಡಿತು; ಅದು ಅನ್ನಾಳ ಜೀವವನ್ನೆಲ್ಲ ಅಲುಗಾಡಿಸಿತು.

ಮನೆ ತಲುಪಿದಾಗ ಅವನು ನೆರವು ನೀಡಿ, ಅವಳನ್ನು ಕೆಳಗಿಳಿಸಿಕೊಂಡನು; ಪ್ರಯತ್ನ ಪೂರ್ವಕವಾಗಿ ತನ್ನನ್ನು ತಾನು ಸಂಯಮಿಸಿಕೊಂಡು, ಎಂದಿನ ಸೌಜನ್ಯ ದಿಂದ ಅವಳನ್ನು ಬೀಳ್ಕೊಳ್ಳುವಲ್ಲಿ, ಯಾವ ರೀತಿಯಲ್ಲಿಯೂ ತನ್ನನ್ನು ಬಂಧಿಸದ ಮಾತುಗಳನ್ನುಸುರುವುದರಲ್ಲಿ ಅವನು ಯಶಸ್ವಿಯಾದನು. ಮಾರನೆಯ ದಿನ ತನ್ನ ನಿರ್ಧಾರವನ್ನು ತಿಳಿಸುವುದಾಗಿ ಅವನು ನುಡಿದನು.

ತನ್ನ ಕಠೋರತಮ ಸಂಶಯಗಳನ್ನು ದೃಢೀಕರಿಸಿದ ಮಡದಿಯ ತಪ್ಪೊಪ್ಪಿಗೆ ಅವನನ್ನು ಕಟುಯಾತನೆಗೆ ಗುರಿಮಾಡಿತು. ಅವಳ ಕಣ್ಣೀರಿಂದಾಗಿ ಬುಗ್ಗೆಯೊಡೆದ ಅನುಕಂಪೆ ಅವನ ಯಾತನೆಯನ್ನು ತೀಕ್ಷ್ಣಗೊಳಿಸಿತು. ಆದರೆ ಬಂಡಿಯಲ್ಲಿ ತಾನೊಬ್ಬನೇ ಉಳಿದಾಗ, ಅನುಕಂಪೆಯಿಂದ ಹಾಗೂ ತನ್ನನ್ನು ಇತ್ತೀಚೆಗೆ ಕಾಡುತ್ತಿದ್ದ ಸಂಶಯ ಮಾತ್ಸರ್ಯಗಳಿಂದ ಸಂಪೂರ್ಣ ಮುಕ್ತನಾದಂತೆ ತೋರಲಾಗಿ, ಅವನು ಆಶ್ಚರ್ಯ ಚಕಿತನಾದನು.

ಬಹುದಿನಗಳಿಂದ ನೋವುಕೊಡುತ್ತಿದ್ದ ಹಲ್ಲನ್ನು ಕೀಳಿಸಿದ ವ್ಯಕ್ತಿಯಂತೆ ಅವನು ಸಮಾಧಾನ ತಳೆದನು. ತನ್ನ ತಲೆಗಿಂತಲೂ ಭಾರವಾಗಿ, ದೊಡ್ಡದೊಂದು ಪರ್ವತವನ್ನು ಹೊತ್ತಂತೆ ಭಯಂಕರ ಯಾತನೆಯನ್ನು ಕೊಡುತ್ತಿದ್ದ, ಆ ಹಲ್ಲನ್ನು ದವಡೆಯಿಂದ ಕಿತ್ತನಂತರ, ತನಗೊದಗಿದ ಸುಖವನ್ನು ಆ ವ್ಯಕ್ತಿ ನಂಬುವುದೆ ಕಷ್ಟವಾಗುತ್ತದೆ. ತನ್ನ ಇಡೀ ಬದುಕನ್ನು ನಂಜುಗೊಳಿಸಿದ್ದ, ತನ್ನೆಲ್ಲ ಆಲೋಚನೆಗಳ ಕೇಂದ್ರವಾಗಿದ್ದ ಆ ಹಲ್ಲು ತೊಲಗಿದನಂತರ ಸಹಜಸ್ಥಿತಿಗೆ ಮರಳಿ, ಹಲ್ಲನ್ನು ಮರೆತು ಬೇರೆ ವಿಷಯಗಳ ಕಡೆಗೆ ಗಮನ ಹರಿಸುವಂತಾದಾಗ ಅವನಿಗೆ ಸ್ವರ್ಗವೇ ಎಟುಕಿದಂತಾಗುತ್ತದೆ. ಕರೆನಿನ್‌ಗಾದದ್ದೂ ಈ ಸುಖಾನುಭವವೇ. ಯಾತನೆ ವಿಚಿತ್ರವಾಗಿತ್ತು, ಭಯಂಕರವಾಗಿತ್ತು; ಆದರದು ಮರೆತುಹೋಗಿತ್ತು; ಈಗವನು ತನ್ನ ಮಡದಿಯ ಸಂಬಂಧವಾದ ಚಿಂತೆಗಳಿಗೆ ವಿರಾಮ ಹಾಕಿ, ಬೇರೆ ಕಡೆಗೆ ಗಮನ ಹರಿಸುವಂಥ ಅವಕಾಶವೊದಗಿತ್ತು.

(ಮುಂದುವರಿಯುವುದು)

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

**ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ**

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.